ಶ್ರೀರಂಭಾಜಂಭ ಮಂಗಲಸ್ತೋತ್ರಾವಲಿ	(೧೧ನೆಯ ಆವೃತ್ತಿ)		೩ ಆಣೆ
ಶ್ರೀರೇಣುಕಾಚಾರ್ಯಶತಕ	(೩ನೆಯ ಆವೃತ್ತಿ)		೪ ಆಣೆ
ಶ್ರೀರುದ್ರಮುನಿಶಿವಾಚಾರ್ಯಶತಕ	—		೨ ಆಣೆ
ಶಿವಕಥಾವಿಲಾಸ	—		೨ ಆಣೆ
ವಿಜಯನಗರ ಸಾಮ್ರಾಜ್ಯವೂ ಶ್ರೀರೇಣ ಕಾಚಾರ್ಯರೂ			೨ ಆಣೆ
ಬಿಲ್ವಮಾಹಾತ್ಮ್ಯ	(೩ನೆಯ ಆವೃತ್ತಿ)	—	೨ ಆಣೆ
ಸಂಕ್ಷಿಪ್ತ ಶಿವಪೂಜಾವಿಧಿ	(೧೦ನೆಯ ಆವೃತ್ತಿ)		೩ ಆಣೆ
ಅಷ್ಟಾವರ್ಣಿಜಕತ್ವದರ್ಪಣ	(೩ನೆಯ ಆವೃತ್ತಿ)		೩ ಆಣೆ
ಪಂಚಾಚಾರ್ಯಪ್ರಕಾಶ	—		೩ ಆಣೆ
ಪಂಚಾಚಾರ ಪ್ರಕಾಶಿಕಾ	—	—	೩ ಆಣೆ
ಶ್ರೀಗುರುತತ್ತ್ವಪ್ರದರ್ಶಕ	(೩ನೆಯ ಆವೃತ್ತಿ)		೩ ಆಣೆ
ಶ್ರೀಪತಿಪಂಡಿತಾರಾಧ್ಯರ ಶಾಲಿನಿರ್ಣಯ	—		೪ ಆಣೆ
ವೀರಶೈವಾಚಾರವಿಧಿ	(೩ನೆಯ ಆವೃತ್ತಿ)		೪ ಆಣೆ
ಲಿಂಗಧಾರಣವಿಧಿ			೪ ಆಣೆ
ಗರ್ಭಾಧಾನವಿಧಿ			೪ ಆಣೆ
ವಿವಾಹವಿಧಿ	(೪ನೆಯ ಆವೃತ್ತಿ)		೪ ಆಣೆ
ವೀರಶೈವ ಸ್ಯಾಯಶ್ಚಿತ್ತವಿಧಿ			೪ ಆಣೆ
ವೀರಶೈವ ಅಂತ್ಯೇಷ್ಟಿ ಶ್ರಾದ್ಧವಿಧಿ			೪ ಆಣೆ
ವೈದಿಕವಾಜ್ಮಯವಿಮರ್ಶ			೪ ಆಣೆ
ಶ್ರೀಜಗದ್ಗುರು ಸೂಜಾಚಾರ್ಯರ ಸಾಮಾನ್ಯ	(೩ನೆಯ ಆವೃತ್ತಿ)	—	೪ ಆಣೆ
ಶಕ್ತಿವಿಶಿಷ್ಟಾದ್ವೈತಸಿದ್ಧಾಂತ			೪ ಆಣೆ
ಶ್ರೀವೀರಪಸಿಕ್ಷಂಗ್ರಿಕಃ	(ಸಂಸ್ಕೃತ)		೬ ಆಣೆ
ಸಜ್ಜನಾಶ್ರಮವಿಮರ್ಶತತ್ತ್ವಸ್ಫೋಟನ	(೩ನೆಯ ಆವೃತ್ತಿ)	—	೬ ಆಣೆ
ರೇಣುಕಗೀತೆ ಅರ್ಥಾತ್ ಸಿದ್ಧಾಂತಶಿಖಾಮಣಿ	(ಮೂಲಮಾತ್ರ)		೮ ಆಣೆ
ಶಿವಾದ್ವೈತವರಿಧಾಸ	(ಸಂಸ್ಕೃತ)	—	೮ ಆಣೆ
ವೀರಶೈವಮಹಾತ್ಮರು		—	೮ ಆಣೆ
ಅಷವಧ್ಯಾಂತವಿವಾಳ	(೩ನೆಯ ಆವೃತ್ತಿ)	—	೮ ಆಣೆ
ಆಗಮಪರಿಜ್ಞಾನ			೮ ಆಣೆ
ಪಂಡಿತ ಶ್ರೀಕಾಶೀನಾಥಶಾಸ್ತ್ರುಲವಾರಿ ಭಾಷಣಮು	(ತೆಲುಗು)		೮ ಆಣೆ
ಶ್ರೀಜಗದ್ಗುರು ಶಿವಾನಂದವಿಜಯ			೮ ಆಣೆ
ಶ್ರೀಜಗದ್ಗುರು ವಿಶ್ವಕರ್ಣವಿಜಯ ಪಲ್ಲವ್ಯತಮಾಲಿಕಾ			೮ ಆಣೆ
ಕನ್ನಡ ನ್ಯಾಯತತ್ತಕಮ್			೮ ಆಣೆ
ಮಕುಟಾಗಮ			೮ ಆಣೆ
ಕಾರಣಾಗಮಃ			೧೨ ಆಣೆ
ಸೂಕ್ಷ್ಮಾಗಮಃ			೧೨ ಆಣೆ
ಚಂದ್ರಜ್ಞಾನಾಗಮಃ			೧ ರೂ
ಸಿದ್ಧಾಂತಸಾರಾವಳಿ	(ಶ್ರೀರೋಚನತಿವಾಚಾರ್ಯಕೃತ)		೧೨ ಆಣೆ
ಶಿವಾಸೂತ್ರಸಿದ್ಧಾಂತದರ್ಪಣ			೧೨ ಆಣೆ
ಶ್ರೀಜಗದ್ಗುರು ಪಂಚಾಚಾರ್ಯರ ಪ್ರಾಚೀನತ್ವ			೧ ರೂ
ಮಾಹೇಶ್ವರ ದೀಕ್ಷಾವಿಧಿ	(೩ನೆಯ ಆವೃತ್ತಿ)		೧ ರೂ
ಸಜಿತ್ರ ರೇಣುಕವಿಜಯ	(೩ ನೆಯ ಆವೃತ್ತಿ)		೧ ರೂ.
ಶ್ರೀಜಗದ್ಗುರು ಪಂಚಾಚಾರ್ಯ ಸ್ತೋತ್ರರತ್ನಾಕರ			೧ ರೂ.
ವೀರಮಾಹೇಶ್ವರಚಂದ್ರಿಕೆ			೧ ರೂ
ವೈದಿಕಶಿವಪೂಜಾವಿಧಿ	(ವೈದಿಕಕ್ರಿಯಯುಕ್ತ ಸಾದರು, ೩ನೆಯ ಆವೃತ್ತಿ)		೧೫ ರೂ
ಶ್ರೀಕರಭಾಷ್ಯಂ	(೨ ನೆಯ ಆವೃತ್ತಿ)		೧೫ ರೂ
ಶಿಷ್ಯರ ಮನೆಗಳ ರಿಜಿಸ್ಟರ್ ಬುಕ್			೧೫ ರೂ
ರೇಣುಕವಿಜಯ ಮಹಾಪುರಾಣ	(೧೪ನೆಯ ಭಾಮಿನೀಷಟ್ಪದಿ)		೨ ರೂ.
ವೀರಶೈವಧರ್ಮ	(೫ನೆಯ ಆವೃತ್ತಿ, ೪೦ ಮಹತ್ವದ ಫೋಟೋಗಳಿರುವುವು		೨ ರೂ.
ಸಿದ್ಧಾಂತಶಿಖಾಮಣಿ	(೧೪ನೆ ವೀರಾಗಮಸಹಿತ)		೩॥ ರೂ.
A brief life-sketch of Pandit Sri Kashinatha Shastriji, (*English*)			4 As.
The Philosophical Aspect of Viraśaivism (*English*)			8 As.
Speeches by Pandit Shri Kashinatha Shastriji (*English*)			12 As
ವೀರಶೈವಧರ್ಮ	(ಮರಾಠಿ)		೬. ೧-೮-೦
ಸಜ್ಜನಿಕಾಶ್ರಮಕಾರಿಕಾ	(ಸಂಸ್ಕೃತ)		೨ ಆಣೆ.

ಮ್ಯಾನೇಜರ್—ಶ್ರೀಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್, ಮೈಸೂರು.

Edited, Printed and Published by Brahmamathadhyaksha Sri Mahadevaiah at Sri Panchacharya Electric Press, Sayaji Rao Road, Mysore

REGISTERED No M 2266 ಶ್ರೀಜಗದ್ಗುರು ಪಂಚಾಚಾರ್ಯಾಭ್ಯಾಂ ಪ್ರಕಟಿತಂ REGISTERED No M 2266

ಪಂಚಾಚಾರ್ಯಪ್ರಭಾ

ಪ್ರತಿ ಸೋಮವಾರ ಮೈಸೂರು ನಗರದಲ್ಲಿ ಪ್ರಕಟಿಸಲ್ಪಡುವುದು.

ಪಂಚಾಸ್ಯಾಸನಸಂಭವಾಚಲಗುರು ಪಂಚಾಸ್ಯಶೀಕ್ಷಾಧಿಪರ್ । ಪಂಚಶ್ರೀಕವಿನಾಥಕರ್ ಪರಕರಶ್ರೀಪಂಚಲಿಂಗೇಶ್ವರ್ ॥
ಪಂಚಾಚಾರವಿಧಾನಮುಕರ್ ಪರಿಲಸತ್ಪಂಚಾಕ್ಷರೀಮೋಹರ್ ಪಂಚಾಚಾರ್ಯಜಗದ್ಗುರೂತ್ತಮವರ್ ಪಾಲಿಪ್ಪುದೀಲೋಕಮುಂ ॥

ಸಂಸ್ಥಾಪಕರು—ಶಾಗಸೂರು ಶ್ರೀಮತ್ಸಿದ್ಧಾಶ್ರಮಸ್ಥ ಶ್ರೀ ಶಾಂತವೀರಶಾಸ್ತ್ರಿಗಳವರು.

ಪ್ರಸ್ತುತ ಪಂಪಾ ೩ ರೂ.] ಸಂಪಾದಕರು—ಶಾಗಸೂರು ಶ್ರೀಮತ್ಸಿದ್ಧಾಶ್ರಮಸ್ಥ ಶ್ರೀ ಮಹಾದೇವಯ್ಯನವರು [ವಿ ಬಿ ಖರ್ಚು ಸೇರಿ ೩।೦ರೂ ೧೦ ಆ.

ಸಂಪುಟ ೩೦] ಸೋಮವಾರ ತಾ॥ ೨೫ ನೇ ಫೆಬ್ರುವರಿ ೧೯೫೭ [ಸಂಚಿಕೆ ೪೧

ಪತ್ರವ್ಯವಹಾರ

[ಜಾತ್ಯಧಿಕಾರಿಯ ಅಧಿಕಾರ್ಯ ಪತ್ರವ ಲೇಖನ ಗಳಿಗೆ ಪತ್ರಿಕಾಕರ್ತರು ಆಪಾದ್ಯಾರ್ಥರ್ಪ ಎಂಬ ವಿಷಯ ವನ್ನು ಸದಾರ್ಯ ಲಕ್ಷ್ಯದಲ್ಲಿಡಿಸಿಕ್ಕುದು. —ಸಂ.]

ಶ್ರೀಜಗದ್ಗುರು ಸಿದ್ಧಲಿಂಗ ಶಿವಾಚಾರ್ಯರ ಜಯಂತೀಮಹೋತ್ಸವ

ಶಿವಮೊಗ್ಗಾ ತಾಲ್ಲೂಕು ಹಾರನಹಳ್ಳಿಯಲ್ಲಿರುವ ವೇ॥ ಗುಳ್ಳೀ ಶಿವರುದ್ರಶಾಸ್ತ್ರಿಗಳು ತಮ್ಮ ನಾಸಗೃಹ ದಲ್ಲಿ ಇದೇ ಮಾಘ ಬಹುಳ ೭ ಗುರುವಾರ ಪ್ರಾತಃ ಕಾಲ ಭವ್ಯಮುಹೂರ್ತದಲ್ಲಿ ಶ್ರೀ ಜಗ॥ ಸಿದ್ಧಲಿಂಗಶಿವಾ ಚಾರ್ಯ ಭಗವತ್ಪಾದರವರ ಧಾವಚಿತ್ರವನ್ನು ಮೂರ್ತ ಗೊಳಿಸಿ ಅಷ್ಟವಿಧಾರ್ಚನೆಗಳಿಂದ ಪೂಜಿಸಿ, ವಂದಿಸಿ, ನುತಿಸಿ, ಪ್ರಸಾದವಿನಿಯೋಗವಾಗಿ ಮಧ್ಯಾಹ್ನ ಸಂತ ರ್ಪಣೆ ಜರಿಸಿ, ಸಾಯಂಕಾಲ ಮಹಾಗುರುವಿಮರ್ಶ ಜೀವಿತ ಚರಿತ್ರೆಯನ್ನು ಬಹು ಸರಸವಾಗಿ ಓದಿಹೇಳಿ ಭಾವೈಕರತ್ವ ಅಪ್ಪಂದಗೊಳಿಸಿದರು.

ಓರ್ವ ಪ್ರತ್ಯಕ್ಷದರ್ಶಿ, ಹಾರನಹಳ್ಳಿ

ತಾಲೂಕು ಗ್ರಾಮಾಧಿಕಾರಿಗಳ ಪರಿಷತ್ತು ಹರಪನಹಳ್ಳಿ

ಹರಪನಹಳ್ಳಿ ತಾಲೂಕು ಗ್ರಾಮಾಧಿಕಾರಿಗಳ ಸಮ್ಮೇಳನವು ಇದೇ ೧೫ ನೇ ತಾರೀಖಿನಂದು ಆ ತಾಲೂಕಿನ ೧೫೦ ಪ್ರತಿನಿಧಿಗಳಲ್ಲದೆ ಬೇರೆ ತಾಲೂಕಿನ ಪ್ರತಿನಿಧಿಗಳಿಂದಲೂ ತುಂಬಲ್ಪಟ್ಟಿತ್ತು. ಶ್ರೀ ಆಜಾರಿ ವಿರಪಪ್ಪ ಎಂ. ಎಲ್. ಎ., ಇವರು ಸಭೆಯ ಉದ್ಘಾ ಟನೆ ಮಾಡಿದಮೇಲೆ ಡೋಣಪಳ್ಳಿಯ ಪದಸ್ಥರಾದ ಶ್ರೀ ಬೇಳೂರು ಸುಬ್ರಹ್ಮಣ್ಯಂ ಇವರ ಪೀಠಿಕೆಪರ ವಲ್ಲಿ ಕಾರ್ಯಕಲಾಪಗಳು ನಡೆದವು

ಗ್ರಾಮಾಧಿಕಾರಿಗಳ ಸಂಘದ ಪರವಾಗಿ ಶ್ರೀ ಮ. ಶೇಷಗಿರಿರಾಯರು ಸ್ವಾಗತ ಭಾಷಣ ಮಾಡುತ್ತ ಅಖಂಡ ಭಕ್ತಾಭಿಷ ರಾಜ್ಯದಲ್ಲಿರುವ ಗ್ರಾಮಾಧಿ ಕಾರಿಗಳ ಸ್ಥಿತಿಗಳು ಬಹಳ ವ್ಯತ್ಯಾಸದಲ್ಲಿರುವದೆಂದೂ ಪರದಲ್ಲಿಯೂ ಬಳ್ಳಾರಿ ಜಿಲ್ಲೆಯ ಗ್ರಾಮಾಧಿಕಾರಿ ಗಳ ಸ್ಥಿತಿಯು ವಿಶೇಷ ಅಪಾಸುಳಾಬದಲ್ಲಿರುವುದೆಂದೂ ತಪ್ಪಿಲ್ಲದೆ ಸರಿಯಾಗಿ ಎಲ್ಲ ಕಡೆಯಲ್ಲಿ ಒಂದೇ ಪರದ ಪ್ರಸ್ತಿತಿಯನ್ನು ಏರುಪಿಗೊಳಿಸಲು ಸರಕಾರವು ಮೇಲಾಪಡೆಯೆಂದೂ ಹೇಳುತ್ತ ಅದೇಕೆ ಸರಕಾರವು ಗ್ರಾಮಾಧಿಕಾರಿಗಳನ್ನು ನಿರ್ಲಕ್ಷ್ಯದಿಂದ ನೋಡು ತ್ತಿದೆಯೆಂದು ಹೇಳಿದರು. ನಂತರ ಶ್ರೀ ಬೇಳೂರು ಸುಬ್ರಹ್ಮಣ್ಯರವರೂ ಶ್ರೀ ಆಜಾರಿ ವಿರಪಪ್ಪನವರೂ ಗ್ರಾಮಾಧಿಕಾರಿಗಳ ಕುಂದುಕೊರತೆಗಳ ಬಗ್ಗೆ ತಮ್ಮ ವಿಚಾರಧೋರಣೆಯನ್ನು ವ್ಯಕ್ತಪಡಿಸಿ, ಬಹು ವಿಧಾಗ ನಂತರ ಒಂದು ಸೇರಿಕೆ ಗ್ರಾಮಾಧಿಕಾರಿಗಳ ವಿಶ ರೂಪಕೆಯನ್ನು ಸಾಧಿಸಲು ಒಂದು ಸಮಿತಿಯನ್ನು ನಿಯಮಿಸಿ ಆ ಮೂಲಕ ಉಪಯುಕ್ತ ಶಾಸನವನ್ನು ಮಾಡಲಾಗುವುದೆಂದು ಹೇಳಿದರು. ಅಮೇಲೆ ಈಗಿನ ಗೊತ್ತುವಳಿಗಳನ್ನು ಸಭೆಯು ಅಂಗೀಕರಿಸಿತು.

(೧) ಗ್ರಾಮಾಧಿಕಾರಿಗಳ ಮತ್ತು ಗ್ರಾಮ ಸೌಕ ರರ ವೇತನ ಮತ್ತು ತುಟ್ಟಿಭತ್ತೆಯನ್ನು ಪೆಬ್ರವಿ ತಾ॥ ೧-೧-೫೭ ರಿಂದ ಮಂಜೂರ ಮಾಡುವದು. (೨) ಗ್ರಾಮಾಧಿಕಾರಿಗಳು ಗೌರವಾರ್ಹ ಸೌಕರರೊ ಡನೆಗೂಡಿ ನಿರ್ಣಯಿಸಿಕೊಳುವದು. (೩) ಗ್ರಾಮಾಧಿಕಾರಿಗಳನ್ನು ಸರಕಾರಿ ಕೆಲಸಕ್ಕಾಗಿ ತಾಲೂಕು ಕಚೇರಿಗೆ ಕರೆಯಿಸಿದಲ್ಲಿ ಅವರಿಗೆ ಪ್ರಯಾಸ ಭತ್ತೆ ಮಂಜೂರ ಪಡಿಸುವುದು. (೪) ಗ್ರಾಮಾಧಿಕಾರಿ ಗಳ ಸಂಘದ ವತಿಯಿಂದ ತಾಲ್ಲೂ ಲೋಕಲ್‌ಬೋರ್ಡ ಮತ್ತು ತಾಸನ ಸಭೆಗಳ ಚುನಾವಣೆಗೆ ಅಭ್ಯರ್ಥಿ ಗಳಾಗಿ ನಿಲ್ಲಲು ಪರವಾನಿಗೆ ಕೊಡುವುದು

ತಮಿಳು ನಾಡು ಗ್ರಾಮಾಧಿಕಾರಿ ಸಂಘದವರ ಕೋರಿಕೆಯಂತೆ ಮಾರ್ಚ ೩೧ ನೇ ತಾರೀಖಿನೊಳ ಗಾಗಿ ಪಟ್ಟಿಭತ್ತೆಯನ್ನು ಸರಕಾರವು ಮಂಜೂರ ಮಾಡಿದ್ದಕ್ಕೆ ಮುಂದಿನ ಕ್ರಮವನ್ನು ಕೈಕೊಳ್ಳ ಬೇಕೆಂದೂ ಕೊಡೆಯಲ್ಲಿ ತೀರ್ಮಾನಿಸಿತು ಈ ಗೊತ್ತುವಳಿಗಳನ್ನು ಸಮರ್ಥಿಸುತ್ತ ಶ್ರೀ ರಾಯಸಂ ತಿಮಲಾಚಾರಯರು ಶ್ರೀ ಚಂದ್ರಶೇಖರಗೌಡರು ಮಾತ ನಾಡಿದನಂತರ ರಾತ್ರಿಗೆ ಅಧಿವೇಶನಗೊಂಡಿತು.

ಉಜ್ಜಯಿನೀ ಜಗದ್ಗುರುಗಳವರ ಪುಣ್ಯತಿಥಿ ಸಮಾರಂಭ

ಬಳ್ಳಾರಿ ಜಿಲ್ಲಾ ಹೂವಿನಹಡಗಲಿ ತಾಲೂಕು ಹಿರೇಹಡಗಲಿ ಪುರಾಣಿಕ ಮಠದ ಶ್ರೀ ವಿರೂಪಾಕ್ಷ ಶಾಸ್ತ್ರಿಗಳು ತಮ್ಮ ಮಠದಲ್ಲಿ ಮಹಾಮುಹೂರ್ತಾದಿ ಗಳಾಗಿದ್ದ ಉಜ್ಜಯಿನೀ ಪೀಠದ ಜ॥ ಸಿದ್ಧಲಿಂಗ ಶಿವಾಚಾರ್ಯ ಮಹಾಸ್ವಾಮಿಗಳವರ (೨೧) ನೇ ವರ್ಧಂತಿ ಪುಣ್ಯತಿಥಿ ಸಮಾರಂಭವನ್ನು ಈ ಮುಮ್ಮಾಪಿ ಸಂ॥ ರದ ಪುಃ ಬಿ ೪ ಶನಿವಾರ (ತಾ॥ ೧೯-೧-೫೭) ದಿವಸ ಸಕಲ ಭಕ್ತಮಹೋತ್ಸವಾದಿ ಮಂತ್ರಿಯೊಡನೆ ಗೂಡಿ ಅತ್ಯಂತ ಸಂಭ್ರಮದಿಂದ ನೆರವೇರಿಸಿದರು. ಮತ್ತು ಶ್ರದ್ಧಿವರ್ಧನದ ಪದ್ಧತಿಯಂತೆ ಈ ಗುರುವಾರದ ಭೌನಾಲ ಪುಣ್ಯತಿಥಿ ವಿಜಾಪರಣೆಯನ್ನು ಸರ್ವರೂ ಮಾಡಿರಿ ಎಂಬ ಸೂಚನಾ ಪತ್ರಪತ್ರಿಗೆಗಳನ್ನು ಹಂಚಿ ದ್ದರು. ೪ ದಿವಸ ತನಕ ಸಭಿಕರಿಗೆ ಮಹಾ ಶ್ರೀಗಳವರ ಮಹಿಮಾಧಿಗಳನ್ನೂ ಸಮಾಜ ಕಾರ್ಯ ಧುರೀಣರುಗಳಿಂದ, ಗುರುವರ್ಗ ಉದ್ಘಾಟ ಮಾಡಿದ ಅನೇಕ ವಿಷಯಗಳನ್ನು ಶಾಸ್ತ್ರಿಗಳಿಂದ ಚರ್ಚಾ ರೂಪದಿಂದ ಬಹಳ ಶ್ರೀಗಳ ಜೀವನಚರಿತ್ರೆಯನ್ನೂ ಪ್ರವಚನ ಮಾಡಿದರು. ಕೊನೆಯಲ್ಲಿ ಸಂಸ್ಥಾನದ ಪೂಜಾ ಕಾರ್ಯಗಳನ್ನು ನೆರವೇರಿಸಿದ ಶ್ರೀ ವಿವೇಕರಣ ಗುಡಿಮೂರ ದೊಡ್ಡ ಬಸವೇಶ್ವರ ಯಾತ್ರಾಮಹೋತ್ಸವ

ರಾಯಚೂರು ಜಿಲ್ಲಾ ತಾ॥ ಕುಷ್ಟಗಿ ಗುಡಮೂರ ಶಿವರಣ ಶ್ರೀ ದೊಡ್ಡ ಬಸವೇಶ್ವರ ಯಾತ್ರಾಮಹೋ ತ್ಸವವು ಪ್ರತಿವರುಷದಂತೆ ಮಾಘ ಬ॥ ೧ ರಿಂದ ಮಾಘ ಬ॥ ೧೪ ರ ವರೆಗೆ ಜರಗುತ್ತದೆ.

ಕಾರ್ಯಕ್ರಮಗಳು

ಮಾ॥ ಬ॥ ೧ ರಿಂದ ಮಾ॥ ಬ॥ ೧೧ ರ ವರೆಗೆ ಶ್ರೀ ದೊಡ್ಡ ಬಸವೇಶ್ವರ ಪುರಾಣ ಶ್ರೀ॥ ಜ॥ ಬ್ರಹ್ಮ ಶ್ರೀ ಗವಿಸಿದ್ಧೇಶ್ವರ ಸಂಸ್ಥಾನ ಹಿರೇಮಠದ ಸಿದ್ಧಲಿಂಗಶಿವಾಚಾರ್ಯರ ಅಮೃತಹಸ್ತದಿಂದ ಆಶೀರ್ವಚನದೊಂದಿಗೆ ಜರಗುತ್ತದೆ ಮಾ॥ ಬ॥ ೧೨ ಕ್ಕೆ ಕಳಸೋತ್ಸವ, ಗಣಾರಾಧನೆ, ಬಡಿಸುವರ ವಿವಾಹಮಹೋತ್ಸವ, ಅಯ್ಯಾಚಾರ ದಿಗಂ॥ ಮಾ॥ ಬ॥ ೧೩ ಕ್ಕೆ ರಥೋತ್ಸವ ಮಹಾ ಅನ್ನಸಂತರ್ಪಣೆ ಮಾ॥ ಬ॥ ೧೪ ಕ್ಕೆ ಬಂಡೀಲಿ ಕೋತ್ಸವ ಜಾಗರವಾ ಈ ಮಂಗಲ ಕಾರ್ಯಕ್ಕೆ ಸಕಲರೂ ಅಗಮಿಸಿ ಧನ್ಯರಾಗಬೇಕೆಂದು ಕೋರುತ್ತ,

ಗುಡಮೂರ ಸದ್ಭಕ್ತಮಂಡಳಿ.

ಸೂಸಲ ಗ್ರಾಮಪಂಚಾಯತಿ ಉದ್ಘಾಟನಾಮಹೋತ್ಸವ

ಗುಳ್ಯಾರ ಜಿಲ್ಲಾ ಚಿತ್ರದುರ್ಗ ತಾಲೂಕಿಗೆ ಸೇರಿಗಳ ಗ್ರಾಮದಲ್ಲಿ ದಿನಾಂಕ ೧೫-೨-೧೯೫೭ ಗುರುವಾರ ಸಾಯಂಕಾಲ ೮ ಘಂಟೆಗೆ ಶ್ರೀಮಾನ್ ಶೆಂಕರೆಪ್ಪ ಹಾಲೇಲ ತಮಲಾಪುರ ಎಂ. ಎಲ್. ಎ. ಇವರ ಅಮೃತಹಸ್ತದಿಂದ ಸೂಸಲ ಗ್ರಾಮಪಂಚಾಯತಿ ಅಧಿಕಾರಿಯ ಉದ್ಘಾಟನೆಯಾಯಿತು. ಪಟ್ಟಣಾಧಿ ಶ್ರೀಮಾನ್ ಗೋಪಾಳರಾವ ಭುಲೆ ಇವರ ಅಧ್ಯಕ್ಷ ತೆಯಲ್ಲಿ ಶ್ರೀಮಾನ್ ಪಾಪಾಜಿಪಲ್ಲಿ ಶೆಟ್ಟಿಗಾರ್ ಮತ್ತು ಶ್ರೀಮಾನ್ ಶಂಕರಪ್ಪ ಹಾಲೇಲ ತಮಲಾ ಪುರ ಇವರೀರ್ವರ ಸುತ್ಕಾರ್ಯ ಭಾಷಣಗಳಾದವು. ಈ ಪುಣ್ಯಕಾರ್ಯದಲ್ಲಿ ಗ್ರಾಮದ ಎಲ್ಲ ಜಾತಿಯ ಒಳ್ಳೇ ಉತ್ಸಾಹಪರಿಶ್ರಮಿಗಳಾಗಿ ಕಾರ್ಯಕ್ರಮವನ್ನು ಜಯಪ್ರದವನ್ನಾಗಿ ಮಾಡಿದರು.

ಪಂಚಾಯತ ಪರಿಷತ್ತುಗಳು :—

೧. ಸರಪಂಚ–ವೀರಭದ್ರಪ್ಪಾ ಮಲ್ಲೇಶಪ್ಪಾ ಪಟ್ಟೇದ, ೨. ಉಪಸರಪಂಚ–ಶರಣಪ್ಪಾ ಶಾಕ್ಷಿ, ೩. ಹಿರಿಭದ್ರಪ್ಪಾ ಮಾಲೀ, ೪. ವಿಶ್ವಾಮಪ್ಪಾ ಮುಷ್ಟಿದ, ೫. ಮಾಳೆಳಾವ ರಮಲಾಪುರ, ೬. ರೇಪಣಸಿದ್ದಪ್ಪಾ ಬಿಲ್ಲಾ, ೭. ಬಸಪಂಪಾವ ಮಾಳೆ ಕಾರ, ೮. ಕಾಟಪ್ಪಾ ಪೂಜಾರ.

ಶ್ರೀಜಗದ್ಗುರು ಪಂಡಿತಾರಾಧ್ಯ ವಿಶ್ವಾರಾಧ್ಯರ ಜಯಂತೀಮಹೋತ್ಸವ

ಮಹಾಶಿವರಾತ್ರಿ

ದುರ್ಮುಖಿನಾಮ ಸಂವತ್ಸರ ಮಾಘ ಬ|| ೧೩ ಬುಧವಾರ (೨೭-೨-೧೯೫೭)

ಭರತಖಂಡದಲ್ಲಿರುವ ಸಮಸ್ತವೀರಶೈವರು ಮಹಾಶಿವರಾತ್ರಿಯ ದಿವಸ ಶ್ರೀಜಗದ್ಗುರು ಪಂಡಿತಾರಾಧ್ಯರ ಹಾಗೂ ಶ್ರೀಜಗದ್ಗುರು ವಿಶ್ವಾರಾಧ್ಯರ ಜಯಂತೀಮಹೋತ್ಸವವನ್ನು ಅತ್ಯಂತ ವೈಭವದಿಂದ ನೆರವೇರಿಸಿ ಧನ್ಯರಾಗಬೇಕು. ಮತಸ್ಥಾಪನಾಚಾರ್ಯರ ಜಯಂತಿಗಳನ್ನು ಮಾಡುವದೇ ಅಸ್ಮಿಕಮತಾನುಯಾಯಿಗಳ ಮುಖ್ಯ ಧರ್ಮವಾಗಿದೆ. ಮತಸ್ಥಾಪನಾಚಾರ್ಯರ ಜಯಂತಿಯನ್ನು ದೊಡ್ಡ ಹಬ್ಬದಂತೆ ಅತ್ಯಂತ ವೈಭವದಿಂದ ಆಚರಿಸಬೇಕು. ಪ್ರತಿಯೊಂದು ಗ್ರಾಮದಲ್ಲಿಯೂ ಮಹಾಶಿವರಾತ್ರಿಯ ದಿವಸ ಈ ಮಹಾಚಾರ್ಯರ ಭಾವಚಿತ್ರಗಳನ್ನು ಪೀಠದಲ್ಲಿರಿಸಿ ಷೋಡಶೋಪಚಾರಗಳಿಂದ ಪೂಜಿಸಿ ಮಾಹೇಶ್ವರಾರಾಧನೆಯನ್ನು ಮಾಡಬೇಕು, ಈ ದಿನಸವೇ ಈ ಪೂಜ್ಯಪಾದರ ಭಾವಚಿತ್ರಗಳನ್ನು ಪಲ್ಲಕ್ಕಿಯಲ್ಲಿರಿಸಿ ಸಕಲ ವಾದ್ಯ ವೈಭವದೊಡನೆ ಮಹೋತ್ಸವವನ್ನು ನೆರವೇರಿಸಬೇಕು. ಇದೇ ಲಿಂಗಾಂಗಿಗಳ ಮೂಲಧರ್ಮವು! ಗುರುಗಳ ಜಯಂತಿಗಳನ್ನು ಭಕ್ತಿಯಿಂದ ಆಚರಿಸುವವರೇ ನಿಜವಾದ ವೀರಶೈವರು.

ಸೂಚನೆ

ಪ್ರತಿವರ್ಷ ಪದ್ಧತಿಯಂತೆ ಮಹಾಶಿವರಾತ್ರಿ ನಿಮಿತ್ತವಾಗಿ ಮುಂದಿನ (ತಾ|| ೨-೩-೧೯೫೭) ವಾರದ ಸಂಚಿಕೆಯು ಹೊರಡುವುದಿಲ್ಲ.

ಮ್ಯಾ.

ಉಜ್ಜಯಿನೀ ಜಗದ್ಗುರುಗಳವರ ಶುಭಾಗಮನ

ಪರಮಪೂಜ್ಯ ಆತ್ಮಲಿಂಗವು ನೆಲೆಸಿರುವ ಶ್ರೀಗೋಕರ್ಣ ಕ್ಷೇತ್ರದಲ್ಲಿ ಹುಬ್ಬಳ್ಳಿ ಹನ್ನೆರಡುಮಠದ ಸ್ವಾಮಿಗಳು ಸ್ಥಾಪಿಸಿರುವ ವೀರಶೈವಮಠದ ಶಿವರಾತ್ರಿ ಪೂಜಾ ಮಹೋತ್ಸವದ ನಿಮಿತ್ತವಾಗಿ ಪ್ರತಿವರ್ಷ ಆಗಮಿಸುತ್ತಿರುವ ಉಜ್ಜಯಿನೀ ಜಗದ್ಗುರು ಸದ್ಧರ್ಮಸಿಂಹಾಸನಾಧೀಶ್ವರ ಶ್ರೀ ಸಿದ್ಧೇಶ್ವರಶಿವಾಚಾರ್ಯ ಮಹಾಸ್ವಾಮಿಗಳವರು ಈ ವರ್ಷ ತಾ|| ೨೫-೨-೫೭ ನೇ ಸೋಮವಾರ ಸಾಯಂಕಾಲ ಗೋಕರ್ಣಕ್ಕೆ ದಯಮಾಡಿಸುವರು ಗೋಕರ್ಣಯಾತ್ರೆಗೆ ಹೋಗುವವರೆಲ್ಲರೂ ಶ್ರೀಸನ್ನಿಧಿಯವರ ದರ್ಶನಾಶೀರ್ವಾದಗಳನ್ನು ಪಡೆದುಕೊಳ್ಳಲು ಸುಸಮಯವಾಗಿರುತ್ತದೆ.

ಕಾಶೀಜಗದ್ಗುರುಗಳ ವಿಜಯೋತ್ಸವ

ವೀರಶೈವ ಪಂಚಪೀಠಾಧಿಪತಿಗಳಲ್ಲಿ ಒಬ್ಬರಾದ ಕಾಶಿ ಜ್ಞಾನಸಿಂಹಾಸನಾಧೀಶ ಜಗದ್ಗುರು ವಿಶ್ವೇಶ್ವರ ಶಿವಾಚಾರ್ಯ ಮಹಾಸ್ವಾಮಿಗಳವರು ಇದೇ ೧೭ ನೇ ತಾರೀಖಿನಂದು ಪಂಢರಪುರದಲ್ಲಿ ನಡೆದ ಭವ್ಯ ಶಿವದೀಕ್ಷಾ ಮಹೋತ್ಸವವನ್ನು ಪೂರೈಸಿಕೊಂಡು ೧೮ ನೇ ತಾರೀಖು ಸೋಮವಾರ ಮಿರಜ ನಗರದ ವೀರಶೈವ ಜಾಗೃತ ಸರ್ವಧರ್ಮೀಯರ ಅಖಿಲ ಪ್ರೇಮದಿಂದ ೭ ಘಂಟೆಯ ವರೆಗೆ ಸಕಲ ಬಿರುದಾವಳಿ ಸಮೇತ ನಗರದ ಮುಖ್ಯ ಬೀದಿಗಳಲ್ಲಿ ಅಶ್ವಪಲ್ಲಕ್ಕಿ ಮಹೋತ್ಸವವನ್ನು ನೆರವೇರಿಸಿ ಭೋಜನಪ್ರವೇಶವನ್ನು ಮಾಡಿ ಕಾಣಿಕಾದಿಗಳನ್ನು ಸ್ವೀಕರಿಸುತ್ತ ರಾಜಮರ್ಯಾದೆಯೊಡನೆ ಮುಂದಕ್ಕೆ ತೆರಳಿದರು. ಇದೇ ತಾ|| ೨೧ ರಂದು ಸಾಯಂಕಾಲ ಬೆಳಗಾಂವ ಜಿಲ್ಲಾ ಮುಖ್ಯನಗರಕ್ಕೆ ಆಗಮಿಸಿ ಮರುದಿವಸ ಮುಂದೆ ಪ್ರಯಾಣಬೆಳೆಸಿದರು ತಾ|| ೨೩ ಶನಿವಾರ ಧಾರವಾಡಕ್ಕೆ ದಯಮಾಡಿಸಿ ಸಾಯಂಕಾಲ ೪ ಘಂಟೆಗೆಲಿಂಗಾಯತ ನಗರಭವನದಿಂದ ಹೊರಯಲ್ಲಾಪುರ ಶುಕ್ರವಾರಪೇಟೆಯ ಹಿರೇಮಠಕ್ಕೆ ಮೆರವಣಿಗೆಯಿಂದ ವಿಜಯಂಗೈಸಿದಲ್ಲದೆ ತಾ|| ೨೪ ರಂದು ಧಾರವಾಡದಲ್ಲಿ ವಾಸ್ತವ್ಯಮಾಡಿ ತಾ|| ೨೫ ರಂದು ಅಶ್ವಪಲ್ಲಕ್ಕಿಮಹೋತ್ಸವಸಮೇತ ಗೋಕರ್ಣಕ್ಕೆ ಪ್ರಯಾಣ ಬೆಳೆಸುವರು.

ಶ್ರೀ ಕಾಶೀಜಗದ್ಗುರು ವಿಶ್ವೇಶ್ವರ ಶಿವಾಚಾರ್ಯ ಮಹಾಸ್ವಾಮಿಗಳವರ

ಅಡ್ಡಪಲ್ಲಕ್ಕಿಮಹೋತ್ಸವ

ಶ್ರೀಕ್ಷೇತ್ರ ಗೋಕರ್ಣ

ವೀರಶೈವಸ್ವಾಮಿಗಳೂ ವಿದ್ಯಾವಂಶರೂ ಆದ ಉಬ್ಬಳ್ಳಿ ಹಿರೇಕುಮಟಿಯ ಶ್ರೀ ಷ. ಬ್ರ. ಜಡ ಪಟ್ಟಾಧ್ಯಕ್ಷರಾದ ಶ್ರೀ ಮಡಿವಾಳ ಶಿವಾಚಾರ್ಯ ಸ್ವಾಮಿಗಳವರ ಪರಿಶ್ರಮ ಹಾಗು ಪ್ರಯತ್ನದ ಫಲವಾಗಿ ಶ್ರೀ ಕ್ಷೇತ್ರ ಗೋಕರ್ಣದಲ್ಲಿ ಸ್ಥಾಪಿತವಾದ ಶ್ರೀ ವೀರಶೈವ ಮಠವನ್ನು ಸಂದರ್ಶಿಸುವುದರ ಸಲುವಾಗಿ ಮಠಸ್ಥಾಪಕರ ಹಾಗೂ ಶ್ರೀಮಠದ ಸ್ವಾಗತ ಸಮಿತಿಯವರ ಪ್ರಾರ್ಥನೆಮೇರೆಗೆ ಇದೇ ಸಂವತ್ಸರ ಮಾಘ ಬಹುಳ ೧೪ ಮಹಾಶಿವರಾತ್ರಿಯ ಮಹಾಪೂಜಾ ಸಮಾರಂಭಕ್ಕಾಗಿ ಕಾಶೀಕರ ವಿದ್ಯಾವಂಶರೂ, ತಪಸ್ವಿಗಳೂ ಶಿಷ್ಯ ಹಿತೈಷಿಗಳೂ ಆದ ಶ್ರೀ ಶ್ರೀ ಶ್ರೀ ೧೦೦೮ ಕಾಶೀ ಜಗದ್ಗುರು ವಿಶ್ವೇಶ್ವರ ಶಿವಾಚಾರ್ಯ ಮಹಾಸ್ವಾಮಿಗಳವರು ಮಿಷದರಾವಾರದೊಡನೆ ಶ್ರೀ ಕ್ಷೇತ್ರ ಗೋಕರ್ಣಕ್ಕೆ ಜಯಮಾಡಿಸುವ ಶುಭ ಸಂತೋಷ ಸಂಗತಿಯನ್ನು ಪ್ರಕಟಮಾಡಲಿಕ್ಕೆ ಅತ್ಯಾನಂದವಾಗುತ್ತದೆ

ಸಂಸ್ಕೃತ ಅಂಗ್ಲ ವಿದ್ಯಾಪ್ರಸಾರದಿಂದ ವೀರಶೈವ ಸಮಾಜಕ್ಕೆ ಗೌರವವನ್ನೂ ಪ್ರತಿಷ್ಠೆಯನ್ನೂ ತಂದುಕೊಟ್ಟ ಶ್ರೀ ಕಾಶೀ ಜಗದ್ಗುರುಗಳವರ ಈ ಶುಭಾಗಮನದ ಶುಭ ಪ್ರಸಂಗದಲ್ಲಿ ಪ್ರತ್ಯೇಕ ಆಮಂತ್ರಣವನ್ನು ಆಪೇಕ್ಷಿಸದೆ ಈ ಪ್ರಕಟನೆಯೇ ಆಮಂತ್ರಣವೆಂದು ತಿಳಿದು ಕರ್ನಾಟಕ ಮಹಾರಾಷ್ಟ್ರ ತೈಲಂಗ ಪ್ರಾಂತದ ಪಟ್ಟಚರಾಧಿಕಾರಿಗಳೂ ಮಠಾಧಿಕಾರಿಗಳೂ ವಿರಕ್ತ ಮಠಾಧಿಪತಿಗಳೂ ಶಾಸ್ತ್ರಿಗಳೂ, ಶಿಷ್ಟರೂ, ಸಾಹುಕಾರರೂ, ದೇಸಾಯರೂ, ದೇಶಕಾಡಿಯವರೂ, ಪಟೇಲರೂ, ಕಾನ ಭೋಗರೂ ಹಾಗು ವೀರಶೈವ ಮತಾನುಯಾಯಿಗಳೂ ಸಹ ಮಹಾಶಿವರಾತ್ರಿಗೆ ೧-೨ ದಿವಸ ಮುಂಚಿತವಾಗಿ ಗೋಕರ್ಣಕ್ಕೆ ಆಗಮಿಸಿ ಅಲ್ಲಿ ಜರಗಲಿರುವ ಕಾರ್ಯಕ್ರಮಗಳಿಗೆ ಭಾಗಿಗಳಾಗಿ ಶ್ರೀ ಜಗದ್ಗುರು ಜಗದಾಚಾರ್ಯರ ಸಂದರ್ಶನ ಶುಭಾಶೀರ್ವಾದಗಳಿಂದ ಜನ್ಮವನ್ನು ಸಫಲಮಾಡಿಕೊಳ್ಳಲು ತಕ್ಕದ್ದು. ಈ ವರ್ಷ ಗುರುವು ಕನ್ಯಾರಾಶಿಗೆ ಬಂದಿರುವುದರಿಂದ ಈ ಯೋಗವು ಶುಭದಾಯಕವಾಗಿ ಇರುತ್ತದೆ. ಆಕಸ್ಮಿಕವಾಗಿ ಬಂದ ಈ ಪ್ರಸಂಗದಲ್ಲಿ ಶ್ರೀ ಜಗದ್ಗುರುಗಳವರ ಸನ್ನಿಧಾನದಲ್ಲಿ ಕೋಟಿ ತೀರ್ಥಸ್ನಾನ, ಸಮುದ್ರಸ್ನಾನ ಶ್ರೀ ಮಹಾಬಲೇಶ್ವರ ತಾಂಬ್ರ ಗೌರೀ ಇತ್ಯಾದಿ ದೇವತಾ ಸಂದರ್ಶನ ದಿಂದ ಅತ್ಯಧಿಕವಾದ ಫಲವು ಪ್ರಾಪ್ತವಾಗುವ ಯೋಗವು ಕಾಣಾಗಿಯೇ ದೊರೆತಿದುವದು ಪ್ರಯುಕ್ತ ವಿಳಕಾಲದಲ್ಲಿಯೇ ಒದಗುವ ಗುರುಯಾತ್ರಾ ದೇವಯಾತ್ರೆಯ ಫಲವನ್ನು ಪಡೆದುಕೊಂಡು ಧನ್ಯರಾಗ ಬೇಕಾಗಿ ಹಾರೈಸುತ್ತೇವೆ.

— ಕಾರ್ಯಕ್ರಮಗಳು —

ತಾ॥ ೨೫-೨-೫೭ ನೆಯ ಸೋಮವಾರ ಸಾಯಂಕಾಲಕ್ಕೆ ಶ್ರೀ ಜಗದ್ಗುರು ಕಾಶೀ ಜ್ಞಾನ ಸಿಂಹಾಸನಾಧಿಪತಿಗಳ ಹಾಗೂ ಪ್ರತಿ ವರ್ಷ ಪದ್ಧತಿಯಂತೆ ಆಗಮಿಸುವ ಶ್ರೀ ಉಜ್ಜಯಿನೀ ಸದ್ಧರ್ಮ ಸಿಂಹಾಸನಾಧೀಶ್ವರ ಶ್ರೀ ಶ್ರೀ ಶ್ರೀ ೧೦೦೮ ಜಗದ್ಗುರು ರಿಷ್ಟೇಶ್ವರ ಶಿವಾಚಾರ್ಯ ಮಹಾಸ್ವಾಮಿ ಗಳವರ ಸ್ವಾಗತವು

ತಾ॥ ೨೬-೨-೫೭ ನೇ ಮಂಗಳವಾರ ಉಭಯ ಜಗದ್ಗುರುಗಳವರ ಸನ್ನಿಧಾನದಲ್ಲಿ ಧಾರವಾಡ ಹೂಲಿಮಠದ ಸಂಸ್ಕೃತ ಪಾಠಶಾಲಾಧ್ಯಾಪಕರಾದ ವೇ॥ ಶಂ ಧರ್ಮಭೂಷಣ ಸಾಹಿತ್ಯರತ್ನ ಹರೀಶ್ವರ ಶಾಸ್ತ್ರಿಗಳವರ ಪ್ರವಚನ ಇತರ ಪಂಡಿತರ ಉಪನ್ಯಾಸ ಶ್ರೀಜಗದ್ಗುರುಗಳವರ ಉಪದೇಶ.

ತಾ॥ ೨೭-೨-೫೭ ನೆಯ ಬುಧವಾರ ಬೆಳಿಗ್ಗೆ ಹಂ. ಹರೀಶ್ವರ ಶಾಸ್ತ್ರಿಗಳವರ ವೈದಿಕತ್ವದಲ್ಲಿ ವೀರಶೈವ ಮಠದಲ್ಲಿ ಸ್ಥಾಪಿಸಲ್ಪಟ್ಟ ಶ್ರೀ ಜಗದ್ಗುರು ರೇಣುಕ ಲಿಂಗೋದ್ಭವಮೂರ್ತಿಗೆ ರುದ್ರಾಭಿಷೇಕ ಸೇವೆ ಸಹಸ್ರ ಬಿಲ್ವಾರ್ಚನೆ ರಾತ್ರೋಪಚಾರ ಮಹಾಮಂಗಲಾರತಿ ವಗೈರೆ ಸಾಯಂಕಾಲ ೪ ಘಂಟೆಗೆ ಉಭಯ ಜಗದ್ಗುರುಗಳವರ ಸನ್ನಿಧಾನದಲ್ಲಿ ಶ್ರೀ ಪಟ್ಟಚರಾಧಿಕಾರಿಗಳ ಸಮ್ಮೇಳನ.

ವಕ್ಕಲ್ಯಪ್ರತಾಪಿಗಳಾದ ಪಟ್ಟಚರಾಧಿಕಾರಿಗಳ ಮೆತ್ತು ಪಂಡಿತರ ಭಾಷಣ (ಏಕ್ತಾ, ಸದಾಚಾರ, ಕರ್ತವ್ಯ ಇತ್ಯಾದಿಗಳ ಬಗ್ಗೆ) ಶ್ರೀ ವಿಶ್ವೇಶ್ವರ ಬಗ್ಗೆ ಶ್ರೀಮತಿ ಗಿರಿಜಾಬಾಯಿ ತಿಕ್ಕಣಿಮಠ ಹಾಗೂ ಶ್ರೀಮತಿ ಚನ್ನವೀರಮ್ಮನವರು ಕಿತ್ತೂರು (ಹುಬ್ಬಳ್ಳಿ) ಈ ಹೊದಲಾದವರ ಭಾಷಣ ನಂತರ ಜಗದ್ಗುರುಗಳ ಉಪದೇಶ ಮತ್ತು ತೀರ್ಥಾ

ಇದೇ ದಿವಸ ಸಾಯಂಕಾಲಕ್ಕೆ ಕೋಟಿತೀರ್ಥಸ್ನಾನ ಸಮುದ್ರಸ್ನಾನ ಶ್ರೀ ಮಹಾಬಲೇಶ್ವರ ಮೊದಲಾದ ಪ್ರಸಿದ್ಧ ದೇವತಾದರ್ಶನ ರಾತ್ರಿ ೧೦ ಘಂಟೆಯಿಂದ ಉಭಯ ಜಗದ್ಗುರುಗಳವರ ಸನ್ನಿಧಾನದಲ್ಲಿ ಲಿಂಗಪೂಜಾ ತೀರ್ಥಪ್ರಸಾದ ಸೇವನೆ ತರುವಾಯ ಶಿವಭಜನಾ ತೀರ್ಥನ ಪುರಾಣಶ್ರವಣ ಇತ್ಯಾದಿಗಳಿಂದ ಇಡೀ ರಾತ್ರಿ ಜಾಗರಣೆಯು.

೨೮-೨-೫೭ ನೆಯ ಗುರುವಾರ ಸ್ನಾತಕಾಲ ಉಭಯ ಜಗದ್ಗುರುಗಳವರ ಲಿಂಗಪೂಜಾ ತರುವಾಯ ೮ ಘಂಟೆಯಿಂದ ಶ್ರೀ ವೀರಶೈವ ಮಠದಿಂದ ಶ್ರೀ ಮಹಾಬಲೇಶ್ವರ ದೇವಸ್ಥಾನದ ಮಾರ್ಗವಾಗಿ ಸಮುದ್ರದ ವರೆಗೆ ತಳಲ ಬರುವಾವಳಗಳೊಡನೆ ಶ್ರೀ ಕಾಶೀ ಜಗದ್ಗುರುಗಳವರ ಅಡ್ಡಪಲ್ಲಕ್ಕಿ ಮಹೋತ್ಸವವು ಪಂತರ ಅಪ್ಪ ಸಂತರ್ಪಣೆ ನೆಡೆಯುವದಲ್ಲದೆ ಸಾಯಂಕಾಲಕ್ಕೆ ಕಾಶೀ ಜಗದ್ಗುರುಗಳವರಿಗೆ ಮಾನಪತ್ರ ಸಮರ್ಪಣೆ ಮತ್ತು ಪಂಡಿತರ ಪ್ರತಿಷ್ಠಿತ ವ್ಯಾಖ್ಯಾನ ಶ್ರೀಜಗದ್ಗುರು ರುಗಳವರ ಉಪದೇಶವು.

ತಾ॥ ೧-೩-೫೭ ನೆಯ ಶುಕ್ರವಾರ ಪೂರ್ಣಾಹುತಿ ಕಾರ್ಯಗಳು ಸಾಯಂಕಾಲ ಪಧಾಚಾರ್ಯ ಪಂಡಿತರ ಪ್ರತಿಷ್ಠಿತ ಜನಗಳ ಉಪನ್ಯಾಸ ಜಗದ್ಗುರುಗಳವರ ಶುಭಸಂದೇಶ, ಶುಭಾಶೀರ್ವಾದಗಳು.

ವೈದಿಕಾಪಕ ಕಮಿಟಿ ಸೆಕ್ರೆಟರಿ.

ಪಂಚಾಚಾರ್ಯಪ್ರಭಾ ಸಂಪಾದಕರಿಗೆ

ಪುತ್ರೀ ಜನನ

ಮೈಸೂರಿನಲ್ಲಿ ಹೊರಹುಟ್ಟಿರುವ ಪಂಚಾಚಾರ್ಯ ಪ್ರಭಾ ಪತ್ರಿಕಾ ಸಂಪಾದಕರಾದ ನಾಗಭೂರು ಬೃಹನ್ಮಠಾಧ್ಯಕ್ಷ ಶ್ರೀ ಮಹಾದೇವಯ್ಯನವರಿಗೆ ಇಂದಿಲ್ಲಿ ಜನನ ಪುತ್ರರಿಬ್ಬಿ ಪುಪಃ ಈಗ ಇದೇ ದುರ್ಮುಖಿನಾಮ ಸಂವತ್ಸರದ ಮಾಘ ಬ॥ ೮ ಶುಕ್ರವಾರ (೨೨-೨-೫೭) ದಿವಸ ಉದಯ ೯-೬ ಘಂಟೆಗೆ ಸಲ್ಲುವ ಮೀನಲಗ್ನದಲ್ಲಿ ಹೆಣ್ಣುಮಗು ಆಪಸಿತೆಂದು ತಿಳಸಲು ಸಂತೋಷ ವಾಗುತ್ತದೆ. ಸಂಪಾದಕರ ಧರ್ಮಪತ್ನಿ ಇಂಗಿ ಸೌಖ್ಯ ಬಸವ್ಯನವರು ಮಗು ಸಹಿತವಾಗಿ ಆರೋಗ್ಯವಾಗಿರು ವರು. ಆದಷ್ಟುಬೇಗ ಳೆಳಗೆ ಮಾತ್ರದಂಡೋಗಬರುವು ಕೈಳಿಗಾಗಿದ್ದ ವೇ॥ ಮಹಾದೇವಯ್ಯನವರು ಈಗ ಆ ಮಾತೆಯನ್ನು ಪುತ್ರೀರೂಪದಲ್ಲಿ ಕಂಡು ಸಂತೋಷಿಸುವಂತಾಯಿತು ಶ್ರೀಜಗದ್ಗುರು ಪಂಚಾಚಾರ್ಯರ ಕೃಪೆಯಿಂದ ಪಂಡಿತ ಶ್ರೀ ಕಾಶೀನಾಥಶಾಸ್ತ್ರಿಗಳವರ ಸಹೋದರರವಂಶವೂ ವಂಶದ ಕೀರ್ತಿಯೂ ಅಚಂದ್ರಾರ್ಕವಾಗಿ ಬೆಳಗಿ ಗುರುವರ್ಗದ ರಕ್ಷಣೆಂತೆ ಪ್ರಕಾಶಿಸಲೆಂದು ಹಾರೈಸುವ,

— ನಾಗಭೂಷಣಕಾರ್ಯ.

ಗುರುಳುಲದ ವರ್ಧಂತಿಮಹೋತ್ಸವ

ಸೊಲ್ಲಾಪುರ

ಸೊಲ್ಲಾಪುರ ಶ್ರೀಮದ್ವೀರಶೈವ ಗುರುಕುಲದ ೧೪ನೇ ವರ್ಷದ ವರ್ಧಂತ್ಯುತ್ಸವವು ಶಾ. ಶ. ೧೮೭೮ ಮಾಘ ಶುಕ್ಲ ರಥಸಪ್ತಮಿಯ (ತಾ॥ ೭-೨-೫೭)ದಿನ ಹೊತ್ತಿಗೆ ಬೃಹನ್ಮಠದಲ್ಲಿ ಜರುಗಿಸಲ್ಪಟ್ಟಿತು ಅಂದು ಪ್ರಾತಃಕಾಲ ಶ್ರೀಜಗದ್ಗುರು ಪಂಡಿತಾರಾಧ್ಯ ಲಿಂಗೋದ್ಭವಮೂರ್ತಿಗೂ ಶ್ರೀ ಜ ಸಿದ್ಧಲಿಂಗಸ್ವಾಮಿಗಳಕ್ಕೂ, ವೀರಶೈವಸ್ವಾ ಶ್ರೀಗುರು ಹೊಟಗೀಸ್ವೆರರ ವಿಗ್ರಹಕ್ಕೂ ರುದ್ರಾಭಿಷೇಕಗಳು ಶ್ರೀಗುರುಕುಲದ ವಟುವೃಂದ ದಿಂದ ವೈದವೇರಿಸಲ್ಪಟ್ಟವನಂತರ, ತೀರ್ಥಪ್ರಸಾದಾದಿ ಗಳೊಂದಿಗೆ ಗಣಾರಾಧನೆಯೂ ಬಹು ವೃಷ್ಟಿಕರವಾಗಿ ಸಾಗಿತು.

ಸಂಜೆ ೭ ಘಂಟೆಗೆ ಶ್ರೀಮದ್ವೀರಶೈವ ಗುರುಕುಲ ಮೊಡಿಯರಾದ ಶ್ರೀ ಷ॥ ಬ್ರ॥ ಯೋಗಿರಾಜೇಂದ್ರ ಶಿವಾಚಾರ್ಯರವರ ನೇತೃತ್ವದಲ್ಲಿಯೂ, ಶ್ರೀ ಎಸ್. ಬಿ. ತಾಯಿಕ್ ಬಿ. ಎ. (ಆನರ್ಸ್) ಎಲ್.ಎಲ್.ಬಿ. ಅಸಿಸೆಸ್ಸ್ ಜಜ್ಜ್, ಸಾಹೇಬರವರ ಅಧ್ಯಕ್ಷತೆಯಲ್ಲಿಯೂ ಶ್ರೀ ಮೇ. ಮೋಕ್, ಡಿ. ಎಸ್. ಪಿ. ಸಾಹೇಬರವರ ಅತಿಥ್ಯದಲ್ಲಿಯೂ ಸಭೆಯು ಜರುಗುತು. ಮೊದಲು ಭಗವತ್ಪ್ರಾರ್ಥನೆ, ವೇದಘೋಷಣೆಗಳು ಮಂಜುಳವಾಗಿ ಮಾಡಲ್ಪಟ್ಟನಂತರ ವಾರ್ಷಿಕ ರಿಪೋರ್ಟನ್ನು ಶ್ರೀ ಗುರುಕುಲದ ಸೆಕ್ರೆಟರಿ ಶ್ರೀ ಎಲ್. ಜ. ಪೋದ್ದಾರರು ಓದಿ ಎಲ್ಲ ಸಭಿಕರಿಗೂ ತಿಳಿಸಿದರು. ಬಳಿಕ ೧ ಶ್ರೀ ಜ ಲೋಣಿ, ಇಂಜಿನಿಯರ್ ಸಾಹೇಬರು, ೨ ಶ್ರೀ ಷ॥ ಬ್ರ॥ ಜಿವಾನಂದ ಶಿವಾಚಾರ್ಯರು, ೩ ವೇ॥ ಸಿ. ಜಂಗಮ ಮಾತ್ರೆರವು, ೪ ಶ್ರೀ ಮಲಂಗೆ ವಕೀಲರು, ೫ ಶ್ರೀ ಗುಂಡಪ್ಪ ಮಲಂಗೆ, ೬ ವೇ॥ ಗಂಗಾಧರಶಾಸ್ತ್ರಿಗಳು, ೭ ವೇ॥ ವೀರಂತಯ್ಯ ಶಾಸ್ತ್ರಿ ಗಳು, ೮ ಶ್ರೀ ಕೆಸಾನ ಬಾಬು ಮುಂತಾದ ವಕ್ತೃಗಳು ಭಾಷಣಮಾಡಿದರು. ಶ್ರೀ ಗುರುಕುಲಾಧ್ಯಕ್ಷರಾದ ಶ್ರೀ ಷ॥ ಬ್ರ॥ ಯೋಗಿರಾಜೇಂದ್ರ ಶಿವಾಚಾರ್ಯ ಮಹಾ ಸ್ವಾಮಿಗಳವರಿಂದ ಉಪದೇಶವಾಯಿತು. ಆನಂತರ ಶ್ರೀ ಗುರುಕುಲೀಯ ವಿದ್ಯಾರ್ಥಿಗಳಿಗೆ ಪಾರಿತೋಷಕ ಗಳು ವರ್ಷಪಲ್ಲಟ್ಟೆವು. ತರುವಾಯ ಅಧ್ಯಕ್ಷರು ಶಾಸಾಮೂಲಕ ಸಂಸ್ಥೆಯ ಶ್ರೇಯೋಭಿವೃದ್ಧಿಗಳನ್ನು ತೋರಿದ ಪಂತರ ಶಾಂತಿಗೀತೆಯಾಗಿ ಸಭಾಕಾರ್ಯವು ಪೂರ್ತಿಗೊಂಡಿತು.

ಸೆಕ್ರೆಟರಿ ಶ್ರೀಮದ್ವೀರಶೈವಗುರುಕುಲ
ಸೊಲ್ಲಾಪುರ

ಮಾಹೇಶ್ವರ ಮಹಿಮಗಳ ದೀಕ್ಷಾಸಮಾರಂಭ

ಧಾರವಾಡ ಜಿಲ್ಲಾ ಗದಗ ತಾಲೂಕು ಜಾಲವಾಡಿ ಸ್ವಾಮಿ ಗುರುಮಲ್ಲಿಕಾರ್ಜುನ ಪುರದರ್ಗದಮಠದ) ಪಾಟೀಲ ಕೃಷ್ಣಶೆಟ್ಟರು ಇದೇ ದುರ್ಮುಖಿ ಸಂ|| ಮಾಘ ಶು|| ೧೪ ಬುಧವಾರ (ತಾ|| ೧೩-೩-೫೭) ದಿವಸ ತಮ್ಮ ಮಂದಿರದಲ್ಲಿ ಕಂದಗಲ್ಲುಪುರದ ಸೋ|| ಪು|| ಮಠದ ಪಟ್ಟದ ಶ್ರೀ ಸ್ವಾಮಿಗಳವರ ಸನ್ನಿಧಿಯೊಳು ಹಿರೇಹಡಗಲಿ ಪು|| ಮಠದ ಶ್ರೀ ವಿರೂಪಾಕ್ಷ ಶಾಸ್ತ್ರಿಗಳವರ ಪೌರೋಹಿತ್ಯದಿಂದ ಶ್ರೀ ಕೊಟ್ರಗೌಡರ ಸುಪುತ್ರರಾದ ಚಿ|| ಶಂಕರಗೌಡ ಚಿ|| ಸಿದ್ಧಲಿಂಗಗೌಡ ಮುಂತಾದ ೪೬ಮಂದಿಗಳಿಗೆ ಶಿವದೀಕ್ಷಾ ಮಹಾಕಾರ್ಯವನ್ನು ವಿಧ್ಯುಕ್ತ ಪ್ರಕಾರ ಜರಗಿಸಿದರು. ಆನಂತರ ಭೂರಿ ಅನ್ನಸಂತರ್ಪಣೆ ಹಾಗು ನೆರೆದ ಸಭಿಕರಿಗೆ ದೀಕ್ಷಾ ಪ್ರಭಾವದ ವಿವರಗಳು ಶಾಸ್ತ್ರಿಗಳವರಿಂದ ಬೋಧಿಸಲ್ಪಟ್ಟವು.

ಪ್ರತ್ಯಕ್ಷದರ್ಶಿ

ಶ್ರೀ ಮಹಾಶಿವರಾತ್ರಿ ಮಹೋತ್ಸವಾಹ್ವಾನ ಪತ್ರಿಕಾ

ಆನೆಗಲ್ ತಾಲೂಕಿ ಅಂಕನಹಳ್ಳಿ ಶ್ರೀ ಸಿರಂಗಿ ಸ್ವಾಮಿ ಗುರುಮಲ್ಲಿಕಾರ್ಜುನ ಸಿದ್ಧಲಿಂಗೇಶ್ವರಾಚಾರ್ಯ ಸ್ವಾಮಿಗಳಿಂದ ಮಹಾಶಿವರಾತ್ರಿ ಪೂಜಾಮಹೋತ್ಸವದ ಮೂಲಕ ಮರವಳ್ಳಿ ಸ್ವಸ್ತಿಶ್ರೀ ವಿಜಯಾಭ್ಯುದಯ ಕಾರಿವಾಹನಕಲಿ ೧೪೭೮ ಶ್ರೀ ದುರ್ಮುಖಿನಾಮ ಸಂವತ್ಸರದ ಮಾಘ ಬಹುಳ ೧೩ ಬುಧವಾರ (೨೭-೩-೫೭) ಪ್ರಾತಃಕಾಲ ಶಿವಪೀಠಾರಾಧನಾದಿ ಗಣಪತಿಪೂಜಾ, ಪುಣ್ಯಾಹ, ಸಾಂದಿ, ಪಂಚಕಲಶ ಸ್ಥಾಪನಾ, ಧ್ವಜಾರೋಹಣಾದಿ ಕಾರ್ಯಗಳು (ಶ್ರೀ ಚಕ್ರೇಶ್ವರಸಹಸ್ರ ಮಾದಕ್ಕನವರ ಸೇವಾ) ಸಾಯಂಕಾಲ ರುದ್ರಾಭಿಷೇಕ, ಮಹಾಮಂಗಳಾರತಿ(ಹುಬ್ಬಳ್ಳಿದೊಡ್ಡಿ ಶ್ರೀ ಬಾಳಪ್ಪನವರಲ್ಲಿ ಸೇವಾ)

ಮಾಘ ಬಹುಳ ೧೪ ಗುರುವಾರ (೨೮-೩-೫೭) ಪ್ರಾತಃಕಾಲ—ವೃಷಭವಾಹನ (ಚೆನ್ನೇಗೌಡ ಪ|| ಶ್ರೀ|| ಎ ರಾಮಯ್ಯನವರ ಸೇವಾ) ಸಾಯಂಕಾಲ—ಹುಲಿವಾಹನ (ಎಳೆಗೌಡ ಪ|| ಶ್ರೀ ಸಿದ್ಧಲಿಂಗಯ್ಯನವರ ಸೇವಾ)

ಮಾಘ ಬ|| ೩೦ ಶುಕ್ರವಾರ (೧-೩-೫೭) ಪ್ರಾತಃಕಾಲ—ನಂದಿವಾಹನ (ತಾಳವಾಡಿ ಒಡೆಯರ್ ಶ್ರೀ ಮಾದಪ್ಪನವರ ಸೇವಾ) ಸಾಯಂಕಾಲ—ಹೂವಿನ ಪಲ್ಲಕ್ಕಿ ಉತ್ಸವ (ರಾಮನಗರದ ಶ್ರೀ ಚಿಕ್ಕವೀರಪ್ಪನವರ ಸೇವಾ) ಮತ್ತು ಪದ್ಮತಿ ಪ್ರಕಾರ (೨೬-೩-೫೭) ಬುಧವಾರ ರಾತ್ರಿ ೯ ಘಂಟೆಗೆ ಶ್ರೀ ಕೆ. ಎಸ್. ಮಹದೇವಶಾಸ್ತ್ರಿಗಳವರಿಂದ ಶಿವಳಿಯನ್ನೂ ಸಹ ಏರ್ಪಡಿಸಿರುತ್ತೆ. ಭಕ್ತಾದಿಗಳು ಸಕಾಲದಲ್ಲಿ ಆಗಮಿಸಿ ಈ ಮಹೋತ್ಸವದಲ್ಲಿ ಭಾಗವಹಿಸಿ ಶ್ರೀ ಸಿರಂಗಿಸ್ವಾಮಿ ಕೃಪೆಗೆ ಪಾತ್ರರಾಗಬೇಕಾಗಿ ಅಪೇಕ್ಷಿಸುತ್ತೇವೆ

ಅಂಕನಹಳ್ಳಿ ಶ್ರೀ ಗವಿಮಠದ
ವ್ಯವಸ್ಥಾ ಪಕರು

ಶ್ರೀಶಿವಲಿಂಗ ಪ್ರತಿಷ್ಠೆ ಮತ್ತು ವಿವಾಹಮಹೋತ್ಸವ

ರಾಯಚೂರು ಜಿ||, ಸಿಂಧನೂರ ತಾ|| ಸುಂಕಾಪುರ ಗ್ರಾಮದಲ್ಲಿ ಕಳೆದ ವಿಕಾರಿ ೪-೩-೫೭ ರಿಂದು ಇಲ್ಲಿಯ ಧರ್ಮಾತ್ಮರಾದ ಗಂಗಾವತಿ ಕರಿವೀರಪ್ಪ ಗೌಡರು ತಾವು ಸ್ವತಃ ಏರಾರು ಸಾವಿರ ರೂಪಾಯಿ ಖರ್ಚಿನಿಂದ ಕಟ್ಟಿಸಿದ ಭವ್ಯವಾದ ನೂತನ ಮಂದಿರದಲ್ಲಿ ಶಿವಲಿಂಗಪ್ರತಿಷ್ಠೆ ಮಾಡಿಸಿದರು ಇವರ ಪ್ರಾರ್ಥನೆಯ ಮೇರೆಗೆ ಆಗಮಿಸಿದ ರೌಡಕುಂದಿ ಹಿರೇಮಠದ ಸಾಹಿತ್ಯಾಚಾರ್ಯ ಪಂ|| ಸಿದ್ಧರಾಮಶಿವಾಚಾರ್ಯರವರ ಆಚಾರ್ಯತ್ವದಲ್ಲಿ ಮತ್ತು ತಿನ್ನಾಪುರಮಠದ ವೇ|| ಪುರಾಣಿಕ ಶಿ|| ಬಸವಶಾಸ್ತ್ರಿಗಳ ಪೌರೋಹಿತ್ಯದಲ್ಲಿ ಪ್ರತಿಷ್ಠಾಂಗಗಳಾದ ವೈದಿಕಲಿಂಗಗಳೆಲ್ಲ ಯಥಾವಿಧಿ ಜರುಗಿ "ಶಂಕರಲಿಂಗ" ಎಂಬ ಹೆಸರಿನಿಂದ ಶಿವಲಿಂಗದ ಪ್ರತಿಷ್ಠೆಯು ವೈಭವದಿಂದ ಜರುಗಿತು ಮತ್ತು ಅದೇದಿನ ಸದರಿ ಕರಿವೀರಗೌಡರ ಸುಪುತ್ರ ಚಿ|| ವಿರೂಪಾಕ್ಷಗೌಡ ಎಂಬ ವರಪಿಗೂ ದೇವನೂರ ತಾ|| ಪೋ|| ಪಾ|| ಬಿರಾದಾರ್ ಸಿದ್ಧನ ಗೌಡರ ಸುಪುತ್ರಿ ಶ್ರೀ ಕು|| ಸೌ|| ಅಕ್ಕಮಹಾದೇವಿ ಎಂಬ ಕನ್ಯಾಮಣಿಗೂ ವಿವಾಹವು ಅತ್ಯಂತ ವಿಜೃಂಭಣೆಯಿಂದ ನೆರವೇರಿತು ಈ ಶುಭಸಂದರ್ಭದಲ್ಲಿ ಶ್ರೀ ಗೌಡರು ತಮ್ಮ ಗುರುಮನೆತನದ ಶ್ರೀ ವೀರಯ್ಯ-ಅನುರಮ್ಮ ಎಂಬ ವರವನ್ನುಗಳ ವಿವಾಹವನ್ನು ಧರ್ಮಾರ್ಥ ನೆರವೇರಿಸಿಕೊಟ್ಟರು ಈ ಕಾರ್ಯದಲ್ಲಿ ಈ ಗ್ರಾಮದ ದೈವಾಜ್ಞಾದವರೆಲ್ಲ ಭಾಗವಹಿಸಿದ್ದರು ಶ್ರೀ ಪಂಚಾಚಾರ್ಯ ಜಯಜಯಕಾರದೊಡನೆ ಮಂಗಲ ಕಾರ್ಯಗಳು ಜರುಗಿದವು

ವಿಶ್ವನಾಥಶಾಸ್ತ್ರೀ

ಮುಖನಾರ್ತೆ

ಧಾರವಾಡ ಜಿಲ್ಲಾ ಚಿಕ್ಕಮಣ್ಣೂರು ಗುರು ಸಂಸ್ಥಾನ ಬೃಹನ್ಮಠದ ಶ್ರೀ ವೇ|| ಚಂದ್ರಶೇಖರಯ್ಯ ನವರು ದಿನಾಂಕ ೧೬-೩-೧೯೫೭ ನೇ ಶನಿವಾರ ಬ್ರಾಹ್ಮೀಮುಹೂರ್ತದಲ್ಲಿ ಪರಲೋಕಾನುಸಂಧಾನವನ್ನೈದಿದರೆಂದು ತಿಳಿಸಲು ವಿಷಾದವಾಗುತ್ತದೆ. ಇವರು ಮರದ ಕಾರ್ಯಗಳನ್ನೂ ಸ್ಥಳೀಯ ಭಕ್ತರ ಕಾರ್ಯ ಹಾಗೂ ಗ್ರಾಮಾಂತರಗಳ ಶಿಷ್ಯರ ಕಾರ್ಯಗಳನ್ನೂ ಒಳ್ಳೇ ಪ್ರೀತಿಯಿಂದ ನಡೆಯಿಸುತ್ತಿದ್ದರು. ಮಠದ ಗೌರವಕ್ಕೆ ತಕ್ಕಂತೆ ಆಯಾಯ ಸಂದರ್ಭಗಳಲ್ಲಿ ಶಿಷ್ಯರಿಗೆ ಭಕ್ತಿ ಮಾರ್ಗವನ್ನು ತೋರಿಸುತ್ತಿದ್ದರು ಇದಲ್ಲದೆ ಇವರು ಸಮಾಜಕಾರ್ಯ ಮಾಡುವುದರಲ್ಲಿ ಹೆಸರಾಗಿದ್ದಂತೆಯೇ ಗ್ರಾಮದ ಸೊಸೈಟಿಯ ಚೇರಮನ್ನರಾಗಿದ್ದರು ಇವರ ಧರ್ಮಪತ್ನಿಯವರಾದ ಶ್ರೀ ಪಾರ್ವತೆವ್ವನವರು ಸ್ವಾಯಂಚಿಕ ವ್ಯವಹಾರದಲ್ಲಿಯೂ ಧಾರ್ಮಿಕ ವ್ಯವಹಾರದಲ್ಲಿಯೂ ಇವರಿಗೆ ಅನುಕೂಲರಾಗಿದ್ದರು ಇವರ ಜ್ಯೇಷ್ಠ ಪುತ್ರರು ಸದ್ಯ ಮರದ ಹವ್ಯಕವ್ಯ ಗಳನ್ನು ನಡೆಸುತ್ತಿರುವರು, ಚಿಕ್ಕ ಪುತ್ರರಾದ ಶ್ರೀ|| ವೇ|| ಆರ್. ಸಿ ಹಿರೇಮಠ ಡಾಕ್ಟರ ಎಂಬವರು ರೋಗದಲ್ಲಿ ದವಾಖಾನೆ ಇಟ್ಟಿರುವರು ಇವರ ಸಹೋದರರು ಮರದ ಪಟ್ಟಾಧಿಕಾರವನ್ನು ವಹಿಸಿ ಶ್ರೀ ರೇವಣಸಿದ್ಧ ಶಿವಾಚಾರ್ಯರೆಂಬ ನಾಮಾಭಿಧಾನದಿಂದ ಗದಗಿನಲ್ಲಿರುವ ಶ್ರೀಜಗದ್ಗುರು ರೇಣುಕಾಚಾರ್ಯ ಮಂದಿರವನ್ನು ಸ್ಥಾಪಿಸಿ ಅಲ್ಲಿಯೇ ನೆಲೆಸಿರುವರು. ಶ್ರೀ ಚಂದ್ರಶೇಖರಯ್ಯನವರು ಶಿವಾಧೀನರಾದ ವಾರ್ತೆಯು ಗದಗಿನಲ್ಲಿರುವ ಶ್ರೀ ಸ್ವಾಮಿಗಳಿಗೆ ತಾರಿನಿಂದ ಶಲ್ಯಿಡೊಡನೆ ಹೊರಟು ಬಂದು ಅಂತ್ಯ ಸಂಸ್ಕಾರದಲ್ಲಿ ಭಾಗಿಗಳಾದರು. ಮತ್ತು ಧಾರವಾಡ, ಗದಗ, ಹಡಗಲಿ, ಕಡತಿ, ಸವಡಿ, ಹೊಕ್ಕಾವುರ, ಅಂಕಣಾಲಿ, ಬೆಳವಡಿಕೆ, ಹೊಳೆಆಲೂರು, ಸಂದಿಗವಾಡ ರೋಣ ಮೊದಲಾದ ಗ್ರಾಮಗಳಿಂದ ಇವರು ಈ ಅಂತ್ಯಸಂಸ್ಕಾರಕ್ಕೆ ಆಗಮಿಸಿದ್ದರು. ಇದಲ್ಲದೆ ತಾಲೂಕು ಕಾಂಗ್ರೆಸ್ ಕಮಿಟಿ ಅಧ್ಯಕ್ಷರಾದ ಅಂದಾನಪ್ಪ ಕುಂದರಿಗಿ ಮತ್ತು ಅಂದಾನಪ್ಪನವರು ದೊಡ್ಡಮೇಟಿ ಜಜ್ಜಿಲಿ ಇನ್ನೂ ಅನೇಕ ಶಿಷ್ಯಮಂಡಳಿಯು ಮಜಲು, ಕಾಳೆ ಧ್ವಜಗಳ ಸಮೇತವಾಗಿ ಬಂದು ಫಲ ಕಪೂರ, ಹೂಮಾಲೆಗಳನ್ನು ಅರ್ಪಿಸಿದರು. ಗ್ರಾಮದಲ್ಲಿ ಅಂತ್ಯ ಸಂಸ್ಕಾರದ ಮೆರವಣಿಗೆ ಸಹಸ್ರಾರು ಜನಸಮೂಹದೊಡನೆ ಹೊರಟು ಸಮಾಧಿಗೆ ಹೋದ ಬಳಿಕ ಶ್ರೀಗಳವರೇ ವಿಧ್ಯುಕ್ತಪ್ರಕಾರ ಕ್ರಿಯಾಸಮಾಧಿ ಮಾಡಿಸಿದರು. ಮೃತರ ಉಪಕಾರ ಸ್ಮರಣೆ ಮಾಡುತ್ತ ಎಲ್ಲಾ ಧರ್ಮಾದ ಸ್ತ್ರೀಪುರುಷರು ಕಣ್ಣೀರು ಸುರಿಸುತ್ತಲೇ ಇದ್ದರು. ಬಂಧುಗಳಂತೂ ಅಪಾರ ದುಃಖಾಗಾಧರಾದರು. ಶ್ರೀ ರೇವಣಸಿದ್ಧ ಶಿವಾಚಾರ್ಯ ಸ್ವಾಮಿಗಳಂತೂ ತಮ್ಮ ಜ್ಯೇಷ್ಠ ಭ್ರಾತೃವಿನ ವಿಯೋಗದ ಚಿಂತೆಯಲ್ಲಿ ಮಗ್ನರಾಗಿ ಮಣ್ಣಾಗಿ ಮರುಕದಲ್ಲಿಯೇ ಇರುವರು. ಶ್ರೀಜಗದ್ಗುರು ಪಂಚಾಚಾರ್ಯರು ಮೃತರ ಆತ್ಮಕ್ಕೆ ಶಾಂತಿಯಷ್ಟೂ ಶುಭಂ ಭವಗದ ದುಃಖಮಯಿಸಲಷ್ಟೂ ಉಂಟು ಮಾಡಲೆಂದು ಬೇಡುವ,

ಎಸ್. ಕೆ. ಕೊಟ್ರಯ್ಯ.

ಸ್ವೀಕಾರ

ಪೂನಾ ಶಕರವಾಸಿಗಳಾದ ವೇ|| ಶಿವಯ್ಯನವರು ಹಲ್ಲಿಹೀರೆಮಠ ಇವರು ತಮ್ಮ ಚಿ|| ಗಳ ಮಾಹೇಶ್ವರ ದೀಕ್ಷಾ ಕಾರ್ಯವನ್ನು ನರಗುಂದ ಪೇರಾ ಪೈಕಿ ಹಡ್ಡಿ ಗ್ರಾಮದಲ್ಲಿ ಕೊಣ್ಣೂರು ಹಿರೇಮಠದ ಪಟ್ಟಾಧ್ಯಕ್ಷ ಶ್ರೀಮರುಳೇಂದ್ರ ಶಿವಾಚಾರ್ಯಸ್ವಾಮಿಗಳವರ ನೇತೃತ್ವ ದಲ್ಲಿ ನಡೆಯಿಸಿದಾಗ ಪ್ರಭಾಪೋಷಣೆಗೆ 2 ರೂ. ಗಳನ್ನು ಸಮರ್ಪಿಸಿ ಕಳಿಸಿದ್ದಾರೆ

ಕಡಕ ಡಿಸ್ಟ್ರಿಕ್ಟ್ ರಾಯವರಂ ಶ್ರೀ ಶಿವಾಪಂ ದಾಸ್ತ್ರಮದ ಶ್ರೀಮಾನ್ ಡಾ|| ಎಸ್. ವೀರಯ್ಯ ದೇವರು ಇದೇ ಮಾಘ ಶುದ್ಧ ೧೫ ದಿವಸ ತಮ್ಮ ಪಿತೃವರ್ಯರ ಎಂಟನೇ ವರ್ಷದ ಆರಾಧನೆಯನ್ನು ನಡೆಸಿದ ಸಮಯದಲ್ಲಿ ಪ್ರಭಾಪೋಷಣೆಗಾಗಿ 2 ರೂ. ಗಳನ್ನು ಸಮರ್ಪಿಸಿ ಕಳುಹಿಸಿರುತ್ತಾರೆ.

ಈ ಮೇಲ್ಕಂಡ ಮಹಾಶಯರಿಗೆಲ್ಲಾ ಶ್ರೀಜಗದ್ಗುರು ಪಂಚಾಚಾರ್ಯರು ನಿತ್ಯಮಂಗಲವನ್ನೀಯಲೆಂದು ಹಾರೈಸುತ್ತೇವೆ

ವರ್ತಮಾನಸಂಗ್ರಹ

ಮೈಸೂರಿನಲ್ಲಿ ಶ್ರೀ ನೆಹರೂವರ ಭಾಷಣ

ಭಾರವದ ಪ್ರಧಾನಮಂತ್ರಿ ಶ್ರೀ ನೆಹರೂರವರು ಇದೇ ೨೩ ನೇ ಕಾರಿಷ್ಣು ಉದಯ ೧೧ ಘಂಟೆಗೆ ಮೈಸೂರಿಗೆ ಆಗಮಿಸಿ ಇಲ್ಲಿ ಕೂಡಿದ ಪ್ರಜಾಂತ ಸಭೆಯಲ್ಲಿ ಜಗತ್ತಿನ ಕೆಲವು ಭಾಗಗಳು ವಿಶೇಷವಾಗಿ ಏನೊಂದನ್ನೂ ಕೇಳದೆ. ನೋಡದೆ, ಅಲೋಚಿಸದೆ ಕಾಶ್ಮೀರದ ಬಗ್ಗೆ ತಾಳ್ತಿರುವ ಧೋರಣೆಯನ್ನು ಖಂಡಿಸುತ್ತ ಒಂದು ಘಂಟೆಯವರೆಗೆ ವಿವಿಧ ರಾಷ್ಟ್ರ ಸರಕಾರಗಳ ನೀತಿಯನ್ನು ವಿವರಿಸಿ ಕೊನೆಗೆ ಮಹಾಜುನಾವಣೆಯು ಶುದ್ಧದ್ದು ಸರ್ಕಾರ ರಚನೆ ದೃಷ್ಟಿಯಿಂದ ಉತ್ತಮ ಹಾಗು ಪ್ರಬಲ ವಿಪ್ಲ ಶಾಸನಸಭೆಯಲ್ಲಿರುವಂತೆ ಮಾಡಲು ಸಹಾಯಕವಾಗಿಲೆಂದು ಹೇಳುತ್ತ ಅವೊಳ್ಳೆ ಕರಾರಾದನೊಂದಿಗೆ ತಮ್ಮ ಭಾಷಣ ವನ್ನು ಮುಕ್ತಾಯಗೊಳಿಸಿದರು

ಜುವಾನಿಸ ಮುಖ್ಯಾಧಿಕಾರಿಗಳ ಕಛೇರಿ

ಬೆಂಗಳೂರಿನ ಆಕಾಶ ಕಛೇರಿಯಲ್ಲಿರುವ ಮೈಸೂರು ಮುಖ್ಯ ಜುನಾವಣಾಧಿಕಾರಿಗಳ ಕಛೇರಿಯು ಫೆಬ್ರವರಿ ೨೪ ರಿಂದ ಮಾರ್ಚ್ ೨೦ ರವರೆಗೆ ಬೆಳಿಗ್ಗೆ ೭ ಘಂಟೆಯಿಂದ ರಾತ್ರಿ ಒಂಭತ್ತು ಘಂಟೆಯವರೆಗೆ ಕೆಲಸಮಾಡುವುದಲ್ಲದೆ ಜುನಾವಣೆಗೆ ಸಂಬಂಧಪಟ್ಟ ಯಾವದೇ ವಿಚಾರವನ್ನು ಸಾರ್ವಜನಿಕರಿಗೆ ಸಂತೋಷದಿಂದ ಒದಗಿಸುವದೆಂದು ಜುನಾವಣಾಧಿಕಾರಿಗಳು ತಿಳಿಸಿದ್ದಾರೆ. ಮುಖ್ಯ ಜುನಾವಣಾಧಿಕಾರಿಗಳ ಟೆಲಿಫೋನ್ ನಂಬರ್ ೫೪೦೮೦.

ಪ್ರಾ-ತಿ-ಪ್ರಮಾಣ ಪತ್ರ ಪರೀಕ್ಷೆ ಧಾರವಾಡ ಕೇಂದ್ರ

ಪ್ರಾಥಮಿಕ ಶಿಕ್ಷಕರ ಪ್ರಮಾಣ ಪತ್ರ ಪರೀಕ್ಷೆಯು ಪಾಠಗಳು ದಿ. ೧೧ ರಿಂದ ಪ್ರಾರಂಭವಾಗುವವು. ಸದರಿ ಪಾಠಗಳನ್ನು ಕೊಡುವ ಉಮೇದುವಾರರೆಲ್ಲರು ತಮ್ಮ ಪಾಠಗಳ ವಿಷಯ ಆಯುಕ್ತೆ ಮುಂತಾದ ವಿವರಗಳನ್ನು ತಮ್ಮ ಶಾಲೇಜಗಳ ಪ್ರಿನ್ಸಿಪಾಲರಿಗೆ ಇದೇ ದಿ. ೨೪ ರೊಳಗಾಗಿ ತಪ್ಪದೆ ತಿಳಿಸಬೇಕು. ಜೆಟ್ಟಿಪಾಠಿಯಮ್ಮ ಅವರಿಂದ ತಡಸಿಕೊಳ್ಳಬೇಕು ಎಂದು ಗ ಮ ಸ ಶ್ರೇಷ್ಠಿಗಳ ಶಾಲೇಜ ಪ್ರಿನ್ಸಿಪಾಲರು ಪ್ರಕಟಿಸುತ್ತಾರೆ.

Edited, Printed and Published by Brahmasrimadhiyakaina Sri Mahadevaiah at Sri Panchacharya Electric Press, Sayaji Rao Road, Mysore

REGISTERED No. M 2266 ॥ ಶ್ರೀಜಗದ್ಗುರು ಪಂಚಾಚಾರ್ಯಾಭ್ಯಾಂ ಪ್ರಸೀದಂತು ॥ REGISTERED No. M 2266

ಪಂಚಾಚಾರ್ಯಪ್ರಭಾ

ಪ್ರತಿ ಸೋಮವಾರ ಮೈಸೂರು ನಗರದಲ್ಲಿ ಪ್ರಕಟಿಸಲ್ಪಡುವುದು.

ಪಂಚಾಸ್ಯಾನನಪಂಕಜಾತಜನಿತರ್ ಪಂಚಾಸ್ಯವೀಣಾಧಿಪರ್ । ಪಂಚಕ್ಲೇಶವಿನಾಶಕರ್ ಪರತರಶ್ರೀಪಂಚಲಿಂಗೇಶ್ವರ್ ॥
ಪಂಚಾಚಾರನಿಯಾಮಕರ್ ಪರಿಲಸತ್ಪಂಚಾಕ್ಷರೀಮೋದಕರ್ । ಪಂಚಾಚಾರ್ಯಜಗದ್ಗುರೂತ್ತಮರವರ್ ಪಾಲಿಪ್ಪ ದೀಲೋಕಮಂ ॥

ಸಂಸ್ಥಾಪಕರು—ನಾಗನೂರು ಬೃಹನ್ಮಹಾಧ್ಯಕ್ಷರಾದ ನೆಲೆ ಪಂ॥ ಶ್ರೀ ಕಾಶೀಪ್ರಾಣಶಾಸ್ತ್ರಿಗಳವರು.

ವಾರ್ಷಿಕ ಚಂದಾ ೩ ರೂ.] ಸಂಪಾದಕರು—ನಾಗನೂರು ಬೃಹನ್ಮಹಾಧ್ಯಕ್ಷರಾದ ಶ್ರೀ ಮಹಾದೇವಯ್ಯನವರು [ವಿ ಪಿ ಖರ್ಚು ಸೇರಿ ೩।ರೂ ೧೦ ಆ.

ಸಂಪುಟ ೩೦] ಸೋಮವಾರ ತಾ॥ ೧೧ ನೇ ಮಾರ್ಚಿ ೧೯೫೭ [ಸಂಚಿಕೆ ೪೩

ಪತ್ರವ್ಯವಹಾರ

[ಚಾತ್ಕೀದಾರರು ಅಭಿಪ್ರಾಯ ಪಡುವ ಲೇಖನಗಳಿಗೆ ಪತ್ರಿಕಾಕರ್ತರು ಜವಾಬ್ದಾರರಲ್ಲ ಎಂಬ ವಿಷಯವನ್ನು ಸರ್ವರೂ ಲಕ್ಷ್ಯದಲ್ಲಿಡಬೇಕಾಗಿದ್ದು. —ಸಂ.]

ಮಹಾಶಿವರಾತ್ರಿ ಪೂಜಾನುಮಹೋತ್ಸವ ಮುಂದಗಲ್ಲು

ಪ್ರತಿವರುಷದಂತೆ ಈ ವರುಷವಾದರೂ ಕರ್ನಾಟಕ ಪ್ರಾಂತ ರಾಯಚೂರ ಜಿಲ್ಲಾ ಮುದಗಲ್ಲು ನಗರದ ಗಂಗಾಧರ ಮಠದ ವೇ॥ ಶ್ರೀ ಸಿದ್ಧರಾಮಯ್ಯ ಸ್ವಾಮಿಜೀಯವರು ತಮ್ಮ ಮಠದಲ್ಲಿ ಇದೇ ಮಾಘ ಬ॥ ೧೩ ರಾತ್ರಿ (ತಾ॥ ೨೭ ೨-೫೭ ನೇ) ಬುಧವಾರ ಶ್ರೀಶೈಲ ಜಗದ್ಗುರು ಪಂಡಿತಾರಾಧ್ಯ-ಕಾಶಿ ಜಗದ್ಗುರು ವಿಶ್ವಾರಾಧ್ಯರ ಜಯಂತಿ ಪಾಸು ಜನನ ಶಿವಯೋಗದ ಪುಣ್ಯದಿನದಲ್ಲಿ ಉಭಯ ಆಚಾರ್ಯರ ಭಾವಚಿತ್ರಗಳಿಗೆ ಶಾಸ್ತ್ರಪದ್ಧತಿಯಂತೆ ಪೂಜಾದಿ ಗಳನ್ನು ನೆರವೇರಿಸಿ ಮತ್ತು ಇಷ್ಟಲಿಂಗಕ್ಕೆ ಮಹಾಭಿಷೇಕವನ್ನು ಮಾಡಿ ಷೋಡಶೋಪಚಾರಗಳಿಂದ ಪೂಜಿಸಿ ಫಲತಾಂಬೂಲಾದಿಗಳನ್ನು ಅರ್ಪಿಸಿ ನಂತರ ಶಿವನ ಸಹಸ್ರನಾಮಾವಳಿಗಳನ್ನು ಉಭಯ ಆಚಾರ್ಯರ ಅಷ್ಟೋತ್ತರಶತನಾಮಾವಳಿಗಳನ್ನು ಪಠಿಸಿ ಶಿವನ ಹಾಗು ಉಭಯ ಆಚಾರ್ಯರ ಕೃಪೆಗೆ ಪಾತ್ರರಾದರು.

ಓರ್ವ ಹರಗುರುಸೇವಾಕಿಂಕರ

ಶ್ರೀ ಮಲಯಶಾಂತೇಶ್ವರ ಯಾತ್ರಾಮಹೋತ್ಸವ ನಂದೂರ

ಗುಲಬರ್ಗಾ ಜಿಲ್ಲಾ ನಂದೂರ ತೋಪಕಟ್ಟೆ ಹಿರೇಮಠದಲ್ಲಿ ಶ್ರೀ ತಪಸ್ವಿನಿ ಪದ್ಮತಾಯಿ ಪ್ರಕಾರ ಶ್ರೀ ಮಲಯಶಾಂತೇಶ್ವರ ಜಾತ್ರೆಯು ನಿಮಿತ್ತ ದಿ॥ ೪-೨-೫೭ ನೆ ದಿನ ಮುಂಜಾನೆ ಪಲ್ಲಕ್ಕಿ ಮೆರವಣಿಗೆ ಸಾಯಂಕಾಲ ರಥೋತ್ಸವ ಜರುಗಿತು ರಾತ್ರಿ ೧೧ ಘಂಟೆಗೆ ಶ್ರೀ ಜಗದ್ಗುರು ರೇಣುಕಾಚಾರ್ಯ ನಾಟ್ಯ ಸಂಘ ಚಿಕ್ಕನಂದೂರು ಇವರು ಸೌಭಾಗ್ಯಲಕ್ಷ್ಮಿ ಎಂಬ ನಾಟಕವನ್ನು ಅಭಿನಯಿಸಿದರು ಅಂದು ಮಲಕೋಡ ಕಟ್ಟಿಮಠದ ಜಿರಪಟ್ಟಾಧ್ಯಕ್ಷ ಸೋಮು ಶೇಖರ ಶಿವಾಚಾರ್ಯ ಮಹಾಸ್ವಾಮಿಗಳ ಅಧ್ಯಕ್ಷತೆಯಲ್ಲಿ ಸಭೆ ಸೇರಿ ವೇ॥ ಶರಣಬಸವಿಗಳು ಮಹಾತ್ಮಾನಂ ಇವರು ಭಾಷಣ ಮಾಡಿದರು. ನಂತರ ವೇ॥ ಪಂ॥ ಲೇಖನಪ್ರವೀಣ ಗುರುಸಿದ್ಧ ಶಾಸ್ತ್ರಿಗಳ ಭಾಷಣಾನಂತರ ನಾಟಕಸಂಘದವರು ಸದರಿ ಮುಖಾಧಿಕಾರಿಗಳಿಗೆ ಮಾನಪತ್ರ ಅರ್ಪಿಸಿದರು. ಆಮೇಲೆ ವೇ॥ ಪಂ॥ ಹೊಡ್ಡಯ್ಯಸ್ವಾಮಿಗಳು ಹಿರೇಮಠ ಇವರ ಭಾಷಣ ನಾಯಿತು. ಆಮೇಲೆ ವೇ॥ ಕವಿಭೂಷಣ ನಿಜಗುಣ ಶಾಸ್ತ್ರಿಗಳು ರಾಯಚೂರ ಇವರ ಭಾಷಣಾನಂತರ ಸಭಾಕಾರ್ಯವು ಮುಕ್ತಾಯವಾಯಿತು

ರಾಚಣ್ಣ ಹೈಯಾಳ

ಶ್ರೀ ವಂದಶಂಕರ ಪೂಜಾಮಹೋತ್ಸವ ಡಾಪೋಡಿ

ಧಾರವಾಡ ಜಿಲ್ಲಾ ನರಗುಂದ ಪೇರಾ ಪೆಟಕೊಪ್ಪದ ಶ್ರೀ ಎಸ್. ಸಿ ಹಿರೇಮಠ ಇವರು ಪುನಾಸಿಟಿ ಡಾಪೋಡಿಯಲ್ಲಿರುವ ಗೃಹದಲ್ಲಿ ಇದೇ ಮಾಘ ಬಹುಳ ೭ ತಾ॥ ೨೧-೨-೫೭ ನೇ ಗುರುವಾರ ಕೊಣ್ಣೂರು ಹಿರೇಮಠದ ಪಟ್ಟಾಧ್ಯಕ್ಷರಾದ ಶ್ರೀ॥ ಜ॥ ಬ್ರ॥ ಮುರುಘೇಂದ್ರಶಿವಾಚಾರ್ಯಸ್ವಾಮಿಗಳವರಿಂದ ಶ್ರೀ ವರದಶಂಕರ ಪೂಜಾ ಹಾಗು ಕಥಾ ಮಹೋತ್ಸವನನ್ನು ಒಳ್ಳೇ ವೈಭವದಿಂದ ನೆರವೇರಿಸಿದರು ಪೂಜಾದಿ ಗೃಹವು ರಂಬಾಸ್ತಂಭಗಳಿಂದಲೂ ತಳಿರುತೋರಣಗಳಿಂದಲೂ ವಿದ್ಯುದ್ದೀಪಗಳಿಂದಲೂ ಬಲೂನುಗಳಿಂದಲೂ ಸುಂದರವಾಗಿ ಅಲಂಕರಿಸಲ್ಪಟ್ಟಿತ್ತು ಸದರ ಪೂಜಾಕಾರ್ಯಮವು ಸಂಜೆಯ ೫ ಗಂಟೆಗೆ ಪ್ರಾರಂಭವಾಗಿ ರಾತ್ರಿ ೯ ಗಂಟೆಗೆ ಪರಿಸಮಾಪ್ತಿಯಾಯಿತು ಈ ಮಂಗಲ ಕಾರ್ಯಕ್ಕೆ ವರ್ಕರ್‌ಶಾಪಿನಲ್ಲಿ ಮತ್ತು ಪುನಾ ಸಿಟಿಯಲ್ಲಿ ನೌಕರಿಯನ್ನು ಮಾಡುತ್ತಿದ್ದ ಕರ್ನಾಟಕದ ವೀರಶೈವ ಬಂಧುಗಳೂ ಮತ್ತು ಇತರ ಎಲ್ಲಾ ಜಾತಿಯ ಅಭಿಸರರೂ ಮಿತ್ರಮಂಡಳಿಯವರೂ ಆಗಮಿಸಿದ್ದರು ಬಂದಂಥ ಯಾತ್ರಸ್ತಾ ಜನರಿಗೂ ಪ್ರಸಾದವು ಕೊಡಲ್ಪಟ್ಟಿತು ಅನೇಕರ ಅಮಂತ್ರಣಕೊಟ್ಟಿದ್ದ ವೀರಶೈವ ಜನರಿಗೆ ಮೃಷ್ಟಾನ್ನಭೋಜನವು ನಡೆಸಲ್ಪಟ್ಟಿತು ಸಾತ್ವಿಕರೂ, ಉದಾರಿಗಳೂ, ಧರ್ಮಾಭಿಮಾನಿಗಳೂ ಆದ ಸದರಿಯವರು ಶ್ರೀಗಳನರ ಆಪ್ತಕೆಯ ಪ್ರಕಾರ ಪಂಚಾಚಾರ್ಯಪ್ರಭಾ ಪೋಷಣಕ್ಕಾಗಿ ಎರಡು ರೂಪಾಯಿಗಳನ್ನು ಸಮರ್ಪಿಸಿದರು. ಸದರಿಯವರು ಉಟುಂಬಂವರ್ಗಸಹೋದರರಿಗೂ ಶ್ರೀ ವರದ ಶಂಕರನು ಅವರ ಇಷ್ಟವನ್ನು ಪೂರ್ಣಗೊಳಿಸಿ ಆಯುರಾರೋಗ್ಯಭಾಗ್ಯಾದಿಗಳನ್ನಿತ್ತು ರಕ್ಷಿಸಲೆಂದು ಹಾರೈಸುತ್ತೇನೆ.

ಓರ್ವ ಪ್ರೇಕ್ಷಕ, ಪೂನಾಸಿಟಿ.

ಶ್ರೀ ಜ॥ ಸಿದ್ಧಲಿಂಗಶಿವಾಚಾರ್ಯರ ಜಯಂತಿಮಹೋತ್ಸವ

ಸೊಲ್ಲಾಪುರ ಶ್ರೀಮದ್ವೀರಶೈವ ಗುರುಕುಲದಲ್ಲಿ ಇದೇ ಶಾ. ಶ ೧೮೭೮ ಮಾಘ ಶು॥ ೭ ಗುರುವಾರ ಶ್ರೀಮದುಜ್ಜಯಿನೀ ಜಗದ್ಗುರು ಶ್ರೀ॥ ಸಿದ್ಧಲಿಂಗ ಶಿವಾಚಾರ್ಯರ ಜಯಂತ್ಯುತ್ಸವವು ಸುಮನೋಹರವಾಗಿ ನೆರವೇರಿಸಲ್ಪಟ್ಟಿತು.

ಪ್ರಾತಃಕಾಲ ಶ್ರೀ ಜಗದ್ಗುರು ಸಿದ್ಧಲಿಂಗ ಮೂರ್ತಿಗೂ ಶ್ರೀ ಜ॥ ಪಂಡಿತಾರಾಧ್ಯ ಲಿಂಗೋದ್ಭವ ಮೂರ್ತಿಗೂ ಗುರುಳ ಲಿಂಗ ಪಟುಗಳಿಂದ ರುದ್ರಾಭಿಷೇಕವು ವರಿಸಲ್ಪಟ್ಟತು ಅನಂತರ ಗಣಾರಾಧನಾಕಾರ್ಯವು ತೀರ್ಥಪ್ರಸಾದಗೊಂದಿಗೆ ತೃಪ್ತಿಕರವಾಗಿ ಸಾಗಿತು ಸಂಜೆ ೮ ಘಂಟೆಗೆ ಪ್ರವಚನಾಲಂಕಾರ ಶ್ರೀ॥ ಜ॥ ಬ್ರ॥ ವಿದಾನಂದಶಿವಾಚಾರ್ಯ ನುಪಾಸ್ಯಾಮಿಗಳವರ ಅಧ್ಯಕ್ಷತೆಯಲ್ಲಿ ಸಭೆಸೇರಿ, ವೇದಘೋಷಪೂರ್ವಕವಾಗಿ ಶ್ರೀ ವರಿಂಜಕರಸ್ವಾಮಿಜೀ, ಶ್ರೀ ಎಲ್. ಜಿ ಪೋದ್ದಾರ್, ಶ್ರೀ ರುದ್ರಮುನಿ ಶರ್ಮಾ, ಶ್ರೀ ವೇದಾಂತಾಧ್ಯರ್ಮಾ, ಶ್ರೀ ಗಂಗಾಧರ ಶಾಸ್ತ್ರಿಗಳು ಸಾಮಯಿಕವಾಗಿಯೂ, ಸುಂದರವಾಗಿಯೂ ಶ್ರೀಜಗದ್ಗುರುಗಳವರ ಆತ್ಮಶ್ರೀಶಕ್ತಿಗಳಾದ ಪರಾದಿಗಳ ಬಗ್ಗೆಯೂ ಭಾಷಣ ಮಾಡಿದರು ಸಭೆಗೆ ಪುರಸ್ಸಮುಖರಾದ ವೀರಶೆಬ್ಬೆ ಮುಂತಾವ ಹಿರಿಯರು ಸದಾಚಾರಸಮಾಜ ಮುಂತಾವ ಸಂಘ ಸಂಸ್ಥೆಗಳವರೂ ಕಿಕ್ಕಿರಿದು ನೆರೆದಿದ್ದರಿಂದ ಆಯಾ ಸಂಘ ದವರಿಂದಲೂ ಪುಷ್ಪಮಾಲೆಗಳು ಸಮರ್ಪಿಸಲ್ಪಟ್ಟು ಕಡೆಗೆ ಅಧ್ಯಕ್ಷರ ಭಾಷಣ, ಧನ್ಯವಾದಗಳೊಂದಿಗೆ ಸಭಾಕಾರ್ಯಕ್ರಮ ಸೂರ್ತಗೊಂಡಿತು

ಶ್ರೀಮದ್ವೀರಶೈವ ಗುರುಕುಲ ಸೆಕ್ರೆಟರಿ

ಏಕಾದಶ ರುದ್ರಾಭಿಷೇಕ ಹಾಗು ರೇಣವಣಸಿದ್ಧ ಪ್ರಥಾಣ ನೃವಚನ ಚಿತ್ರದುರ್ಗ

ಚಿತ್ರದುರ್ಗದ ಉಜ್ಜಯಿನೀ ಮಠದಲ್ಲಿ ಶಿವರಾತ್ರಿ ಪೂಜಾನಿಮಿತ್ತ ಶ್ರೀ ಮರುಳಸಿದ್ಧೇಶ್ವರ ಲಿಂಗಕ್ಕೆ ವಿಕಾದಶವಾರ ರುದ್ರಾಭಿಷೇಕವನ್ನು ಶ್ರೀ ಚನ್ನಬಸಪ್ಪನವರು ಅತಿ ವಿಜೃಂಭಣೆಯಿಂದ ನೆರವೇರಿಸಿದರು ಶಿವರಾತ್ರಿಯ ರಾತ್ರಿ ಪೂರ್ತಿ ಶ್ರೀ ರೇಣವ ಸಿದ್ಧೇಶ್ವರ ಪುರಾಣವನ್ನು ಪ್ರವಚನ ಮಾಡಲಾಯ್ತು.

ಚಂದ್ರಶೇಖರ್

ನಾಮಕರಣನುಮಹೋತ್ಸವ

ಸಂಬಾಚಾರ್ಯಪ್ರಭಾ ಸಂಪಾದಕರಿಗೆ ಹೆಣ್ಣು ಮಗು ಜನಿಸಿರುವುದಾಗಿ ಪ್ರಸಿದ್ಧ ಪಡಿಸಿದಂತೆ ಆ ಮಗುವು ಆನುರಾಧಾ ನಕ್ಷತ್ರದಲ್ಲಿ ಜನನವಾಗಿದ್ದ ರಿಂದಲೂ, ಸಂಪಾದಕರ ತಾಯಿ ನಾನಮ್ಮನವರು ಈಚೆಗೆ ಶಿವೈಕ್ಯರಾಗಿದ್ದರಿಂದಲೂ ದೇಶಮಧ್ಯದ ಅಪ್ತೇಷ್ಟ ಬಂಧುಬಳಗದಿಂದ ಬಂದ ಸಲಹೆಗಳಂತೆ ಇದೇ ಫಾಲ್ಗುಣ ಶು॥ ೩ ಸೋಮವಾರ (೪-೩-೫೭) ದಿವಸ ಶಿಶುವಿಗೆ ಜಾತಕರ್ಮ ಲಿಂಗಧಾರಣ ಪೂರ್ವಕ ನಾಮಾಂಕಿತ ಎಂದು ನಾಮಕರಣ ಮಾಡಲಾಯಿತು. ಶ್ರೀಜಗದ್ಗುರು ಪಂಚಾಚಾರ್ಯರ ಕೃಪೆಯಿಂದ ಮಗುವು ದೀರ್ಘಾಯುವಾಗಿ ಬಾಳಿ ನಾಗಪ್ಪಯ್ಯ ಹಿರೇಮಠದ ಸಿದ್ಧೇಶ್ವರಯ್ಯನವರ ವಂಶದ ಕೀರ್ತಿಯನ್ನು ಬೆಳಗಿಸಲೆಂದು ಪ್ರಾರ್ಥಿಸುವ.

ಅಕ್ಷರಬಂಧು.

ಶ್ರೀ ಜಗದ್ಗುರು ರೇಣುಕಾಚಾರ್ಯರ ಜಯಂತೀಮಹೋತ್ಸವ

ಫಾಲ್ಗುಣ ಶುದ್ಧ ತ್ರಯೋದಶಿ (14-3 1957) ಮಂಗಳವಾರ ಶುಕ್ರವಾರ

ಶ್ರೀ ಕುರ್ಕುಣಾಪ ಸೀಮಾನಾಥಲಿಂಗದಿಂದ
ಶ್ರೀಜಗದ್ಗುರು ರೇಣುಕಾಚಾರ್ಯರ ಅವತಾರವು

ಮಂಗಳವಾರ

ಶ್ರೀಜಗದ್ಗುರು ರೇಣುಕಾಚಾರ್ಯರ ಜಯಂತಿಯನ್ನು ಫಾಲ್ಗುಣ ಶುದ್ಧ ತ್ರಯೋದಶಿ ಸೋಮವಾರ (ಆ-4-೧೯೫೭ರಲ್ಲಿ ದಿನಾಂಕ ಭರತಖಂಡದಲ್ಲಿ ನೆಲಸಿರುವ ಸಮಸ್ತವೀರಶೈವರೂ ಅತ್ಯಂತಭಕ್ತಿಯಿಂದ ನೆರವೇರಿಸಬೇಕು ಶ್ರೀರೇಣುಕಾಚಾರ್ಯರು ಸಾಮಾನ್ಯಗುರುಗಳಲ್ಲ ಸಪ್ತಋಷಿಮುದ್ರಗಳನ್ನೇ ಹಿಂದು ಹನಿಯಂತೆ ಪಾನಮಾಡಿ ಲೋಕಖ್ಯಾತರಾದ ಅಗಸ್ತ್ಯಮಹರ್ಷಿಗಳನ್ನುದ್ಧರಿಸಿದವರು. ಲೋಕಚಕ್ರವರ್ತಿಯಾದ ವಿಭೀಷಣನ ಇಷ್ಟಾನುಸಾರವಾಗಿ ಏಕಕಾಲದಲ್ಲಿಯೇ ಮೂರುಕೋಟಿ ಗುರುರೂಪವನ್ನು ಧರಿಸಿ ಮೂರುಕೋಟಿ ಶಿವಲಿಂಗಗಳನ್ನು ಸ್ಥಾಪಿಸಿ ರಾವಣನನ್ನೂ ವಿಭೀಷಣನನ್ನೂ ಉದ್ಧರಿಸಿದವರು. ಗರ್ವಾಂಧಕಾಸುರ ಗೌರೀಲಕ್ಷ್ಮಿ ಗರ್ವವನ್ನು ತಮ್ಮ ಮಹಿಮಾಪ್ರಭಾವದಿಂದ ನಾಶಮಾಡಿ ಶಿವಮಿಥ್ಯಾಂತೋಪದೇಶದ್ವಾರಾ ಅವರನ್ನು ಪ್ರತಿಷ್ಠಾಪನೆ ಮಾಡಿದವರು ಲೋಕಕಂಟಕರಾಗಿದ್ದ ಯಕ್ಷದಂಪತಿಗಳನ್ನು ತಮ್ಮ ಪಾಲನೇತ್ರದಿಂದ ಸಂಹರಿಸಿ ಮನುಷ್ಯ ಪ್ರಪಂಚಕ್ಕೆ ಕಲ್ಯಾಣವನ್ನು ತೋರಿದವರು ನೀಲಗಲ ಚಕ್ರವರ್ತಿಯ ಪತ್ನಿ ಸಾಧ್ವಿ ಪರೀಕ್ಷಿಸುವುದಕ್ಕೋಸ್ಕರ ಕೋಟ್ಯನುಕೋಟಿ ಪ್ರಮಥಸ್ವರೂಪವನ್ನು ಧರಿಸಿ ಅವಳ ಸೃಷ್ಟಾರ ಪಕ್ಷಿಗಳನ್ನು ನಾನಾರೀತಿಯಿಂದ ಪರೀಕ್ಷಿಸಿ ಅಂತ್ಯದಲ್ಲಿ ಅವನಿಗೆ ಪ್ರಸನ್ನರಾಗಿ ಆಶೀರ್ವದಿಸಿದರು ಕಾಂಚಿಕ್ಷೇತ್ರವಲ್ಲಿರುವ ವಿಷ್ಣುಮೂರ್ತಿಯ ಚಲಿಸುತ್ತಿದ್ದ ಮಸ್ತಕವನ್ನು ತಮ್ಮ ಮಹಿಮಾಪ್ರಭಾವದಿಂದ ಸ್ಥಿರಗೊಳಿಸಿ ಚೋಳಭೂಪಾಲನಿಗೆ ಗುರುಗಳಾದವರು. ಇವೇ ಮೊದಲಾದ ಅನಂತಾನಂತ ಲೀಲೆಗಳನ್ನು ಮಾಡಿ ಸಮಸ್ತಪ್ರಪಂಚವಂದ್ಯರಾದ ಶ್ರೀಜಗದ್ಗುರುಗಳವರ ಜಯಂತಿಯನ್ನು ಸರ್ವರೂ ಅತಿಭಕ್ತಿಯಿಂದ ನೆರವೇರಿಸಿ ಜಗದಾಚಾರ್ಯರ ಕೃಪೆಗೆ ಪಾತ್ರರಾಗಬೇಕೆಂದು ಹಾರೈಸುತ್ತೇವೆ.

ಶ್ರೀಜಗದ್ಗುರು ರೇಣುಕ ಜಯಂತಿ ರಥೋತ್ಸವಾಹ್ವಾನ ಪತ್ರಿಕಾ

ಸ್ವಸ್ತಿ ಶ್ರೀಮನ್ನೈಷಕಾಲಿವಾಹನ ಶಕೆ ೧೮೭೯ನೇ ದುರ್ಮುಖಿನಾಮ ಸಂವತ್ಸರ ಫಾಲ್ಗುಣ ಶುದ್ಧ ೧೩ ಗುರುವಾರ (ತಾ॥ ೧೪ ಮಾ ೧೯೫) ಮಘಾ ನಕ್ಷತ್ರದ ಶುಭಮುಹೂರ್ತ ವಲ್ಲಿ "ಶ್ರೀಜಗದ್ಗುರು ರಂಭಾಪುರೀ ವೀರಸಿಂಹಾಸನ ಮಹಾಸಂಸ್ಥಾನಮಠ "ದಲ್ಲಿ ಅನಾದಿ ಕಾಲದಿಂದಲೂ ಜರುಗುತ್ತ ಬಂದಂತೆ ಈ ಸಂವತ್ಸರದಲ್ಲಿಯೂ "ಶ್ರೀಮಹಾ ರಥೋತ್ಸವವು" ನೆರವೇರುವುದು

ಪ್ರಥಮ ದಿವಸ ಅಗ್ನೋದಕಾಯನ ಪೂರ್ವಕ ಗಣಪತಿ ಪೂಜೆ, ಸ್ವಸ್ತಿವಾಚನ, ಪಂಚಕಲಶ ಸ್ಥಾಪನಾದಿ ಕಾರ್ಯಗಳು ಮತ್ತು ಮಹಾರಥೋತ್ಸವದ ಅಂಗಭೂತಗಳಾದ ವೃಷಭೋತ್ಸವ, ಅಶ್ವಾರೋಹಣೋತ್ಸವ, ಪುಷ್ಪೋತ್ಸವ, ಅಂದೋಲಿಕೋತ್ಸವ, ಶಯನೋತ್ಸವ, ಕುಂಕುಮೋತ್ಸವ, ವಸಂತೋತ್ಸವ, ಅವಭೃತಸ್ನಾನ, ಭದ್ರಾನದೀ ವಿಹಾರೋತ್ಸವ ಮೊದಲಾದ ನಿತ್ಯೋತ್ಸವಗಳು ಪದ್ಧತಿಯಂತೆ ಫಾಲ್ಗುಣ ಬಹುಳ ೮ ರ ವರೆಗೆ ಅತ್ಯಂತ ವಿಜೃಂಭಣೆಯಿಂದ ನೆರವೇರುವವು

ಪ್ರತಿವರ್ಷದಲ್ಲಿಯೂ ನಡೆಯುವ ಶ್ರೀ ಮಹಾರಥೋತ್ಸವ ಸೇವೆಯನ್ನು ಶಿವಮೊಗ್ಗಾ ನಿವಾಸಿಗಳಾದ ಶ್ರೀಮಾನ್ ಭಂಡಿಗಡಿ ಚಿಂದ್ರಶೇಖರಪ್ಪ ತೆಟ್ಟಿರು ನಿರಂತರವಾಗಿ ನಡೆಯಿಸಲು ಒಪ್ಪಿಕೊಂಡಿರುವುದಲ್ಲದೆ ಇನ್ನೂ ಅನೇಕ ಶಿವ್ಯರು ನಾನಾ ಬಗೆಯ ಸೇವೆಯನ್ನು ಸಲ್ಲಿಸಲು ಸಿದ್ಧರಾಗಿರುವ ಸಂಗತಿಯನ್ನು ಸಂತೋಷದಿಂದ ಅನುಕರಿಸಿ ಪುಣ್ಯಭಾಜನರಾಗತಕ್ಕದ್ದು

ವಿಜೆಂಟ್,
ಶ್ರೀ ಜಗದ್ಗುರು ರಂಭಾಪುರೀ ಸಂಸ್ಥಾನಮಠ.

ಶ್ರೀಜಗದ್ಗುರು ರೇಣುಕಾಚಾರ್ಯರ ರಥೋತ್ಸವ ಆಮಂತ್ರಣ ಪತ್ರಿಕೆ

ಶ್ರೀ ವೀರಶೈವ ಮಹಾಮತಸ್ಥಾಪನಾಚಾರ್ಯರೂ ಶ್ರೀಜಗದ್ಗುರು ಪಂಚಾಚಾರ್ಯರಲ್ಲಿ ಒಬ್ಬರೂ ಆದ ಶ್ರೀಜಗದ್ಗುರು ರೇಣುಕಾಚಾರ್ಯರ ಜಯಂತ್ಯುತ್ಸವವನ್ನು ನವ ಮೈಸೂರಿ ರಾಜ್ಯದ ಧಾರವಾಡ ಜಿಲ್ಲಾ, ರಾಣೇಬೆನ್ನೂರ ನಗರದ ಯಾವತ್ತೂ ಮಹಾಜನಗಳು ರಾಣೇಬೆನ್ನೂರ ಶ್ರೀಜಗದ್ಗುರು ರೇಣುಕ ಮಂದಿರದಲ್ಲಿ ಈ ಕೆಳಗೆ ಬರೆದ ಪ್ರಕಾರ ಕಾರ್ಯಕ್ರಮಗಳನ್ನು ಇಟ್ಟುಕೊಂಡಿರುತ್ತಾರೆ ಕಾರಣ ಯಾವತ್ತರೂ ಗುರುಸೇವಾ ಕಾರ್ಯದಲ್ಲಿ ಭಾಗಿಗಳಾಗಿ ಧನ್ಯರಾಗಬೇಕೆಂದು ಬೇಡುತ್ತೇವೆ

ದುರ್ಮುಖಿನಾಮ ಸಂವತ್ಸರದ ಫಾಲ್ಗುಣ ಶು॥ ೧೨ ಬುಧವಾರ ತಾ॥ ೧೩ ಫೆ-೫೭ ನೇ ದಿವಸ ಪ್ರಾತಃಕಾಲ ಧ್ವಜಾರೋಹಣ, ಅಂದೊಳಗಿನ ಎಲ್ಲ ಈಶ್ವರ ಹಾಗೂ ಬಸವೇಶ್ವರ ದೇವರುಗಳಿಗೆ ಪಂಚಾಮೃತ ಅಭಿಷೇಕ ಮತ್ತು ಅಷ್ಟೋತ್ತರ ಬಿಲ್ವಾರ್ಚನೆ, ಶಿವಭಜನಾ, ಸಾಯಂಕಾಲ ೬ ಘಂಟೆಯಿಂದ ೯ ಘಂಟೆಯವರೆಗೆ ಶ್ರೀ ಅಷ್ಟಪೂಜಾದೇವಿಯ ಉತ್ಸವ ತುಂಬಿಸುವದು.

ಫಾ॥ ಶು॥ ೧೩ ಗುರುವಾರ ಪ್ರಾತಃಕಾಲ ೭॥ ಘಂಟೆಗೆ ಅಗ್ನಿಕುಂಡ ಪ್ರತಿಷ್ಠೆ ಮಧ್ಯಾಹ್ನ ಗಣಾರಾಧನೆ, ಸಾಯಂಕಾಲ ೫ ಘಂಟೆಗೆ ರಥೋತ್ಸವ, ೭ ಘಂಟೆಯಿಂದ ೮ ಘಂಟೆ ವರೆಗೆ ಶ್ರೀ ರೇ ಸಿ. ಕಾ. ಬಾಲಕ-ಬಾಲಕಿಯರಿಂದ "ಕೋಳೂರು ಕೊಡಗೂಸು" ಎಂಬ ವಿಕಾಂಕ ತಾಟಕದ ಅಭಿನಯ, ನಂತರ ಕೋಟಿಯ ತಾಲೆ ಹಾಗೂ ಬಾತಿಲ್ ಮಿರ್ಜ಼ ತಾಲೆಗಳ ವಿದ್ಯಾರ್ಥಿ ವಿದ್ಯಾರ್ಥಿನೀಯರಿಂದ ವಿವಿಧ ವಿಶೇಷಾವಳಿಗಳು, ರಾತ್ರಿ ೮ ಘಂಟೆಯಿಂದ ೯ ಘಂಟೆ ವರೆಗೆ ವಿದ್ವಜ್ಜನರ ಉಪಯಾಸಗಳು.

ಫಾಲ್ಗುಣ ಶು॥ ೧೪ ಶುಕ್ರವಾರ (೧೫-೩-೫೭ನೇ) ದಿವಸ ಪ್ರಾತಃಕಾಲ ೭ ಘಂಟೆಯಿಂದ ಊರೊಳಗಿನ ಪ್ರಮುಖ ಬೀದಿಗಳಲ್ಲಿ ಪಲ್ಲಕ್ಕಿ ಉತ್ಸವ.

ಶ್ರೀ ಜ. ಪಂ. ಭ. ಸಂಭೂ ರೇಣುಕ ಮಂದಿರ
ರಾಣೇಬೆನ್ನೂರ

ಜಗದ್ಗುರುಗಳ ಜಯಂತಿಮಹೋತ್ಸವ

ಧಾರವಾಡ ಜಿಲ್ಲಾ ರಾಣೆಬೆನ್ನೂರ ನಗರದ ಶ್ರೀ ರೇಣುಕಮಂದಿರದಲ್ಲಿ ದಿನಾಂಕ ೩೭-೨-೩೭ ನೇ ಬುಧವಾರ ದಿವಸ ಸಂಜೆ ೭॥ ಘಂಟೆಯಿಂದ ರಾತ್ರಿ ೧೨ ಘಂಟೆಯ ವರೆಗೆ ಶ್ರೀ ರೇಣುಕರಿಗೆ ಶ್ರೀರುದ್ರಾಭಿಷೇಕ ಸಹಸ್ರ ಬಿಲ್ವಾರ್ಚನೆ ಹಾಗು ಶ್ರೀಜಗದ್ಗುರು ವಿಶ್ವಾರಾಧ್ಯ ಮತ್ತು ಪಂಡಿತಾರಾಧ್ಯರ ಲಿಂಗೋದ್ಭವ ಪೋಟೋಗಳಿಗೆ ಸಹಸ್ರ ಬಿಲ್ವಾರ್ಚನೆ ನಡೆದು ೧೨ ಘಂಟೆಯಿಂದ ಬೆಳಗು ೭॥ ಘಂಟೆಯ ವರೆಗೆ ಶ್ರೀ ಜಗ॥ ಪಂಚಾಚಾರ್ಯರ ಭಜಕರು ಮತ್ತು ಅನೇಕ ಭಗವದ್ಭಕ್ತರ ಉಪನ್ಯಾಸಗಳು ನಡೆದು ಶ್ರೀ ಜಗದ್ಗುರು ಪಂಚಾಚಾರ್ಯರ ಜಯಂತಿ ಆಚರಣೆಯಿಂದ ಮಾಘಮಾಸ ಸಕಲ ಕಾರ್ಯಗಳು ಜಯಪ್ರದವಾಗಿ ನಡೆಯಲಿ ಹಾಗು ನಮ್ಮ ನಮ್ಮ ಮೈಸೂರ ರಾಜ್ಯವು ಸುಖ ಸಂಪತ್ತುಗಳಿಂದ ಮೆರೆಯಲೆಂದು ಶ್ರೀ ಜಗದ್ಗುರು ಪಂಚಾಚಾರ್ಯರ ಜಯಘೋಷದೊಡನೆ ಮುಕ್ತಾಯವಾಗಿ ಶ್ರೀ ರೇಣುಕಮಂದಿರದಲ್ಲಿ ಗಣಾರಾಧನೆಯಿಂದ ಸಮಾಪ್ತವಾಯಿತು

ಕಾಶೀಜಗದ್ಗುರುಗಳ ಅಷ್ಟೋತ್ತರ ಸಹಸ್ರ ಕಲಶಾಭಿಷೇಕೋತ್ಸವ ಗೋಕರ್ಣ

ಮಹಾತಿವರಾತ್ರಿ ನಿಮಿತ್ತವಾಗಿ ಗೋಕರ್ಣ ವೀರಶೈವಮಠಕ್ಕೆ ಆಗಮಿಸಿದ ಶಾಶ್ವತಜಗದ್ಗುರು ವಿಶ್ವೈಶ್ವರ ಶಿವಾಚಾರ್ಯ ಮಹಾಸ್ವಾಮಿಗಳವರು ಇದೇ ಮಾಘ ಬಾ॥ ೧೩ ಬುಧವಾರ (೨೭ ೨ ೩೭) ದಿವಸ ಶಿವರಾತ್ರಿಯ ಮಹಾಪೂಜೆಯೊದನೆ ತೀರ್ಥಪ್ರಸಾದ ಕಾರ್ಯಗಳನ್ನು ಮುಗಿಸಿದ ನಂತರ ಭಕ್ತಿಭರಿತವಾದ ಸಭೆಯಲ್ಲಿ ಧರ್ಮೋಪದೇಶಮಾಡುತ್ತ ಗೋಕರ್ಣ ವೀರಶೈವ ಮಠದ ನಿರ್ಮಾಣವನ್ನೂ ಇದರ ಪ್ರಯೋಜನವನ್ನೂ ಇಲ್ಲಿ ಮುಂದೆ ನಡೆಯಬೇಕಾದ ಕಾರ್ಯಗಳನ್ನೂ ವಿವರಿಸುತ್ತಿರುವಾಗಲೆ ಶ್ರೀಜಗದ್ಗುರುಗಳ ಅಷ್ಟೈಶ್ವರ್ಯಯುತ ವಿಳಾಸಾವಾರಕ್ಕೂ ಮೇಲ್ಪಟ್ಟು ನಿಧಿ ಸಂಗ್ರಹವಾಯಿತು ತಾ॥ ೨೮ ೨ ೩೭ ನೇ ದಿವಸ ಶ್ರೀಜಗದ್ಗುರುಗಳ ಅಷ್ಟಪ್ಪತ್ತಿಕಾಮೋತ್ಸವವು ಬಹಳ ವೈಭವದಿಂದ ನಡೆಯುತಿರುವ ತಿಳಿಸುವ,

ಉತ್ಸವಧಾರಿ

ಕಾಶೀಜಗದ್ಗುರುಗಳ ಸಂಚಾರ ಕಾರ್ಯಕ್ರಮ

ಶಿವಮೊಗ್ಗಾ ಜಿಲ್ಲಾ ಸೊರಬ-ಸಾಗರ ತಾಲೂಕಿನ ಸದ್ಭಕ್ತರ ಪ್ರಾರ್ಥನೆಯಂತೆ ಶ್ರೀಕಾಶೀಜಗದ್ಗುರು ಭಗವತ್ಪಾದರು ಗೋಕರ್ಣದಿಂದ ಸಿಸಿ-ಸಿದ್ದಾಪುರ-ತಾಳಗುಪ್ಪೆ, ಸಾಗರ-ಕ್ಯಾಸನೂರು-ಮಳಲಗದ್ದೆ-ಶಿವಪ್ಪನಹರಿಕೆ-ಮುಷ್ಕೋಡಿ-ಮರೂರು ಇತ್ಯಾದಿ ಗ್ರಾಮಗಳಲ್ಲಿ ಅವಸರದ ಮುಕ್ಕಾಂ ಮಾಡಿಕೊಂಡು ಶಿರಾಳಕೊಪ್ಪಮಾರ್ಗವಾಗಿ ಹಿರೇಕೆರೂರು-ಬ್ಯಾಡಗಿಮಾರ್ಗವಾಗಿ ಹುಬ್ಬಳ್ಳಿಗೆ ದಯಮಾಡಿಸುವರಾಗಿ ತಿಳಿದುಬರುತ್ತದೆ. ಹುಬ್ಬಳ್ಳಿ-ಅವರಗುಂಪಗಳಲ್ಲಿ ಉತ್ಸವ ನಡೆಯುವ ಸಂಭವವೂ ಉಂಟು

ಸೂಚನೆ

ಶ್ರೀಜಗದ್ಗುರು ಪಂಚಾಚಾರ್ಯರ ಜಯಂತಿ ಮಹೋತ್ಸವಗಳ ಬಗ್ಗೆ ಲೇಖನಗಳು ಹಿಂತ್ಕಾಗಿ ಬಂದಿರುವ ಮೂಲಕ ಎಲ್ಲವನ್ನೂ ಒಂದೇಸಾರಿ ಪ್ರಕಟಿಸುವದು ಸಾಧ್ಯವಾಗದ್ದರಿಂದ ಕೆಲವನ್ನು ಮುಂದಿನವಾರ ಪ್ರಕಟಿಸಬೇಕಾಗಿರುತ್ತದೆ. ಇದಕ್ಕಾಗಿ ಲೇಖಕ ಕಳುಹಿಸಿದವರು ಯಾವರೀತಿಯಿಂದಲೂ ಅಸಮಾಧಾಪಡಬಹುದಾಗಿ ವಿನಂತಿ.

ಸಂ.—

ಶ್ರೀಜಗದ್ಗುರು ಪಂಡಿತಾರಾಧ್ಯ-ವಿಶ್ವಾರಾಧ್ಯರ ಜಯಂತೀಮಹೋತ್ಸವ

ಶಿವಮೊಗ್ಗಾ ತಾಲೂಕು ಹಾರನಹಳ್ಳಿಯಲ್ಲಿರುವ ವೇ॥ ಗುಬ್ಬಿ ಶಿವರುದ್ರಶಾಸ್ತ್ರಿಗಳು ತಮ್ಮ ವಾಸಗೃಹದಲ್ಲಿ ಇದೇ ಮಾಘ ಬಹುಳ ೧೩ (ತಾ॥ ೨೭-೨-೩೭) ಬುಧವಾರ ಮಧ್ಯಾಹ್ನ ಶಕರುತೋರಣಾದಿಗಳಿಂದಲಂಕೃತವಾದ ಸುಂದರ ಮಂಟಪದಲ್ಲಿ ಶ್ರೀ ಜಗ॥ ಪಂಡಿತಾರಾಧ್ಯ-ವಿಶ್ವಾರಾಧ್ಯರ ಭಾವಚಿತ್ರಗಳನ್ನು ಮೂರ್ತಿಗೊಳಿಸಿ ವಿಧ್ಯುಕ್ತವಾಗಿ ಪೂಜಿಸಿ, ನಂದಿಸಿ, ಸ್ತುತಿಸಿ, ಉಭಯ ಜಗದ್ಗುರುಗಳವರ ಅಷ್ಟೋತ್ತರ ಶತನಾಮಾವಳಿಯನ್ನು ಪಠಿಸಿ ಮಂಗಳವನ್ನು ಪಾಡಿ ನೆರೆದ ಸದ್ಭಕ್ತರಿಗೆ ಪ್ರಸಾದವನ್ನು ವಿನಿಯೋಗಿಸಿದ ಬಳಿಕ ಸಂಕ್ಷಿಪ್ತವಾಗಿ ಧರ್ಮವಿಷಯಕವಾಗಿ ಭಾಷಣ ಮಾಡಿ ಸರ್ವರನ್ನೂ ಸಂತಸಗೊಳಿಸಿದರು

ಓರ್ವ ಪ್ರತ್ಯಕ್ಷದರ್ಶಿ

ಶಿವರಾತ್ರಿ ಪೂಜಾಮಹೋತ್ಸವ

ಚಿತ್ರಮರ್ಗ ಡಿ॥ ಆಕೋಳ ಸಿದ್ಧಾಪುರ ಸಿದ್ಧೇಶ್ವರಮಠದ ಬ್ರಹ್ಮಗಿರಿ ಚೆನ್ನವೀರಸ್ವಾಮಿಗಳಿಂದ ತಾರೀಖು ೨೭-೨-೩೭ ನೇ ಬುಧವಾರ ರಾತ್ರಿ ಮಹಾಶಿವಯೋಗದ ಪ್ರಯುಕ್ತ ಅನೇಕ ಜಪ ಭಕ್ತಾದಿಗಳೊಂದಿಗೆ ಸಿದ್ಧೇಶ್ವರ ಮಠದ ಬಳಿ ಇರುವ ಶ್ರೀಶಂಕೇಶ್ವರಸ್ವಾಮಿಗೆ ರುದ್ರಾಭಿಷೇಕ ಭಕ್ತಜನರಿಂದ ಯಿಂದ ಭಜನೆ ಕೀರ್ತನೆ ಮತ್ತು ಕಾದಲೂರುವಾಸಿ ಮೇಧಾವಿ ಗೀರ್ವಾಣಭಾಷಾ ರುದ್ರಾರ್ಚಿಕಯನಿಂದ ಗೀರ್ವಾಣಪಠನವೂ ಇತ್ಯಾದಿ ಕಾರ್ಯಗಳು ಸಾಂಗವಾಗಿ ಮಹಾಶಿವಯೋಗವು ವಿಜೃಂಭಣೆಯಿಂದ ಜರುಗಿದ ನಂತರ ಮಾರನೇ ದಿನ ಬಂದ ಭಕ್ತಾದಿಗಳಿಗೆ ಅನ್ನ ಸಂತರ್ಪಣೆಯೊಂದಿಗೆ ಮುಕ್ತಾಯವಾಯಿತು

ದರ್ಶನಧಾರಿ

ಶಿವರಾತ್ರಿ ಪೂಜಾಮಹೋತ್ಸವ ಯಡಗೋಡ

ಧಾರವಾಡ ಜಿಲ್ಲಾ ಹಿರೇಕೇರೂರು ತಾಲ್ಲೂಕು ಯಡಗೋಡ ಗ್ರಾಮದಲ್ಲಿ ಸ್ಥಾಪಿಸಿರುವ ಶ್ರೀಮಲ್ಲಿಕಾರ್ಜುನ ಶಿವಾ ಲಿಂಗೋದ್ಭವಮೂರ್ತಿಗೂ ಹಾಗೂ ಶ್ರೀ ವಿಶ್ವಾರಾಧ್ಯ ಶಿವಾ ಲಿಂಗೋದ್ಭವಮೂರ್ತಿಗೂ, ಕೊಂಡೇಶ್ವರಿಗೂ ಸದರೀ ಗ್ರಾಮದ ಸಾಕಶಾಲಾ ಪಂಚಾಂಗಕರ್ತರಾದ ವೇ॥ ಸಿದ್ಧಾಂತೀ ರುದ್ರಾರಾಧ್ಯ ಶಾಸ್ತ್ರಿಗಳು ಬಸವನಾಳಮಠ ಇವರಿಂದಲೂ ಇವರ ವಿದ್ಯಾರ್ಥಿಗಳಿಂದಲೂ ಸಕ್ತಮ ವಿಧ್ಯುಕ್ತ ಪ್ರಕಾರವಾಗಿ ಶಿವರಾತ್ರಿಯ ಪೂಜೋತ್ಸವಾದಿಗಳು ಜರುಗಿತು.

ಈ ಪೂಜೆಗೋಸ್ಕರವಾಗಿ ಮುದ್ದಾಂ ಡಾವಣಗೆರೆಯಿಂದಲೂ, ಶಿಕಾರಿಪುರದಿಂದಲೂ ಇವರು ಬಂದು ಸ್ವಾಮಿಯ ಪೂಜೋತ್ಸವಾದಿಗಳಲ್ಲಿ ಸೇವಾಸಕ್ತಿಯಿಂದ ಶಿವಳ್ಳಿಯವರೆಗೆ ಪಾತ್ರರಾದರು ಶ್ರೀ ರುದ್ರಾರಾಧ್ಯ ಶಾಸ್ತ್ರಿಗಳು ಉಪದೇಶೋಪದವಾಗಿ ಮಾಡಿದ ಅನ್ನ ಸಾರ್ಥಕವಾಗಿದೇಶಾದರೆ ಹರ-ಗುರು, ದೇಶಕಾದಿಗಳಲ್ಲಿ ಭಕ್ತಿಶ್ರದ್ಧಾದಿಗಳಿಸ್ಥಿಟ್ಟು ಶಿವಕೆಲ್ಲಿ ಮನಸ್ಸು ಬೆರೆದೊರಿಸಿಕೊಳ್ಳಬೇಕೆಂದು ಹೋಧಿಸಿದ್ದಲ್ಲಿ ಶ್ರೀ॥ ಪಂಡಿತ ಕಾಶೀನಾಥಶಾಸ್ತ್ರಿಗಳ ಮಹಾ ಗುರುಪುಂಗವರು ತಮ್ಮ ಜಪ್ಯವನ್ನು ಸೂರ್ಯಾಂಶ್ರರಿರುವ ವರೆಗೆ ಇರುವಂತೆ ಸಾರ್ಥಕಮಾಡಿಕೊಂಡು ಶಿವಸ್ಥಿಯಿಟ್ಟಾರೆ. ಇವರು ಏಂಬಿಗೂ, ಅತಂದಶಿಸ್ಥಿ ಎಷ್ಟಿಗೂಡೆ ತಮ್ಮ ಕ್ರಕಾರ ಕಾರ್ಯ ದಲ್ಲಿಯೇ ತೊಡಗಿದ್ದು ಕಡೆಗೆ ಶಿವಸ್ಥಿಯಿಟ್ಟು ಸೇರಿದರು. ಇಂದು ನಾವು ಅವರಲ್ಲಿ ಮಾರ್ಗದರ್ಶಕರೆಂದು ಹೊಗಳಿ ಇಂದಿನ ಬಹು ಅವಶ್ಯಕಂದೆಯಲ್ಲಿ ಅವರ ಅಕ್ಕಳ್ಯ ಅವರ ಉಟುಂಬವರ್ಗಕ್ಕೂ ಶಿವಕೆಲ್ಲಿ ಕಾಂತಿ ಸುಖಗಳಷ್ಟು ಪ್ರಕ್ಕಿಗೊಳಿಸಲೆಂದು ಹಾರ್ದಿಕ ಸೋಣ ಎಂದು ಶೀ ಮಂಗಳಲೊಷಣೆ ಕಾರ್ಯ [illegible]

ಯಡಗೋಡ ಗ್ರಾಮಸ್ಥರು

ಪಂ॥ ಕಾಶೀನಾಥಶಾಸ್ತ್ರಿಗಳವರ ಪುಣ್ಯತಿಥಾರಾಧನೆ

ಹಂಪೀಕೇಸರಿಗಳ ಪ್ರಾಣಸ್ವರೂಪರಾದ ಶ್ರೀ॥ ಪಂ॥ ಕಾಶೀನಾಥಶಾಸ್ತ್ರಿಗಳವರು ಸ್ಥೂಲದೇಹವನ್ನು ತ್ಯಜಿಸಿ ಸೂಕ್ಷ್ಮದೇಹಧಾರಿಗಳಾಗಿ ಇದೇ ಫಾಲ್ಗುಣ ಶು॥ ೧೧ ಸೋಮವಾರಕ್ಕೆ (ತಾ॥ ೧೧-೩-೩೭ ಇಂದಿಗೆ) ಏಳು ವರ್ಷಗಳು ಮುಗಿದವು ಇಂದಿಲ ದಿವಸ ಸನಾತನ ವೀರಶೈವ ಧರ್ಮೂಪಬೃಂಹಣಗೈಗೆಲ್ಲಾ ಚಿರಸ್ಮರಣೀಯ ದಿನವಾಗಿದ್ದ ಮೂಲಕ ಅವರ ಸಜೋದರರಾದ ಶ್ರೀ॥ ಮಹಾದೇವಯ್ಯನವರು ಶ್ರೀ ಶಾಸ್ತ್ರಿಗಳವರ ಆತ್ಮಶ್ರೇಯಸ್ಸಿಗಾಗಿ ತಮ್ಮ ಗೃಹದಲ್ಲಿ ವಿಧ್ಯುಕ್ತ ರೀತಿಯಲ್ಲಿ ಪೂಜಾ ಕಾರ್ಯಕ್ರಮವನ್ನು ಆಚರಿಸಿದ್ದಲ್ಲದೆ ಗದಿಗೆಯಲ್ಲಿ ಅಲಂಕಾರದೊಡನೆ ಪೂಜೆಯನ್ನು ನೆರವೇರಿಸಿದರು.

ದರ್ಶನಧಾರಿ.

ಸ್ವೀಕಾರ

ಕೊಬಾಯಿ ಪ್ರಾಂತ ಪೂರ್ಣಾನಗರದ ದಾವೋಷಿ ವಿ. ಹಬ್ಬ್ಯ. ಡಿ. ವರ್ಷಾಶನಿಲ್ಲಿರುವ ಶ್ರೀ ಎಸ್. ಸಿ. ಹಿರೇಮಠ ವೆನಕೆಂಪ್ಪ ಇವರು ತಮ್ಮ ಮನೆಯಲ್ಲಿ ನಡೆಸಿದ ಶ್ರೀ ವರದಶಂಕರ ವ್ರತ, ಪೂಜಾನುಮೋಹ್ಯ ಕೃನವನ್ನು ಪ್ರಭಾಪೋಷಣಕ್ಕಾಗಿ 2 ರೂ ಗಳನ್ನು ಸಮರ್ಪಿಸಿ ಕಳುಹಿಸಿರುತ್ತಾರೆ.

ಶಿವಮೊಗ್ಗಾ ಡಿ॥ ಜೊನ್ನಾಳಿ ತಾಲ್ಲು ರಾಂಪುರ ಗ್ರಾಮದ ಪಾಲ್ಕಾರ್ ಪಟೇಲ್ ಮಹದೇವಪ್ಪನವರು ತಾ॥ ೧೧-೩-೩೭ ಸೋಮವಾರ ದಿವಸ ತಮ್ಮ ನೂತನ ಗೃಹಪ್ರವೇಶಸಮಾರಂಭವನ್ನೂ ಅದೇ ಕಾಲಕ್ಕೆ ಅನೇಕ ವೀರಶೈವ ಅಂಗಮ ಮಹುಗಳಿಗೆ ಲಿಂಗಧಾರಣ ಶಿವದೀಕ್ಷಾ ಸಮಾರಂಭವನ್ನೂ ಹೊಸ್ಕೊಪ್ಪ ಹಿರೇಮಠದ ಪಟ್ಟಾಧ್ಯಕ್ಷ ಶ್ರೀ॥ ಷ॥ ಬ್ರ॥ ರೇವಣಸಿದ್ಧ ಶಿವಾಚಾರ್ಯಸ್ವಾಮಿಗಳ ಸನ್ನಿಧಿಯಲ್ಲಿ ನೆರವೇರಿಸಿದ ಸಮಯದಲ್ಲಿ ಪ್ರಭಾಪೋಷಣಕ್ಕಾಗಿ ಸಮರ್ಪಿಸಿದ 1 ರೂ. ಯು ಶ್ರೀ ಎಂ ಹಾಲಸಿದ್ದಯ್ಯ ಸ್ಕೂಲ್ ಮಾಸ್ಟರ್ ರಾಂಪುರ ಇವರ ದ್ಯಾನಾ ಕಲ್ಪಿರುತ್ತದೆ.

ರಾಯಚೂರು ಜಿಲ್ಲೆಯ ಸಿಂಧೆನೂರು ತಾಲೂಕು ಸುಂತಾನಪುರದಲ್ಲಿರುವ ಶ್ರೀ ಗಂಗಾಧರ ಕರಿವೀರಪ್ಪ ಗೌಡರು ತಾವು ಕಟ್ಟಿಸಿದ ಶಿವಮಂದಿರದಲ್ಲಿ ಶಾಲಿವಾಹನ ೪-೩-೩೭ ಸೋಮವಾರ ದಿವಸ ಶಿವಲಿಂಗಪ್ರತಿಷ್ಠಾ ಮಹೋತ್ಸವವನ್ನು ನೆರವೇರಿಸಿದ ಕಾಲದಲ್ಲಿ ಪ್ರಭಾ ಪೋಷಣಕ್ಕಾಗಿ 1 ರೂಪಾಯಿಯನ್ನು ಸಮರ್ಪಿಸಿ ಕಳಿಸಿರುತ್ತಾರೆ

ಚಿತ್ರಮರ್ಗ ಡಿ॥ ಮೊಳಕಾಲ್ಮೂರು ತಾಲೂಕು ಆಕೋಳ ಸಿದ್ಧಾಪುರ ಬ್ರಹ್ಮಗಿರಿಯಲ್ಲಿರುವ ಶ್ರೀ ಸಿದ್ಧೇಶ್ವರ ಮಠದಲ್ಲಿ ಮಹಾಶಿವರಾತ್ರಿ ಪೂಜಾಮಹೋತ್ಸವನ್ನು ವಿಶ್ವಂಭರನಿಯಂತ ನೆರವೇರಿಸಿದ ಸಮಯ ದಲ್ಲಿ ಶ್ರೀ ಚೆನ್ನವೀರಸ್ವಾಮಿಗಳು ಪ್ರಭಾಪೋಷಣಕ್ಕಾಗಿ 1 ರೂಪಾಯಿಯನ್ನು ಸಮರ್ಪಿಸಿ ಕಳಿಸಿರುತ್ತಾರೆ.

ಶಿವಮೊಗ್ಗಾ ಡಿ॥ ಶವಲಿಮರ್ಗ ಮಹಾಂತಿಪ್ಪ ಮಠದ ಶ್ರೀ॥ ಷ॥ ಬ್ರ॥ ವೃಷಭಲಿಂಗಶಿವಾಚಾರ್ಯ ಸ್ವಾಮಿಗಳು ಅಣಾಶಾಶ್ರಮದ ಪ್ರಾರಂಭೋತ್ಸವ ಸಮಯದಲ್ಲಿ ಪ್ರಭಾಪೋಷಣೆಗೆ ವಾಗ್ದಾನ ಮಾಡಿದ 5 ರೂ ಗಳು ಮಠದ ವಿಳಾಸದ ದ್ಯಾರಾ ಕಲ್ಪಿಯಿತ್ತಿದೆ

ಶಿವಮೊಗ್ಗಾ ಜಿಲ್ಲಾ ಉಭಯಭಂಡಾರು ಶೋಷ ಕಟ್ಟಿಸಿದ ಹಿರೇಮಠದ ಮಲಯಶಾಂತೇಶ್ವರ ಯಾತ್ರಾ ಮಹೋತ್ಸವ ಸಮಯದಲ್ಲಿ ಪ್ರಭಾಪೋಷಣೆಗಾಗಿ ಸಮರ್ಪಿಸಿದ 1 ರೂ. ಹಾಗೆ ಹಿರೇಮಠ ಇವರ ದ್ಯಾನಾ ಕಲ್ಪಿರುತ್ತದೆ.

ಈ ಮೇಲ್ಕಂಡ ಮಹಾಶಯರಿಗೆಲ್ಲಾ ಶ್ರೀಜಗದ್ಗುರು ಪಂಚಾಚಾರ್ಯರು ಶಿಕ್ಷಮಾಂಗಲ್ಯ [illegible] ಎಂದು ಹಾರ್ದಿಸುತ್ತೇವೆ.

ಏಪ್ರಿಲ್ ೧ನೆಯ ತಾರೀಖಿನಿಂದ ಚಲಾವಣೆಗೆ ಬರುವ ನಯೆಪೈಸೆ ನಾಣ್ಯಗಳ ಚಿತ್ರವು

ಒಂದು ರೂಪಾಯಿ=೧೦೦ ನಯೇಪೈಸೆ

ಅರ್ಧ ರೂಪಾಯಿ=೫೦ ನಯೇಪೈಸೆ

ನಾಲ್ಕು ಆಣೆ=೨೫ ನಯೇಪೈಸೆ

ಮೂರು ಆಣೆ=೧೯ ನಯೇಪೈಸೆ

ಎರಡು ಆಣೆ=೧೨ ನಯೇಪೈಸೆ

ಒಂದು ಆಣೆ=೬ ನಯೇಪೈಸೆ

ಅರ್ಧ ಆಣೆ=೩ ನಯೇಪೈಸೆ



ನವಕರ್ನಾಟಕ ಜ್ಞಾನಗುರು ವಿದ್ಯಾಪೀಠ ಹಾಗು ಅನಾಥಾಶ್ರಮ

ಶಿವಮೊಗ್ಗಾ ಜಿಲ್ಲಾ ತೀರ್ಥಹಳ್ಳಿ ತಾಲೂಕು ಕವಲೆದುಗ್ಗ ಶ್ರೀ ಮಹಾಂತಿನ ಮಠದಲ್ಲಿ ಸದರಿ ಆಶ್ರಮವನ್ನು ಸ್ಥಿಮಿನಿದ ಗುರುಗಳು ಸುಮಾರು ಹನ್ನೊಂದನೆಯ ಶತಮಾನದಲ್ಲಿದ್ದಂಥ ಜಾತಿಕೊಟ್ಟ ತಳಹದಿಯ ಮೇಲೆಯೇ ಅಂದರೆ ಹಿಂದಿನ ಲಕ್ಷಪತ್ರಗಳಲ್ಲಿಯೂ. ಶಾಸನಗಳಿಂದಲೂ ಮತ್ತು ನೇರ ಮೇಟಿನ ದಾಖಲೆಯಲ್ಲಿ ರೈಸ್ ಎಂಬ ಸರದೇಶದ ಯಾತ್ರಿಕನು ಈ ಮತಕ್ಕೆ Centre of Education ಎಂಬ ಹೆಸರನ್ನು ಕೊಟ್ಟಿದ್ದರ ಮೇಲೆ, ಶಿಕಾರಿಪುರ, ಶಿವಾಕೊಪ್ಪ ಈ ಕಡೆಗಳಲ್ಲಿ ಈ ಆಶ್ರಮವನ್ನು ಕಕ್ಕಾಗಿಟಿದ ಸ್ವತಂತ್ರ ದಿನಾಚರಣೆಯಲ್ಲಿ ತ್ಯಾಗಿಕ ಅಮಲ್ಯಾರ್ಜರವರ ಅಧ್ಯಕ್ಷತೆಯಲ್ಲಿ ಪ್ರಾರಂಭಮಾಡಿ, ವಿದ್ಯಾರ್ಥಿಗಳಿಗೆ ಅನಾಕೂಲವಡಿಸಿದ್ದು ಸರ್ವರಿಗೂ ತಿಲಿದ ವಿಷಯವಾಗಿದೆ. ಈಗ ಸದರಿ ಆಶ್ರಮವನ್ನು ತೀರ್ಥಹಳ್ಳಿ ಮತ್ತು ಹೊಸನಗರಗಳಲ್ಲಿ ನಡೆಯಿಸಲು ಪ್ರಾರಂಭೋತ್ಸವವನ್ನು ೧೩ ಮತ್ತು ೧೭ ನೇ ತಾರೀಖುಗಳಲ್ಲಿ ವಿಜೃಂಭಿಸುವಂತೆ ಮಾಡಿರುತ್ತದೆ.

ಉದ್ದೇಶ

೧. ಬಿಕ್ಕ ಮಕ್ಕಳಲ್ಲಿರುವ ಕೆಟ್ಟ ಪದ್ಧತಿಗಳನ್ನು ತೆಗೆದು ಸನ್ಮಾರ್ಗಕ್ಕೆ ತರುವುದು.

೨. ತಂದೆ-ತಾಯಿಗಳ ಮತ್ತು ಸರ್ಕಾರದವರ ಆಸ್ಥೆಕತೆ ಅನಲಂಬಿಸದೆ ಪ್ರತಿಯೊಬ್ಬ ವಿದ್ಯಾರ್ಥಿಯೂ ತಪ್ಪ ಜೀವನವನ್ನು ಸಾಗಿಸಿಕೊಂಡು ಹೋಗುವ ಮಾರ್ಗವನ್ನು ತೋರುವುದು.

೩. ಆರೋಗ್ಯಕ್ಕೂ ಮೆಲ್ಲು ಆಚಾರಕ್ಕೂ ಇರುವ ಹೊಂದಿಕೆಯನ್ನು ತಿಳಿಯಪಡಿಸುವುದು.

೪. ಜೀವಾತ್ಮನಿಗೂ, ಪರಮಾತ್ಮನಿಗೂ ಇರುವ ಹತ್ತಿರ ಸಂಬಂಧವನ್ನು ತೋರಿಸುವುದು.

೫. ಜಡತನದ ಬಿಟ್ಟಿಸಿಗೆಯಿಂದ ಬಂದಿರುವ ಜ್ಞಾನಾರ್ಜನೆಗೆ ಅಡ್ಡಿ, ದಾಸ್ಯಕ್ಕು ಮತ್ತು ಅತ್ಯ ಗೌರವಕ್ಕೆ ಕೊರತೆ ಇವೇ ಮುಂತಾದ ಸಂಶಯ ಗಳನ್ನು ನಿವಾರಣೆ ಮಾಡುವುದು.

೬. ಪ್ರತಿಯೊಬ್ಬ ವಿದ್ಯಾರ್ಥಿಗೂ ಆಚಾರವಂತ ನಾಗಿ, ಅಪ್ಪತ್ರೈಗಳನ್ನು ಧೈರ್ಯರಿಸಿ, ಬ್ರಹ್ಮಚರ್ಯ ವನ್ನು ಪಾಲಿಸಿಕೊಂಡು, ಸನ್ಮಾರ್ಗವನ್ನು ತೋರಿಸಿ ಕೊಡುವ ಯೋಗಾಸನಗಳನ್ನು ತೋರಿಸಿಕೊಡುವುದು.

ಈ ಒಗ್ಗೆ ಆಶ್ರಮದ ರೀತಿ-ನೀತಿಗಳನ್ನು ಮತ್ತು ಉದ್ದೇಶ ಕಾರ್ಯಕಲಾಪಗಳನ್ನು ಆ ದಿನ ವಿಶದ ಪಡಿಸಲಾಗುತ್ತದೆ. ಸಾರ್ವಜನಿಕರು ಕಲೆಸು, ತಮ್ಮ ಸಲಹೆಗಳನ್ನು ನೀಡಲು ಸರ್ವರೂ ಸಹಕರಿಸಬೇಕಾಗಿ ಪ್ರಸಿದ್ಧಪಡಿಸಿದ್ದೇವೆ. ಪ್ರತಿ ಕಾಲ್ಪಡಿಕೆನಲ್ಲಿಯೂ ಎರಡೆರಡು ಆಶ್ರಮಗಳನ್ನು ತೆರೆಯಬೇಕೆಂಬ ಆಲೋಚನೆ ಇದೆ.

ವಿಶೇಷ :— ಪ್ರಾತಃಕಾಲ ೪-೩೦ ಕ್ಕೆ ದೇವರ ನಾಮ ಹೇಳುತ್ತಾ ಏಳಬೇಕು. ನಂತರ ವಿಧಿ ನೇಮ ದಂತೆ ಹೊರಗಡೆ ಜೋಗಬೇಕು. ಬಟ್ಟೆ, ಪೊರಕೆ ನೀಟಾದ ಕೊಳಕನ್ನು ತೆಗೆಯಬೇಕು. ಕೈಕಾಲು, ಮುಖ ತೊಳೆದ ನಂತರ ವಿಧಿನಿಯಮದಂತೆ ಎಲ್ಲಾ ಕಾರ್ಯಗಳನ್ನೂ ಮಾಡಬೇಕು. ಅಮೇಲೆ ಪ್ರಾರ್ಥನಾರೂಪವಾದ ವೇದಗಳನ್ನು ಬರೆಯಿಸ ಬೇಕು. ವೇಳಾಪಟ್ಟಿಯಂತೆ ಕೆಲಸ ಕಾರ್ಯದಲ್ಲಿ ತೊಡಗಬೇಕು. ಎಲ್ಲು ಗಂಟೆಗೆ ಉಣುವ ಮುಂಚಾ ಕರ ಸ್ನಾನಮಾಡಬೇಕು. ಮಡಿಬಟ್ಟೆಗಳನ್ನುಟ್ಟು ಜೇವರಾಮ ಮೇಲಬೇಕು. ೧೯ ಗಂಟೆಗೆ ಪಾಠ ಶಾಲೆಯ ಕಾರ್ಯಕ್ರಮಗಳು ಪ್ರಾರಂಭವಾಗಿಬೇಕು. ಪ್ರತಿ ಹತ್ತು ಹುಡುಗರಿಗೆ ಒಬ್ಬ ಗುರುಗಳಿರಬೇಕು. ಮಕ್ಕಳ ಸಂಶಯಗಳು ತರಗತಿಯಲ್ಲಯೇ ನಿವಾರಣೆ ಲ್ಪಡಬೇಕು. ಪಾಠಶಾಲೆಯ ಬೆಗಿನ ಕಾರ್ಯಕ್ರಮ ಗಳಲ್ಲಿ ಪಾಠಪ್ರವಚನಗಳಿಗೆ ಮುಖ್ಯ ಗಮನವೀಯ ಬೇಕು. ೧ ಘಂಟೆಗೆ ಊಟವಾದ ನಂತರ ೫ ಘಂಟೆ ಯವರೆಗೆ ನಡೆಯುವ ತರಗತಿಗಳಲ್ಲಿ ಕೈಗಾರಿಕೆಗಳಿಗೆ ಪ್ರಾಶಸ್ತ್ಯವನ್ನು ಕೊಡಬೇಕು. ೩ ಘಂಟೆಯಲ್ಲಿ ಹಣ್ಣು ಹಾಲು ಪಂಚಿಬೇಕು.

ಶ್ರೀಗಳವರ ಈ ಧರ್ಮಕಾರ್ಯಕ್ಕೆ ಸಹಕರಿಸಿ, ಈ ಆಶ್ರಮವನ್ನು ಪ್ರಕಾಶಗೊಳಿಸಬೇಕಾಗಿ ಪ್ರಸಿದ್ಧ ಪಡಿಸಿದೆ.

ವಿ. ಸೂ:—೧. ಯಾರು ಬೇಕಾದರೂ ವಿದ್ಯಾ ಸೇಕಕ್ಕೆ ಆಶ್ರಮದ ನಿಬಂಧನೆಯ ಪ್ರವೇಶ ಪತ್ರ ದೊಂದಿಗೆ ಮಕ್ಕಳನ್ನು ಸೇರಿಸಬಹುದು. ಮಕ್ಕಳಿಗೆ ಊಟ, ಬಟ್ಟೆ, ಪುಸ್ತಕಗಳು ಮೊದಲಾದುವುಗಳನ್ನು ಆಶ್ರಮವೇ ನೋಡಿಕೊಳ್ಳುತ್ತದೆ.

೨. ವೇದಾಧ್ಯಯನ ಕಲಿಯಲು ಆಪೇಕ್ಷೆಯುಳ್ಳವ ರಿಗೂ ಸಹ ಮೇಲ್ಕಂಡಂತೆಯೇ ವಿವಾಹು ಮಾಡ ಲಾಗುತ್ತೆ.

೩. ಎಲ್ಲರೂ ಆಶ್ರಮದ ನಿಬಂಧನೆಗಳಿಗೆ ಒಳಪ ಟ್ಟಿರಬೇಕು.

ವ್ಯವಸ್ಥಾಪಕ
ಶ್ರೀ ಮಹಾಂತಿಪಮಕ, ಕವಲೆದುಗ್ಗ.

ಮಹಾಕೂಟೇಶ್ವರ ದೇವರ ರಥೋತ್ಸವ ನಿನೆದಲ್ಲಿ ಬದಲಾವಣೆ

ಮಹಾಕೂಟೇಶ್ವರ ದೇವಸ್ಥಾನದ ಜೀರ್ಣಾನಿರಾದ ಶ್ರೀ ಕೆ. ಎಂ. ಸಬ್ಬಣಿಟ್ಟಿ ಅವರು ಈ ರೀತಿ ತಿಳಿಸು ತ್ತಾರೆ. ಶ್ರೀ ಮಹಾಕೂಟೇಶ್ವರ ದೇವರ ರಥೋತ್ಸ ವವು ಪ್ರತಿವರ್ಷ ವೈಶಾಖ ಶುದ್ಧ ಪೌರ್ಣಮಿಯಂದು ನೆರವೇರುತ್ತ ಬಂದಿದ್ದಾಗಿದೆ. ಆದರೆ ಆ ಸಮಯದಲ್ಲಿ ಮುಂಗಾರು ಗುಡುಗಿನ ಮಳೆಗಳು ಆಗುತ್ತಿದ್ದು ದೂರ ದಿಂದ ಬರುವ ಯಾತ್ರಿಕರಿಗೆ ಬಹಳ ತೊಂದರೆಯಾಗು ವದು ಆದ್ದರಿಂದ ಈ ತೊಂದರೆ ತಪ್ಪಿಸುವದಕ್ಕಾಗಿ ವಿಚಾರ ಮಾಡಲು ಭಕ್ತಜನರ ಸಭೆಯೊಂದನ್ನು ತಾ|| ೩-೯-೫೬ ರಂದು ಶ್ರೀ ಮ. ನಿ. ಪ್ರ. ಸ. ಸದಾ ಶಿವ ಮಹಾಸ್ವಾಮಿಗಳು ಹಾಗೂ ಇತರ ಸಜ್ಜನಿಕೆಯ ಅಧ್ಯಕ್ಷತೆಯಲ್ಲಿ ಕರೆಯಲಾಗಿತ್ತು. ಸಭೆಯಲ್ಲಿ ಸರ್ವರ ಸಲಹೆ ಪಡೆದು ರಥೋತ್ಸವವನ್ನು ಪ್ರತಿವರ್ಷ ಚೈತ್ರ ಶುದ್ಧ ಪೌರ್ಣಮಿಗೆ ನೆರವೇರಿಸಬೇಕಾಗಿ ನಿಶ್ಚಯಿಸಲಾಯಿತು ಆದ್ದರಿಂದ ಈ ವರ್ಷದ ಜಾತ್ರೆಯು ಚೈತ್ರ ಶುದ್ಧ ಪೌರ್ಣಮಿ ಏಪ್ರಿಲ್ ೧೪ ರಂದು ನೆರವೇರಿಸುವದು, ಭಕ್ತಜನರು ಆಗಮಿಸಬೇಕು.

ಪ್ರಕಟನೆ

"ಶ್ರೀಜಗದ್ಗುರು ಕಂಜಸೀಠಗಳ ಪರಿಚಯ" ಎಂಬ ಗ್ರಂಥವು ಮುದ್ರಣವಾಗಿದೆ—ಬೆಲೆ ೧೨ ಆಣೆ. ಇದರಲ್ಲಿ ಶ್ರೀ ರಂಭಾಪುರೀ, ಉಜ್ಜಯಿನೀ, ಕೇದಾರ, ಶ್ರೀಶೈಲ, ಕಾಶೀ ಪೀಠಗಳ ಸಂಕ್ಷೇಪಚರಿತ್ರವೂ ಒಂದೊಂದು ಪೀಠಕ್ಕೆ ಈವರೆಗೂ ಆಗಿರುವ ಸಿದ್ಧಾಂತಿ ಚಾರಿಗಳ ಸಂಖ್ಯೆ ಹಾಗೂ ಶ್ರೀಜಗದ್ಗುರುಗಳವರ ಸುಂದರವಾದ ಫೋಟೋಗಳ ಅಂದವಾದ ಮುದ್ರಣ ದಿಂದ ರಾರಾಜಿಸುತ್ತಿವೆ. ಈ ಪೂಜ್ಯಗ್ರಂಥವನ್ನು ಕರಿಸಿಕೊಳ್ಳಿರಿ.

ವಿಳಾಸ :—ಶ್ರೀ ವಿರೂಪಾಕ್ಷಶಾಸ್ತ್ರಿಗಳು,
ಪುರಾಣಿಕಮಠ,
ಪೋ|| ಹಿರೇಹಡಗಲಿ, ಜಿ|| ಬಳ್ಳಾರಿ.

"ಪರರಾಷ್ಟ್ರವನೆಂತಹುದೇ ಆದರೂ, ಭಾರತವು ತಪ್ಪ ಗಡಿಯೊಳಗೆ ಪರರಾಷ್ಟ್ರ ಸೈನ್ಯವ ಅಗಮಿಸಕ್ಕವಕಾಶ ಕೊಡುವುದಿಲ್ಲ. ಯಾವುದೇ ರಾಷ್ಟ್ರವು ಕಾಶ್ಮೀರದ ಮೇಲೆ ದಾಳಿ ನಡೆಸಿದರೂ ಅದು ಕಾಶ್ಮೀರದ ಮೇಲಿನ ದಾಳಿ ಮಾತ್ರವಲ್ಲ; ಭಾರತದಮೇಲಿನ ದಾಳಿಯೂ ಹೌದು" ಎಂದು ಶ್ರದ್ಧಾಳು ನೆಹರೂ ಅಭಿಲಂಬಿಸಿ ಘೋಷಿಸಿದರು.

Printed and Published by Brahmasrimathadhyaksha Sri Mahadevaiah at Sri Panchacharya Electric Press, Sayaji Rao Road, Mysore

REGISTERED No. M 2266 « ಶ್ರೀವೀರಸ್ಕಂದ ಸಂಜಾತಾಚಾರ್ಯಾ ಪ್ರಸಿದ್ಧಂತು » REGISTERED No. M 2266

ಸಂಚಾರ್ಯಪ್ರಭಾ

ಪ್ರತಿ ಸೋಮವಾರ ಮೈಸೂರು ನಗರದಲ್ಲಿ ಪ್ರಕಟಿಸಲ್ಪಡುವುದು.

ಸಂಜಾತ್ಯಸಪಂಚಾಚಾರ್ಯನಿಕರ ಸಂಜಾತ್ಯವೀರಾವಿರ್ಭರ । ಸಂಜಾತ್ಯಶಿವವಿಶಾಚಕರ ಪರಶರಭ್ರಸಂಜಲಿಂಗೋದ್ಭವರ ॥
ಸಂಜಾತಾಚಾರಿಯಾಮುಕರ ಪರಿಲಸತ್ಪಂಚಾತ್ಮರೋದ್ಗೋದ್ಗರ । ಸಂಜಾತಾಚಾರ್ಯಜಗದ್ಗುರುಕ್ಷತ್ರಿಯವರ್ಯಾಲಿಪ್ರವೀರೋತ್ತಮಂ ॥

ಸಂಸ್ಥಾಪಕರು—ಜಾಗತಿಕರು ಬೃಹತ್ಕಾರ್ಯಕ್ಷಕಾಚಾರ್ಯ ವರ್ಯ ಪಂಡಿತ ಶ್ರೀ ಶಾಸ್ತ್ರಿಗಳವರು.

ಚಾರ್ಜಿಗೆ ವರ್ಷಂ ೩ ರೂ.] ಸಂಪಾದಕರು—ಜಾಗತಿಕರು ಬೃಹತ್ಕಾರ್ಯಕ್ಷಕಾಚಾರ್ಯ ವರ್ಯ ಪಂಡಿತ ಶ್ರೀ ಮಹಾದೇವಯ್ಯನವರು [ಪ. ಪಿ. ಖರ್ಚು ಸೇರಿ ೩ರೂ ೧೦ ಆ.

ಸಂಪುಟ ೩೦] ಸೋಮವಾರ ತಾ॥ ೧೮ ನೇ ಮಾರ್ಚಿ ೧೯೩೭ [ಸಂಚಿಕೆ ೪೪

ಪತ್ರವ್ಯವಹಾರ

[ಬಾತ್ಮೀದಾರರು ಆಫೀಸಾಯ ಪಹುವ ಲೇಖನಗಳಿಗೆ ಪತ್ರಕಾರರಲ್ಲಿ ಜವಾಬ್ದಾರರಲ್ಲ ಎಂಬ ವಿಷಯವನ್ನು ಸರ್ವರೂ ಲಕ್ಷ್ಯದಲ್ಲಿಡಬೇಕಾಗಿದ್ದು. —ಸಂ.]

ಪಟ್ಟಾಧಿಕಾರದ ರಜತಮಹೋತ್ಸವ, ಮೊರಬ

ಧಾರವಾಡ ಜಿಲ್ಲಾ ಕೊರಬ ಜಡೆಯ ಬೃಹನ್ಮಠದ ಅಧ್ಯಕ್ಷರಾದ ಬಾಲಬ್ರಹ್ಮಶ್ರೀ ಗಂಗಾಧರ ಶಿವಾಚಾರ್ಯ ಮಹಾಸ್ವಾಮಿಗಳವರ ಪಟ್ಟಾಧಿಕಾರದ ರಜತೋತ್ಸವ ವನ್ನು ಅತ್ಯಂತ ವೈಭವಸಂಪನ್ನವಾಗಿ ನಡೆಸಲು ಭಕ್ತಿಪೂರ್ಣರಾದ ಶಿಷ್ಯರು, ನಾಡಿನ ಹಿರಿ-ಕಿರಿಯರು ನಿರ್ಣಯಿಸಿದ್ದಾರೆ.

ಈ ಮಳದಲ್ಲಿ ತಡಂಗಧೂಕವಾದ ಕೆಳಕಂಡ ಕಾರ್ಯಕ್ರಮಗಳು ಕೆರವೇರುತ್ತವೆ.

೩-೪-೧೯೩೭ ಬುಧವಾರ ಉದಯಕ್ಕೆ ಶಾಲಾ ಬಾಲಕರ ಪ್ರಭಾತ ಸಂಚಾರ. ಸಾಯಂಕಾಲ ಉಂದ ಗೋಳ ಪಂಚಗ್ರಹ ಬ್ರಹ್ಮಶ್ರಾಧ್ಯಕ್ಷ ಪ್ರವಚನಾಚಾರ್ಯ ಶ್ರೀ. ಹ. ಬ್ರಂ. ಸಿದ್ಧಲಿಂಗಶಿವಾಚಾರ್ಯ ಮಹಾಸ್ವಾಮಿಗಳವರ ಅಧ್ಯಕ್ಷತೆಯಲ್ಲಿ ಪ್ರಾರಂಭೋತ್ಸವ ಶ್ರೀಗಳವರ ಉಪದೇಶ.

೪-೪-೧೯೩೭ ಸಾಯಂಕಾಲ ಶಿವಕೀರ್ತನೆ, ಶ್ರೀ ಗುರುಪಾದಪ್ಪ ಗುರಪ್ಪ ಅಕ್ಕಿ ಹಾಗು ಅವರಪ್ಪ ನವರ ಸಿಂಹಮರ್ಮರಿ ತವಿಲಗುಂದ ಅವರ ಹಾಸ್ಯಪಾತ್ರ.

೫-೪-೧೯೩೭ ಸಾಯಂಕಾಲ ಆಯುರ್ವೇದಾಚಾರ್ಯ ಪಂಡಿತ ಶ್ರೀ ಗುರುದೇವಶಿವಾಚಾರ್ಯ ಮಹಾಸ್ವಾಮಿ ಆಯುರ್ವೇದ ದವಾಖಾನೆ ನವಿಲಗುಂದ ಅವರ ಆಯುರ್ವೇದ ವಿಚಾರ್ಯವದ ಎಗೆಗೆ ಭಾಷಣ ಹಾಗು ಮನೋರಂಜನೆ.

೬-೪-೧೯೩೭ ಸಾಯಂಕಾಲ ರೈತರ ಏಳಿಗೆಯನ್ನು ಕುರಿತು ತತ್ಪೂರ ಭಾಷಣ ಮತ್ತು ದಯಮಾಡಿಸಿದ ಪೂಜ್ಯಪಾದಂಗಳವರ ಉಪದೇಶ, ಪ್ರಸಾದ.

೭-೪-೧೯೩೭ ಸಾಯಂಕಾಲ ಧಾರವಾಡ ಪ್ರದೇಶದ ಸಾಹಿತ್ಯಸಮ್ಮೇಲನ.

ಸುಪ್ರಸಿದ್ಧ ಸಾಹಿತಿಗಳೂ ಕವಿಗಳೂ ಆದ ಡಾ॥ ಆರ್. ಸಿ. ಹಿರೇಮಠ, ಎಂ. ಎ. ಪಿ. ಎಚ್. ಡಿ. ಕನ್ನಡ ವಿಭಾಗದ ರೀಡರ್ ಶ. ವಿಶ್ವವಿದ್ಯಾಲಯ ಶ್ರೀಯುತ ಸ. ಸ. ಮಾಳವಾಡ, ಕನ್ನಡ ಪ್ರಾಧ್ಯಾಪಕ ಕರ್ನಾಟಕ ಪ್ರಾಧ್ಯಾಪಕ ಕಲಾಕಾಲೆ ಇದ್ದಲ್ಲದೆ ಶ್ರೀಮಾನ್ ದತ್ತಾತ್ರೇಯ ರಾಮಚಂದ್ರ ಬೇಂದ್ರೆ ಧಾರವಾಡ ಮೊದಲಾದವರ ರಮಣಿಯ ಮನೋಜ್ಞ ಭಾಷಣಗಳು.

೮-೪-೧೯೩೭ ಉದಯ ೧೦೧ ಹೊಸ ಎತ್ತುಗಳಿಂದ ಅಲಂಕರಿಸಿದ ರಥದಲ್ಲಿ ಗುರುಪರಮಾತ್ಮಗಳ ಉತ್ಸವ, ಸಾಯಂಕಾಲ ೪ಕ್ಕೆ ಸ್ಥಾ ಸಾಯಂಕಾಲ ಕರ್ನಾಟಕ ಸ್ವಾತಿ ವೇದಾಂತವಿದಾರದ ಸಂಸ್ಕೃತ ಸಾಹಿತ್ಯವಿಲಾಸಿ ವಿದ್ವಾನ್ ಶಮಿದಾ ಂತಸಾಗರಾಚಾರ್ಯರಿಂದಾಶೀರ್ವಚನ ಪ್ರವಚನ ವಿಧೂಷಿತ, ಶೀಲಕಂಠ ಶಿವಾಚಾರ್ಯ ಮಹಾಸ್ವಾಮಿ ಬೃಹನ್ಮಠ ಹೂಲಿ ಅವರ ಅಧ್ಯಕ್ಷತೆಯಲ್ಲಿ ಶಿವಾನುಭವ ಸಮ್ಮೇಲನ, ಅನೇಕರ ಅನುಭವಪೂರ್ಣಪತ್ರಿಕಾವಾಚನ.

೯-೪-೧೯೩೭ ಉದಯ ಶ್ರೀಕರಜಾಚಾರ್ಯ ವರ್ಯ ಮಂಟಪಪೂಜಾ ಅನಂತರ ಪ್ರಸಾದವಿತರಣ ಸಾಯಂಕಾಲ ಶ್ರೀ ಸದ್ಗುರುಗಳವರ ಪೀಠಾರೋಹಣ ಪ್ರಾರ್ಥನಾ, ಸಂದೇಶವಾಚನ, ಶುಭಸಂದೇಶ ಶಿವಾಶೀರ್ವಾದ ಮಂಗಲ ಮೊದಲಾದವುಗಳು.

ಈ ಸಪ್ತದಿವೇಶದಲ್ಲಿ ನವಿಲಗುಂದ, ಅಂಬಿಗೇರಿ, ಅಪ್ಪಜಲಪುರ, ಸ್ಯೆಂದರಿ, ಜೀವರಿಗಿ, ಚಿಕ್ಕಮಣ್ಣೂರು ಇತ್ಯಾದಿ ಗ್ರಾಮಗಳ ಪರಮಪೂಜ್ಯರು ಮತ್ತು ವಿದ್ವಾಂಸರು ಕಲಾವಿದರು ಪ್ರಮುಖರು ದಯಮಾಡಿಸುವರು. ಇದಲ್ಲದೆ ಜನತಾ ಹಿತಕ್ಕೆಂದು ನವಿಲಗುಂದ ಆಯುರ್ವೇದ ದವಾಖಾನೆಯ ಸ್ಥಾಪಕ-ಸಂಚಾಲಕರಾದ ಶ್ರೀ ಗುರುದೇವಶಿವಾಚಾರ್ಯ ಮಹಾಸ್ವಾಮಿಗಳವರು ತೊಪ್ಪಲ (ತಲೆಯೊಗೆ, ಕಣ್ಣಿನಲ್ಲಿ ಹುಟ್ಟುಯಲ್ಲಿ, ಹಸ್ತಶಲದಲ್ಲಿ, ಪಾದತಲದಲ್ಲಿ) ಇದ್ದರೆ ಔಷಧ ತೆಗೆದುಕೊಳ್ಳಲು ಅಭಿಪ್ರಾಯಕೊಡುವರು. ಮೇಲಿನ ಕ್ಷೇಗಳ ಹೊರತಾಗಿ ಇದ್ದರೆ ಔಷಧ ಉಪಯೋಗಿಸುವರು. ಹಾಗು ಹಲ್ಲಿನಲ್ಲಿ ರಕ್ತ ಕೀವು ಬರುತ್ತಿದ್ದರೆ ಯೋಗ್ಯಸಲಹೆ ಕೊಡುವುದಲ್ಲದೆ ಕೀಲಬಹುದಾದಲ್ಲಿ ಹುಚ್ಚುಮದ್ದಿನಿಂದ ನೋವಾಗದಂತೆ ತೆಗೆಯುತ್ತಾರೆ. ನೇತ್ರ ವರ್ಗಕ್ಕೆಮಾಡಿ ಅಧುನಿಕ ಪದ್ಧತಿಯಂತೆ ಸರಿಯಾದ ಸಲಹೆ ಪ್ರೀಡುತ್ತಾರೆ.

ತಾ॥ ೫-೪-೩೭ ರ ಉದಯ ೯ ಗಂಟೆಯಿಂದ ೧೨ ಗಂಟೆಯವರೆಗೆ ಈ ಚಿಕಿತ್ಸೆ ಉಚಿತವಾಗಿ ಮಾಡಲ್ಪಡುವದು. ಶ್ರೀಗಳವರ ಈ ಕೃಪೆಯ ಪ್ರಯೋಜನವನ್ನು ರೋಗಿಗಳು ತಪ್ಪದೆ ಪಡೆಯಬೇಕೆಂದು ಕೇಳುತ್ತೀನೆ.

ಒಟ್ಟಾರೆ ಸಕಲರಿಗೂ ಆತ್ಮಪಯುತ್ಸವಾದ ಮಹಾಕಾರ್ಯಕ್ಕೆ ಸರ್ವರು ಅಗಮಿಸಿ ಯಥಾಶಕ್ತಿ ಸೇವೆಸಲ್ಲಿಸಿ ಶಿವಾನುಗ್ರಹಕ್ಕೆ ಪಾತ್ರರಾಗಬೇಕಾಗಿ ವಿಜ್ಞಪ್ತಿಸುತ್ತೀನೆ.

ಸೇವಾಸಮಿತಿ.

ಶಿವಾನುಭವಸಮ್ಮೇಲನ

ಕಡೂರು ತಾಲ್ಲೂಕು ಗಿರಿಯಾಪುರದಲ್ಲಿ ಫೆಬ್ರವರಿ ೨೩ ನೇ ದಿನಾಂಕ ಶಿವಾದ್ವೈತ ತತ್ವಪ್ರಚಾರ ಸಮಿತಿಯ ಅಧ್ಯರುದಲ್ಲಿ ಶಿವಾನುಭವಸಮ್ಮೇಲನ ನಡೆಯಿತು. ಮೊದಲನೆಯ ದಿವಸ ಶ್ರೀ॥ ಷ॥ ಬ್ರ॥ ಶಿವಪ್ರಕಾಶಸ್ವಾಮಿಗಳಿಂದ ಬೆಳಿಗ್ಗೆ ಸ್ವಯಪಕ್ಷ ನಡೆಯಿತು. ಸಂಜೆ ಧಾರಾಚಾರ್ಯ ಶ್ರೀ ಸದಾಶಿವಶಿವಾಚಾರ್ಯ ಮಹಾಸ್ವಾಮಿಗಳ ಅಧ್ಯಕ್ಷತೆಯಲ್ಲಿ ಸಂಗೀತವಿದುಷಿ ಶ್ರೀ ಹೆಚ್ಚಮ್ಮನವರು ಬೆಂಗಳೂರು ಇವರಿಂದ ಸಂಗೀತ ನಡೆಯಿತು. ಶ್ರೀ ಹೆಚ್ಚ ವೀರಶಿವಾಚಾರ್ಯರು ಮುಂತಾಗಿ ಇವರಿಂದ ಭಾಷಣಗಳು ನಡೆದವು. ಧಾರವಾಡದ ಹೆಚ್ಚವೀರ ಕಣವಿ ಇವರಿಂದಲೂ ಭಾಷಣ ನಡೆಯಿತು.

ಮಾರನೆದಿವಸ ಶ್ರೀ ನಿಡುಮಾಮಿಡಿ ಶ್ರೀಗಳ ಅಧ್ಯಕ್ಷತೆಯಲ್ಲಿ ಶಿವಾದ್ವೈತತತ್ವಪ್ರಚಾರ ಅಸೋಸಿಯೇಷನ್ ಪ್ರೊಪೆಸರರಾದ ವಿದ್ವಾನ್ ಶ್ರೀಕಾಂತಶಾಸ್ತ್ರಿಗಳವರು ಶಿವಾದ್ವೈತಸಿದ್ಧಾಂತದ ಬಗ್ಗೆ ವಿಚಾರಪೂರಿತ ಭಾಷಣ ಮಾಡಿದರು. ನಂತರ ಪಾರ್ಲಿಮೆಂಟ್ ಸದಸ್ಯರಾದ ಶ್ರೀ ಸಿ. ಆರ್. ಬಸಪ್ಪನವರಿಂದ ರಾಜಕೀಯದಲ್ಲಿ ಧರ್ಮದರ್ಶನ ಎಂಬ ಬಗ್ಗೆಯೂ ಶ್ರೀ ಶಿವಪ್ರಕಾಶಸ್ವಾಮಿಗಳು ಕಾಯಕವೇ ಕೈಲಾಸವೆಂಬ ವಿಚಾರದ ಮೇಲೆಯೂ ಮಾತನಾಡುತ್ತಾ ಶಿವಾನುಭವವು ಪ್ರಾಚೀನವಾಗಿ ಸಿದ್ಧರ ಕಾಲದಿಂದ ಬಂದಿದೆ ಯೆಂದೂ ಶರಣರ ಕಾಲಕ್ಕೆ ಹೆಚ್ಚಿನ ಪ್ರಮಾಣದಲ್ಲಿ ಆಚರಣೆಯಲ್ಲಿ ಬಂದಿತೆಂದೂ ಸೆಕ್ಯುಲರೈಸ್ಡ್ ಜಾತ್ಯತೀತ ಹಾಗೂ ಕೃಪ್ತಿಜೀವನಕ್ಕೆ ಇದು ಸಾಧನವೆಂದೂ ತಿಳಿಸಿ ಇದು ಶ್ರೀಶೈಲದಲ್ಲಿ ಮೊಟ್ಟಮೊದಲು ಸ್ಥಾಪಿತವಾಗಿ ಬಸವಣ್ಣನವರ ಕಾಲಕ್ಕೆ ಕಲ್ಯಾಣದಲ್ಲಿ ನೆಲೆಸಿತೆಂದೂ, "ಜೆಡಾನಂದ ಪರಾಕಾಶ ಶಿವಾನುಭವ ಯೋಗಃ" ಎಂಬಂತೆ ರೇಣುಕಗಣತೆಯಲ್ಲಿ ಶಿವಾನುಭವ ಶಬ್ದಪ್ರಯೋಗವಾಗಿದೆಯೆಂದೂ ತಿಳಿಸಿದರು. ಮಣಿಮಹಿಕಾರದ ಮೇಲೆ ಶ್ರೀಮಠಿ ಬಸಪ್ಪಸ್ವಾಮಿಗಳು ಮಾತನಾಡಿದನಂತರ ಕಾರ್ಯದರ್ಶಿಗಳ ವಂದನಾ ಪಾಗಿ ನಡೆಯಿತು.

ಜ. ಆರ್. ಮಹೇಶ್ವರಯ್ಯ

ಹಾಬಲಳ್ಳಿ ಶ್ರೀ ಶರಣಬಸವೇಶ್ವರ ರಥೋತ್ಸವಾಜ್ಞಾಪನ ಪತ್ರಿಕೆ

ಇದೇ ಫಾಲ್ಗುಣ ಶು॥ ೪ ಮಂಗಳವಾರ, ೬-೩-೧೯೩೭ ರಂದು ರಾಯಚೂರು ಜಿಲ್ಲೆಗೆ ಸೇರಿದ ಸುಪ್ರಸಿದ್ಧ ತಾಲೂಕ ಸ್ಥೆಕ, ಹಾಬಲಳ್ಳಿ ಗ್ರಾಮದ, ಶ್ರೀ ಶರಣಬಸವೇಶ್ವರ ಯಾತ್ರಾ ಕಮಿಟಿಯವರಿಂದ ಮಹಾಗಣಾರಾಧನೆ ಶು॥ ೫ ಬುಧವಾರ ತಾ॥ ೨೦-೩-೩೭ ರಂದು, ಬೆಳಿಗ್ಗೆ ಶ್ರೀ ಶರಣಬಸವೇಶ್ವರ ಮೂರ್ತಿಗೆ ರುದ್ರಾಭಿಷೇಕ, ಗುರು-ಶಿಷ್ಯರ ಪಾದುಕೆಗಳಿಗೆ ಸಹಸ್ರದಲ್ಲಾರ್ಚನೆ, ಸಾಯಂಕಾಲ ೫ ಗಂಟೆಗೆ ರಥೋತ್ಸವ ಸಮಾರಂಭವು ವಾದ್ಯವೈಭವಗಳಿಂದ ಕೆರವೇರಿಸಲ್ಪಡುವದು. ಅಭ್ಯಾಗರು ಹೀರೆಮಾಡಗಿಕ್ಷೇತ್ರ (ಸಪ್ತದ್ವೀಪವು) ರು ಶ್ರದ್ಧವರ್ಯ ಜಗದ್ಗುರುಮಹಿಮಸಿದ್ಧ ಈ ವರ್ಷವಾದರೂ ಬರುವರ್ಷದ ಧಾರ್ಮಿಕ ವಿಧಿನೇಮಗಳೆಲ್ಲವೂ ಅವರ ನೇತೃತ್ವದಲ್ಲಿಯೇ ಜರುಗುತ್ತಲಿರುವುದು. ಕಾರಣ ಶ್ರೀ ಶರಣಬಸವೇಶ್ವರನವರಾತ್ರಿಗಾಗಿ ಬರುವ ಭಕ್ತಾದಿಗಳ ಹೃತ್ಕಮಲದಲ್ಲಿ ಶ್ರೀಕರಣು ಪಾಸಿಸಿರೆಂದೂ ಅವರವರ ಇಷ್ಟಾರ್ಥಂ ಪೂಜಿಸಲೆಂದೂ ಜಗದ್ಗುರುಮಹಿಮಸಿದ್ಧರು ಪಾ.ರೀಸಿ ಶ್ರೀಗಳೆ.

ಶ್ರೀ ಶರಣಬಸವೇಶ್ವರ ಯಾತ್ರಾ ಕಮಿಟಿ

ಪಂಚಾಚಾರ್ಯಪ್ರಭಾ

೧೯೩೭ ನೆಯ ಮಾರ್ಚಿ ತಾ|| ೧೮ನೆಯ ಸೋಮವಾರ.

ಕಾಂಗ್ರೆಸ್ಸಿನ ವಿಜಯ

ಸನ್ ೧೯೪೬ ನೇ ಇಸ್ವಿಯಲ್ಲಿ ಆಸ್ಥಿತ್ವಕ್ಕೆ ಬಂದ ಭಾರತ ಪ್ರಜಾರಾಜ್ಯವು ಆಸ್ತಿತುವಾಗಿಲಿಕರಂತಾಗಿ ವ್ಯಾಪಿಸಿ ಕಾಂಗ್ರೆಸ್ಸಿನ ಕೀರ್ತಿಯನ್ನು ಪಸರಿಸಿತ್ತು ಪ್ರಜೆಗಳ ಸರ್ವಾಮುಖೋಷಿಯೆಂದಲೂ ಮಹಾತ್ಮಾ ಗಾಂಧಿಯವರ "ವಂದೇಮಾತರಂ" ಎಂಬ ಭಾರತಮಾತೆಯ ಹಾಡ್ಡನ್ನು ಸಾರುವ ತಕ್ಷಣೋಧೆಯಿಂದಲೂ ಪಂಡಿತ ನೆಹರೂರವರ ಸ್ವಾರ್ಥತ್ಯಾಗಿಯುತ ದೇಶಸೇವೆಯಿಂದಲೂ ಪಸುತ್ತಾವಾಗಿದ್ದ ಕಾಂಗ್ರೆಸ್ಸಿನಲ್ಲಿ ಈಚೆಗೆ ಕೆಲವು ಸ್ವಾರ್ಥಿಗಳು ಸೇರಿದ್ದರಿಂದ ಈಗ ನಡೆದಿರುವ ಸುದಾಮುನ್ನಾವಣೆಯಲ್ಲಿ ಕೆಲವು ಕಡೆಗಳಲ್ಲಿ ತನ್ನ ಪ್ರಭಾವಕ್ಕೆ ಮಸಿ ಬಳಿಸಿಕೊಂಡು ಅಪಜಯಹೊಂದಿದವರಾ ಹಿ ದಿನ ವಾಸನೆಯಿಂದಲೂ ಪಂ|| ನೆಹರೂರವರ ಸಂಸ್ಕಾರ ಜ್ಞೋಧೆಯಿಂದಲೂ ಬಹುಮತವನ್ನು ಗಳಿಸಿ ತನ್ನ ಹಿರಿಮೆಯನ್ನು ಪುನ: ಉಳಿಸಿಕೊಂಡಿತು ಇತಕ್ಕಲ್ಲಾ ಗಾಂಧಿಯವರ ತಪಸ್ಸಿದ್ಧಿಯ ಪುಣ್ಯಫಲವೆಂದು ಹೇಳಬಹುದು

ಗುಲಬರ್ಗಾ ಹಿರೇಬಾಜಾರ ಹಿರೇಮಠದಲ್ಲಿ ಫಾಲ್ಗುಣ ಶು॥ ೧೩ ದಿವಸ ಜರಗಿದ ಶ್ರೀಜಗದ್ಗುರು ರೇಣುಕಾಚಾರ್ಯರ ಜಯಂತಿಯ ಕಾಲಕ್ಕೆ ಪ್ರಭಾ ಪ್ರೋತ್ಸಾಹಣಕಾಗಿ ಸದರಿ ಮಠದ ಪಂಚಮಂಡಳಿಯವರು ಕೊಟ್ಟರುವ 2 ರೂ ಶ್ರೀ ಶಿವಮೋಗ್ಗಪ್ಪಾ ಸ್ವಾದಿ ಇವರ ದ್ವಾರಾ ತಲ್ಪಿರುತ್ತವೆ

ಧಾರವಾಡ ಜಿಲ್ಲಾ ಗರಗ ನಾಸಿಗಳಾದ ಶ್ರೀ ವಿ ರಪ್ಪ ಬಳ್ಳಾರಿ ಇವರು ತಮ್ಮ ಗೈತದಲ್ಲಿ ನಡೆಸಿದ ಜಯಂತಿ ಪ್ರಯುಕ್ತ ಪ್ರಭಾಪ್ರೋಷಣೆಗಾಗಿ 5 ರೂ ಗಳನ್ನು ಸಮರ್ಪಿಸಿ ಕಳಿಸಿದ್ದಾರೆ

ಗದಗ ಪಟ್ಟಣವಾಸಿಗಳೂ ದೊಡ್ಡ ವರ್ತಕರೂ ಗುರುಭಕ್ತಿಶಿರೋಮಣಿಗಳೂ ಆದ ಶ್ರೀ ಪರ್ವತಗೌಡ ತೇಜಿಗೌಡ್ರ ಇವರು ತಾ॥ ೨೫-೩-೭೭ ನೇ ದಿನಸ ಸ್ವರ್ಗಸ್ಥರಾದ ಸನಿಯದಲ್ಲಿ ಪ್ರಭಾಪ್ರೋಷಣೆಗೆ ಸಮರ್ಪಿಸಿದ 1 ರೂ ಶ್ರೀ ಬಸವನಗೌಡ ತೊಂಡಿಹಾಳ ಇವರ ದ್ವಾರಾ ತಲ್ಪಿರುತ್ತದೆ

ಶಿವಮೊಗ್ಗ ತಾಲೂಕ ಜಾಮೀನಹಳ್ಳಿಯಲ್ಲಿರುವ ದೆ ಸಾಯಿ ಶ್ರೀ ಪಟೇಲ ಚಂದ್ರಶೇಖರಯ್ಯನವರ ಗೃಹದಲ್ಲಿ ನವರಾತ್ರಿ ಉತ್ಸವ ಸಂದರ್ಭದಲ್ಲಿ ನವರಾತ್ರಿ ಪ್ರಯುಕ್ತ ಚಂಡಿಕಾ ಹೋಮ ಮತ್ತು ಸಪ್ತಶತಿ ಪಾರಾಯಣ ಮಾಡಿಸಿದ್ದು ಆ ಸಂದರ್ಭದಲ್ಲಿ ಸೇರಿದ್ದ ಸಭಿಕರಿಂದ ಸಂಗ್ರಹಿಸಿದ ಹಣ ರೂ ೨೫೦-೦೦ ಗಳನ್ನು ಪ್ರಭಾ ಪೋಷಕ ನಿಧಿಗೆ ಸಮರ್ಪಿಸಿದ್ದಾರೆ ಈ ಮೊತ್ತವನ್ನು ಶ್ರೀ ಪಟೇಲರು ಸ್ವತಃ ಬಂದು ಕಛೇರಿಯಲ್ಲಿ ಒಪ್ಪಿಸಿದರು ಇವರಿಗೆ ಕೃತಜ್ಞತೆಗಳು ಇದೇ ರೀತಿ ಪ್ರತಿಯೊಬ್ಬರೂ ಪ್ರಭಾಪೋಷಕರಾಗಿ ಸಹಕರಿಸುವಿರೆಂದು ಆಶಿಸುತ್ತೇವೆ

ಈ ಮೇಲ್ಪಡಿ ಮಹಾಶಯರಿಗೆಲ್ಲಾ ಶ್ರೀಜಗದ್ಗುರು ಪಂಚಾಚಾರ್ಯರು ನಿಶ್ಚಯಮಂಗಲವನ್ನೇಯ ಲೆಂದು ಹಾರೈಸುತ್ತೇವೆ

ಶ್ರೀ ಜಗದ್ಗುರು ರೇಣುಕಾಚಾರ್ಯರ ಜಯಂತಿಯ ಕಾಲಕ್ಕೆ ಪ್ರಭಾ ಪೋಷಣೆಗಾಗಿ ಸದರಿ ಮಠದ ಪಂಚಮಂಡಳಿಯವರು ಕೊಟ್ಟರುವ 2 ರೂ ಶ್ರೀ ಶಿವಮೋಗ್ಗಪ್ಪಾ ಸ್ವಾದಿ ಇವರ ದ್ವಾರಾ ತಲ್ಪಿರುತ್ತವೆ

ಧಾರವಾಡ ಜಿಲ್ಲಾ ಗರಗ ನಾಸಿಗಳಾದ ಶ್ರೀ ವಿ ರಪ್ಪ ಬಳ್ಳಾರಿ ಇವರು ತಮ್ಮ ಗೈತದಲ್ಲಿ ನಡೆಸಿದ ಜಯಂತಿ ಪ್ರಯುಕ್ತ ಪ್ರಭಾಪ್ರೋಷಣೆಗಾಗಿ 5 ರೂ ಗಳನ್ನು ಸಮರ್ಪಿಸಿ ಕಳಿಸಿದ್ದಾರೆ

ಗದಗ ಪಟ್ಟಣವಾಸಿಗಳೂ ದೊಡ್ಡ ವರ್ತಕರೂ ಗುರುಭಕ್ತಿಶಿರೋಮಣಿಗಳೂ ಆದ ಶ್ರೀ ಪರ್ವತಗೌಡ ತೇಜಿಗೌಡ್ರ ಇವರು ತಾ॥ ೨೫-೩-೭೭ ನೇ ದಿನಸ ಸ್ವರ್ಗಸ್ಥರಾದ ಸನಿಯದಲ್ಲಿ ಪ್ರಭಾಪ್ರೋಷಣೆಗೆ ಸಮರ್ಪಿಸಿದ 1 ರೂ ಶ್ರೀ ಬಸವನಗೌಡ ತೊಂಡಿಹಾಳ ಇವರ ದ್ವಾರಾ ತಲ್ಪಿರುತ್ತದೆ

ಶಿವಮೊಗ್ಗ ತಾಲೂಕ ಜಾಮೀನಹಳ್ಳಿಯಲ್ಲಿರುವ ದೆ ಸಾಯಿ ಶ್ರೀ ಪಟೇಲ ಚಂದ್ರಶೇಖರಯ್ಯನವರ ಗೃಹದಲ್ಲಿ ನವರಾತ್ರಿ ಉತ್ಸವ ಸಂದರ್ಭದಲ್ಲಿ ನವರಾತ್ರಿ ಪ್ರಯುಕ್ತ ಚಂಡಿಕಾ ಹೋಮ ಮತ್ತು ಸಪ್ತಶತಿ ಪಾರಾಯಣ ಮಾಡಿಸಿದ್ದು ಆ ಸಂದರ್ಭದಲ್ಲಿ ಸೇರಿದ್ದ ಸಭಿಕರಿಂದ ಸಂಗ್ರಹಿಸಿದ ಹಣ ರೂ ೨೫೦-೦೦ ಗಳನ್ನು ಪ್ರಭಾ ಪೋಷಕ ನಿಧಿಗೆ ಸಮರ್ಪಿಸಿದ್ದಾರೆ ಈ ಮೊತ್ತವನ್ನು ಶ್ರೀ ಪಟೇಲರು ಸ್ವತಃ ಬಂದು ಕಛೇರಿಯಲ್ಲಿ ಒಪ್ಪಿಸಿದರು ಇವರಿಗೆ ಕೃತಜ್ಞತೆಗಳು ಇದೇ ರೀತಿ ಪ್ರತಿಯೊಬ್ಬರೂ ಪ್ರಭಾಪೋಷಕರಾಗಿ ಸಹಕರಿಸುವಿರೆಂದು ಆಶಿಸುತ್ತೇವೆ

ಈ ಮೇಲ್ಪಡಿ ಮಹಾಶಯರಿಗೆಲ್ಲಾ ಶ್ರೀಜಗದ್ಗುರು ಪಂಚಾಚಾರ್ಯರು ನಿಶ್ಚಯಮಂಗಲವನ್ನೇಯ ಲೆಂದು ಹಾರೈಸುತ್ತೇವೆ

ಲಿಂಗೋದ್ಭವಮೂರ್ತಿಗಳು

ವೀರಶೈವ ಮತಸ್ಥಾಪಕರಾದ ಶ್ರೀಜಗದ್ಗುರು ಪಂಚಾಚಾರ್ಯರು ಲಿಂಗೋದ್ಭವರಾಗಿ ಅವತರಿಸಿದ ಮೂರ್ತಿಗಳನ್ನು ಕೆಳಕಂಡ ಪ್ರಕಾರ ಪಂಚಲೋಹದ ಎರಕದಲ್ಲಿ ಅಂದವಾಗಿ ತಯಾರಿಸಲಾಗಿದೆ ವೀರಶೈವರಿಗೆ ಪರಮಪೂಜ್ಯರಾದ ಶ್ರೀಜಗದ್ಗುರುಗಳ ಈ ಮೂರ್ತಿಗಳು ಪ್ರತಿಯೊಬ್ಬರ ಮನೆಯಲ್ಲಿ ಪೂಜೆಗೊಳ್ಳುವುದು ಸರ್ವಶ್ರೇಷ್ಠವೂ ಮೋಕ್ಷಪ್ರದವೂ ಆಗಿರುವುದರಿಂದ ಸರ್ವರೂ ಇವುಗಳನ್ನು ತರಿಸಿಕೊಂಡು ಪೂಜಿಸಿಧನ್ಯರಾಗಲಿ

ಎತ್ತರದ ಮೂರ್ತಿ ೬೦ ರೂ
೪ ಇಂಚು ,, ,, ೧೫ ರೂ
ಬೆಳ್ಳಿ ಲಾಕಟ್ಟು ಹಿಂದಕ್ಕೆ ೧ ರೂ ೨೫ ಪೈ॥

ಮ್ಯಾನೇಜರ್
ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್,
ಮೈಸೂರು.

ಸಿದ್ಧಾಂತಶಿಖಾಮಣಿ
(ಕನ್ನಡ ಟೀಕಾಸಹಿತ)

ವೀರಶೈವ ಮತಕ್ಕೆ ಆಧಾರಭೂತವಾಗಿ ಕೈವಲ್ಯ ಕಲ್ಪತರುವಿನಂತಿರುವ ಈ "ಸಿದ್ಧಾಂತಶಿಖಾಮಣಿ" ಎಂಬ ಗ್ರಂಥವನ್ನು ಸುಮಾರು ಎರಡುಸಾವಿರ ವರ್ಷಗಳ ಪೂರ್ವದ ಲ್ಲಿದ್ದ ಶ್ರೀ ಶಿವಯೋಗಿತಿಶಾಚಾರ್ಯರೆಂಬ ಆಚಾರ್ಯ ರಿಂದ ರಚಿಸಲ್ಪಟ್ಟಿದ್ದು ದೇವತಾಗಣಭೂತಪಿಶಾಚಿಪ್ರಿತ್ಯಾ ದಿಯಕ್ಕೆ ಅನೇಕರು ಅನೇಕವಿಧವಾಗಿ ವ್ಯಾಖ್ಯಾನಗಳನ್ನು ಬರೆದಿರುತ್ತಾರೆ ಗೂಢಾರ್ಥಗರ್ಭಿತವಾದ ಆ ಶ್ಲೋಕ ಗಳಿಗೆ ಸಮಂಜಸವಾದ ಅರ್ಥವು ಯಾರ ವ್ಯಾಖ್ಯಾನಗಳಲ್ಲಿಯೂ ಬರೆಯಲ್ಪಟ್ಟಿಲ್ಲವೆಂಬುದನ್ನು ಮನಗಂಡ ಶ್ರೀ॥ ಪಂಡಿತ ಶ್ರೀಜಾತೀನಾಥಶಾಸ್ತ್ರಿಗಳವರು ಬಹು ಶ್ರಮವಹಿಸಿ ಈ ಗ್ರಂಥಕ್ಕೆ ಕನ್ನಡ ಭಾಷೆಯಲ್ಲಿ ಬಹು ಸರಳವಾದ ವ್ಯಾಖ್ಯಾನವನ್ನು ರಚಿಸಿ ಸಮಸ್ತ ವೀರಶೈವ ಕೃತಜ್ಞ ತೆಗೆ ಪಾತ್ರರಾಗಿದ್ದಾರೆ. ಮೂರುಸೂರು ಪೀಠಗಳ ಮೇಲ್ಪಟ್ಟು ಗಿರುವ ಈ ಗ್ರಂಥದಲ್ಲಿ ಸಂದರ್ಭಾನುಸಾರವಾಗಿ ಶ್ರೀ ಜಗದ್ಗುರು ರೇಣುಕಾಚಾರ್ಯರ ಲೀಲಾವಿಶೇಷಗಳಾದ ಮನೋಹರ ಭಾವಚಿತ್ರಗಳು ಶೋಭಿಸಲ್ಪಟ್ಟಿರುವುದರಿಂದ ಗ್ರಂಥದ ಸೌಂದರ್ಯವು ವರ್ಣನಾತೀತವಾಗಿದೆ ಸದರಿ ಗ್ರಂಥದ ಎರಡನೇ ಮುದ್ರಣವು ಕಂಡಿತರ ಸಹೋದರರಾದ ಬೇ॥ ಬೃ॥ ಮಹಾದೇವಯ್ಯನವರಿಂದ ಮುದ್ರಿಸಿ ಪ್ರಕಾಶಿಸಲಾಗಿದೆ ಈ ಅಮೂಲ್ಯ ಗ್ರಂಥವನ್ನು ಸರ್ವರೂ ತರಿಸಿ ಓದಿ ಧನ್ಯರಾಗಬೇಕು ಬೆಲೆ 2 ರೂ. 50 ಪೈಸೆ

ಮ್ಯಾನೇಜರ್—
ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್,
ಮೈಸೂರು.

ಮನೋಹರವಾದ ಫೋಟೋಗಳು.

ಶ್ರೀಜಗದ್ಗುರು ರೇಣುಕಾಚಾರ್ಯರ ಎಂಳತ್ತು ಅಮೃತಲಿಲೆಗಳಿಂದ ಕೂಡಿದ ಫೋಟೋ	೫೫ ನಯೆ ಪೈಸೆ
ಶ್ರೀರೇಣುಕಾಚಾರ್ಯರಲಿಂಗಾವತಾರದಫೋಟೋ(ಸಾಮಾನ್ಯವಿಧಬ್ಯಾಗಿಂದ ಮುದ್ರಿಸಬಹುದು)ಸೈಜು ೧೪ X೧೦ ಬೆಲೆ	೩೫ ನಯೆ ಪೈಸೆ
ಶ್ರೀರೇಣುಕಾಚಾರ್ಯರ ಲಿಂಗಾವತಾರದ ಫೋಟೊ (ಚಿಕ್ಕಸೈಜು)	೧೦ ನಯೆ ಪೈಸೆ
ಶ್ರೀಜಗದ್ಗುರು ಪಂಚಾಚಾರ್ಯರು ಪಂಚಮಹಷಿಗಳಿಗಳಿಗೆ ಶಿವಪಿಡ್ಡಾಂತವನ್ನು ಉಪದೇಶಿಸುವ ಫೋಟೋ	೫೫ ನಯೆ ಪೈಸೆ
ಶ್ರೀರೇಣುಕಾಚಾರ್ಯರು ಅಗಸ್ತ್ಯಮಹರ್ಷಿಗಳಿಗೆ ಶಿವಪಿಡ್ಡಾಂತವನ್ನು ಉಪದೇಶಿಸುವ ಫೋಟೋ	೧೦ ನಯೆ ಪೈಸೆ
ಶ್ರೀ ಜಗದ್ಗುರು ಪಂಚಾಚಾರ್ಯರ ಲಿಂಗಾವತಾರದ ಫೋಟೋ ಸೈಜು ೧೪ X೧೦ ಬೆಲೆ ೧೫	೧೫ ನಯೆ ಪೈಸೆ
,, ,, ,, ಚಿಕ್ಕ ಸೈಜು ಬೆಲೆ	೧೦ ನಯೆ ಪೈಸೆ
ಶ್ರೀ ಜಗದ್ಗುರು ರುದ್ರಮುನಿಶ್ವರ ಶಿವಾಚಾರ್ಯರು ಭೂಗರ್ಭದಿಂದ ಅವತರಿಸುವ ಫೋಟೋ	೧೦ ನಯೆ ಪೈಸೆ
ಶ್ರೀ ರೇಣುಕಾಚಾರ್ಯರು ರುದ್ರಮುನಿಶ್ವರ ಶಿವಾಚಾರ್ಯರಿಗೆ ಪಟ್ಟಾಭಿಷೇಕ ಮಾಡುವ ಫೋಟೋ	೧೦ ನಯೆ ಪೈಸೆ
ಶ್ರೀರೇಣುಕಾಚಾರ್ಯರು ಶ್ರೀಪರಂಪರಾಚಾರ್ಯರಿಗೆ ಚಂದ್ರಮೌಳೀಶ್ವರಲಿಂಗವನ್ನು ಅನುಗ್ರಹಿಸುವ ಫೋಟೋ	೧೦ ನಯೆ ಪೈಸೆ
ಶ್ರೀರೇಣುಕಾಚಾರ್ಯರು ವಿಭೂತಿಯನ್ನ ಸ್ವೀಕರಿಸಿಯಂತೆ ಕೋಟಿ ಶಿವಲಿಂಗಗಳನ್ನು ಸೃಷ್ಟಿಸುವ ಫೋಟೋ	೧೦ ನಯೆ ಪೈಸೆ
ಶ್ರೀ ಅತೀ ಜಗದ್ಗುರು ವೀರಭದ್ರಶಿವಾಚಾರ್ಯರುಮಹಾಸ್ವಾಮಿಗಳವರ ಫೋಟೋ (ಸಾಮಾನ್ಯವಿಧಬ್ಯಾಗ್ಗು)	೫೫ ನಯೆ ಪೈಸೆ
ಶ್ರೀಅತೀಜಗದ್ಗುರುಗಳಿಗೆ ಶ್ರೀವೀರಭದ್ರರು ಜಗದ್ಗುರುಗಳು ತರೀಟಿಪಾಠಾದಿಮಾಡುವ ಫೋಟೋ	೧೦ ನಯೆ ಪೈಸೆ
ಶ್ರೀಸಮರ್ಥಜಗದ್ಗುರು ಸಿಂಹಾಸನಾರೂಢರಾದ ಶ್ರೀ ಜಗದ್ಗುರು ಸಿದ್ಧಲಿಂಗಶಿವಾಚಾರ್ಯರ ಫೋಟೋ	೧೦ ನಯೆ ಪೈಸೆ
ಶ್ರೀಅಭಿನವಜಗದ್ಗುರು ಪಟ್ಟಾಭಿಷೇಕ ಮಾಡಿಸಿದ ಶಿವಾಚಾರ್ಯರ ಮಹಾಸ್ವಾಮಿಗಳವರ ಫೋಟೋ	೧೦ ನಯೆ ಪೈಸೆ
ಶ್ರೀಅಭಿನವಜಗದ್ಗುರುಗಳವರ ಸ್ವಾಮಿಯಲ್ಲಿ ಶ್ರೀಜಗದ್ಗುರುಗಳವರು ಉಪಲುಳುಕೊಂಡಿರುವ ಫೋಟೋ	೧೦ ನಯೆ ಪೈಸೆ
ಪಂಡಿತ ಶ್ರೀಜಾತೀನಾಥಶಾಸ್ತ್ರಿಗಳವರ ಫೋಟೋ (ಸಾಮಾನ್ಯ ಬ್ಯಾಗಿಂದ ಮುದ್ರಿಸಬಹುದು) ಚಿಕ್ಕಸೈಜು ಬೆಲೆ	೧೫ ನಯೆ ಪೈಸೆ
ಕಂಡಿತ ಶ್ರೀಜಾತೀನಾಥಶಾಸ್ತ್ರಿಗಳವರ ಫೋಟೋ (ಸಾಮಾನ್ಯವಿಧ ಬ್ಯಾಗಿಂದ ಮುದ್ರಿಸಬಹುದು)ದೊಡ್ಡಸೈಜು ಬೆಲೆ	೩೫ ನಯೆ ಪೈಸೆ
ಶ್ರೀರಂಭಾಪುರೀ ಜಗದ್ಗುರುಗಳವರ ಸ್ವಾಮಿಯಲ್ಲಿ ಶ್ರೀವಾಸ್ತವಾಚಾರವರರು ವಿಜ್ಞಾಪಿಸುತ್ತಿರುವ ಫೋಟೋ	೧೦ ನಯೆ ಪೈಸೆ
ಶ್ರೀಜಗದ್ಗುರುರಂಭಾಪುರೀ ವೀರಭದ್ರಿ ಸ್ವಾಮಿಯಲ್ಲಿ ವಿಜ್ಞಾಪಿಸುತ್ತಿರುವ ವಿಜಾಪಾಸನಗಳು	೧೫ ನಯೆ ಪೈಸೆ

ಮ್ಯಾನೇಜರ್—ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್, ಮೈಸೂರು.

Edited, Printed and Published by Brihanmathadhipatiru Sri Mahadevaiah at Sri Panchacharya Electric Press, Sayaji Rao Road, Mysore

REGISTERED No M 2266 ॥ ಶ್ರೀಜಗದ್ಗುರು ಪಂಚಾಚಾರ್ಯಾಭ್ಯಾಂ ಪ್ರಸೀದಂತು ॥ REGISTERED No M 2266

ಪಂಚಾಚಾರ್ಯಪ್ರಭಾ

ಪ್ರತಿ ಸೋಮವಾರ ಮೈಸೂರು ನಗರದಲ್ಲಿ ಪ್ರಕಟಿಸಲ್ಪಡುವುದು.

ಪಂಚಾಸ್ಯಾನನಪಂಚಜಾತಸವಿತರ್ ಪಂಚಾಸ್ಯಪೀಠಾಧಿಪರ್ । ಪಂಚಶ್ಲೋಕವಿನಾತಕರ್ ಪರತರಶ್ರೀಪಂಚಲಿಂಗೋದ್ಭವರ್ ॥
ಪಂಚಾಚಾರನಿಯಾಮಕರ್ ಪರಿಲಸತ್ಪಂಚಾಕ್ಷರೀಮೋಧರ್ । ಪಂಚಾಚಾರ್ಯಜಗದ್ಗುರೂತ್ತಮರವರ್ ಪಾಲಿಪ್ಪ ದೀಲೋಕಮಂ ॥

ಸಂಸ್ಥಾಪಕರು—ಭಾಗವೂರು ಬೃಹನ್ಮಹಾಧ್ವಪ್ಪರಾದ ವೇದ ಪಂ॥ ಶ್ರೀ ಶಾಶೀನಾಥಶಾಸ್ತ್ರಿಗಳವರು.

ಚಾರ್ಜಿಳಪಂಜಾ ೩ ರೂ ೫೦ ನಯೇಪೈಸೆ] ಸಂಪಾದಕರು— ಭಾಗವೂರು ಬೃಹನ್ಮಹಾಧ್ವಪ್ಪರಾದ ಶ್ರೀ ಮಹಾದೇವಯ್ಯನವರು [ವಿ ಪಿ ಖರ್ಚು ಸೇರಿ ೪ ರೂ.

ಸಂಪುಟ ೩೦] ಸೋಮವಾರ ತಾ॥ ೨೨ ನೇ ಏಪ್ರಿಲ್ ೧೯೫೭ [ಸಂಚಿಕೆ ೪೯

ವಿಶಾಲ ಮೈಸೂರಿನ ರಾಜ್ಯಪಾಲರಾದ

ಶ್ರೀ ಜಯಚಾಮರಾಜೇಂದ್ರ ಒಡೆಯರವರು
ಮತ್ತು
ನೂತನ ಮಂತ್ರಿಮಂಡಲವು

ಕನ್ನಡ ನಾಡಿನ ನೂತನ ಮುಖ್ಯಮಂತ್ರಿಗಳಾದ ಶ್ರೀ ಎಸ್ ನಿಜಲಿಂಗಪ್ಪನವರು ತಮ್ಮ ಸಹೋದ್ಯೋಗಿಗಳಾದ ಶ್ರೀ ಎಂ ಪಿ ಪಾಟೀಲ, ಟಿ ಮರಿಯಪ್ಪ, ಹೆಜ್ ಕೆ ವೀರಣ್ಣಗೌಡ, ಹೆಜ್ ಎಸ್ ರುದ್ರಪ್ಪ, ಸಿ ಎಂ ಪೂಣಚ್ಚ, ಆರ್ ಜಿನ್ನಿಗರಾಮಯ್ಯ, ಬಿ ವೈಕುಂಠಬಾಳಿಗಾ, ಆರ್- ಎಂ ಪಾಟೀಲ, ವಿ ವೆಂಕಟಪ್ಪ, ಮಹಮ್ಮದ ಅಲಿ ಮೊದಲಾದವರಿಂದ ಕೂಡಿದ ಮಂತ್ರಿಮಂಡಲವನ್ನು ಸಿದ್ಧಗೊಳಿಸಿಕೊಂಡು ಇದೇ ೧೯ ನೇ ತಾರೀಖಿನ ಮಧ್ಯಾಹ್ನ ೧೨ ಘಂಟೆಯಸಮಯದ ಮೈಸೂರಿನಲ್ಲಿರುವ ಅರಮನೆಯಲ್ಲಿ ರಾಜ್ಯಪಾಲರಾದ ಶ್ರೀ ಜಯಚಾಮರಾಜೇಂದ್ರ ಒಡೆಯರವರ ಸಮ್ಮುಖದಲ್ಲಿ ಪ್ರಮಾಣವಚನವನ್ನು ಸ್ವೀಕರಿಸಿದರು ಸತ್ಯಪಾಲನೆಯ ಮುಂಬೈ ಕನ್ನಡಿಗರಿಂದಲೂ, ಕೆಚ್ಚೆದೆಯ ಧೈರ್ಯವಾದ ಕನ್ನಡಿಗರಿಂದಲೂ, ಕಾರ್ಯಕ್ಷಾನಿಕ್ಯರಾದ ಮಂಗಳೂರ ಕನ್ನಡಿಗರಿಂದಲೂ, ಪೌರುಷವಳ್ಳೆ ಕೊಡಗಿನ ಕನ್ನಡಿಗರಿಂದಲೂ, ಸಾಮಾಜಾನಿಕ್ಯರಾದ ಚತುರೋಪಾಯಗಳಲ್ಲಿ ಬಲ್ಲ ಮೈಸೂರು ಕನ್ನಡಿಗರಿಂದಲೂ ಸರಿತೋಧಿಸಿ ಅರಿಸಲ್ಪಟ್ಟ ಈ ಪಂಚತತ್ವದ ಮಂತ್ರಿಮಂಡಲವು ಭಾರತದ ಮುಖ್ಯ ಗುರಿಯಾದ ಪಂಚಶೀಲಗಳನ್ನನುಸರಿಸಿ ವಿಶ್ವತೋಮುಖವಾಗಿ ಕನ್ನಡ ನಾಡಿನ ಹೆಜ್ಜೆಳವನ್ನು ಸಾಧಿಸಬಲ್ಲದೆಂದು ನಿಸ್ಸಂದೇಹವಾಗಿ ಹೇಳಬಹುದು ಧರ್ಮವೇ ಮೂರ್ತಿಮತ್ತಾಗಿರುವ ಶ್ರೀ ರಾಜ್ಯಪಾಲರ ಜೊತೆಗೆ ಸೇರಿದ ಈ ಮಂತ್ರಿಮಂಡಲದ ೫ ವರ್ಷಗಳ ಅಳ್ವಿಕೆಯಲ್ಲಿ ಸತ್ಯ-ಧರ್ಮಯುತನಾದ ಸರಕಾರವು ಸ್ಥಾಪಿಸಲ್ಪಟ್ಟು ಪ್ರಜೆಗಳು ನಿಜವಾದ ಸ್ವಾತಂತ್ರ್ಯದ ಫಲವನ್ನು ಅನುಭೋಗಿಸುವಂತಾಗಲೆಂದು ಶ್ರೀಜಗದ್ಗುರು ಪಂಚಾಚಾರ್ಯರ ಸ್ಮರಣಪೂರ್ವಕ ರಾಜ್ಯಪಾಲರಿಗೂ ನೂತನ ಮಂತ್ರಿಮಂಡಲಕ್ಕೂ ನಮ್ಮ ಹೃತ್ಪೂರ್ವಕ ಅಭಿನಂದನೆಗಳನ್ನು ಸಲ್ಲಿಸುತ್ತೇವೆ

ಜೈ ಕರ್ನಾಟಕ

ಜಗದ್ಗುರುಚಾರ್ಯರ ಜಯಂತಿಮಹೋತ್ಸವ
ಮಂದ್ರೂಪ

ಸೊಲ್ಲಾಪೂರ ಜಿಲ್ಲೆಗೆ ಸೇರಿದ ಮಂದ್ರೂಪ ಗ್ರಾಮದ ವೇದಮೂರ್ತಿ ವೀರಯ್ಯ ಗುರುಸಿದ್ದಯ್ಯಾ ಸ್ವಾಮಿ ಹಿರೇಮಠ ಇವರ ಅಧ್ಯಕ್ಷತೆಯಲ್ಲಿ ದಿನಾಂಕ ೨೭ ೨ ೫೭ನೇ ಮಹಾತಿವರಾತ್ರಿ ದಿವಸ ಜಗ॥ ಪಂಡಿತಾರಾಧ್ಯ ವಿಶ್ವಾರಾಧ್ಯ ಜಯಂತಿಯೂ ದಿ॥ ೧೧ ೩ ೫೭ ಸೋಮವಾರ ಮಹಾತ್ಮಾ ಪಂಡಿತ ಶಾಶೀನಾಥಶಾಸ್ತ್ರಿಗಳ ಪುಣ್ಯದಿನವೂ ದಿ॥ ೧೪ ೩ ೫೭ ಗುರುವಾರ ಶ್ರೀ ಜ॥ ರೇಣುಕಾಚಾರ್ಯರ ಜಯಂತಿಯೂ ಮಹಾ ಸಂಭ್ರಮದಿಂದ ಸಾಂಗೋಪಾಂಗಗೊಳಿಸಿದವು ಸದರಿ ಸಮಾರಂಭವು ಮಲಯಪರ್ವತದ, ಲೋಪಾಮುದ್ರಾ ಅಗಸ್ತ್ಯಮಹರ್ಷಿಗಳ ಅಶ್ರಮದಂತೆ, ರಂಭಾಸ್ತಂಭ ಗಳಿಂದಲು, ತಳಿರು-ತೋರಣಗಳಿಂದಲು, ಪಂಚರಂಗಿ ಜಗದಾಚಾರ್ಯರ ಅಮರ ಬಾವುಟಗಳಿಂದಲು, ನೈಸರ್ಗಿಕ ಜೀವನದ ಜೀವಾಳದಂತೆ ಕಂಗೊಳಿಸುತ್ತಿತ್ತು ಪ್ರತಿವರ್ಷದ ಪದ್ಧತಿ ಪ್ರಕಾರ ಜಗದಾಚಾರ್ಯರ ಮೂರ್ತಿಗಳಿಗೂ, ಪಂಡಿತರ ಫೋಟೊಗಳಿಗೂ, ಷೋಡಶೋಪಚಾರಗಳಿಂದ ಪೂಜಿಸಿ, ಫಲಪತ್ರಿ ಪುಷ್ಪ ಹಾರಗಳನ್ನರ್ಪಿಸಿ, ಪಂಚಪಕ್ವಾನ್ನ ನೈವೇದ್ಯವನ್ನು ನಿವೇದಿಸಿ, ಗಣಾರಾಧನೆಯನ್ನು ಗೈದು ಲಿಂಗೀಭೂತವಾದ ಮೂರ್ತಿಗಳಿಗೂ ಮಹಾತ್ಮರ ಫೋಟೊಗಳಿಗೂ ಪುಷ್ಪಾಹಾರಗಳನ್ನು ಹಾಕಿ ಪಲ್ಲಕ್ಕಿಯಲ್ಲಿರಿಸಿ ಮೆರವಣಿಗೆ ಮಾಡಲಾಯಿತು ನಂತರ ಸಂಜೆಯ ವಿದಕ್ಕೆ ಸಭೆಕೂಡಿತು ಚತುರ್ದಶಭುವನಕ್ಕೆ ಗುರು ಗುರಾದ ಶ್ರೀಜಗದ್ಗುರು ರೇಣುಕಾದಿ ಪಂಚಾಚಾರ್ಯರ ಸನಾತನ ವೀರಶೈವ ಸಿದ್ಧಾಂತವನ್ನು ಮಹಾತ್ಮಾ ಪಂಡಿತ ಶ್ರೀಶಾಶೀನಾಥಶಾಸ್ತ್ರಿಜಯಂತಿಯು ಪ್ರಜಾಪತಿಸಿದ್ದವ್ವು ಶ್ರೀ ದುಂಡಿಲಿಂಗಪ್ಪಾ ಗುಡೂರ ಮಾಸ್ತರ ಬಳಗದ ಇವರು ಸಭೆಯಲ್ಲಿ ಬಿತ್ತರಿಸಿದರು. ಜಗದಾಚಾರ್ಯರ ಹಾಗೂ ಅಮರ ಪಂಡಿತರ ಸಂಕ್ಷಿಪ್ತ ಜೀವನ ಪರಿಚಯಗಳನ್ನು ಸಹ ಹೇಳಿ, ಸಭೆಕೆಲ್ಲರಮ್ಮು ಆನಂದಗೊಳಿಸಿದರು ಸಭಿಕರೆಲ್ಲರೂ ಬೆರಗಾಗಿ ಹಾಯ ಹಾಯ ಧಿಕ್ಕಾರ ಧಿಕ್ಕಾರ ನಮ್ಮೀ ಭೂಭಾರದ ಗುರುವರ್ಗಕ್ಕೆ, ನಮ್ಮಿ ಭೂಭಾರದ ಜನ್ಮಕ್ಕೆ ಎಂದು ತಮ್ಮ ದುಃಖೋದ್ಗಾರವನ್ನು ಕರತಾಡನ ಮೂಲಕ ತೀರಿಸಿದರು ಬಳಿಕ ಅವರ ಧರ್ಮಪತ್ನಿಯವರಾದ ಶ್ರೀಮತಿ ಸಂಗಮಾಂಬೆಯವರು ತಾವೆ ಸ್ವತಃ ರಚಿಸಿದ ಜಗದಾಚಾರ್ಯರ ಹಾಗೂ ಅಮರ ಪಂಡಿತ ಶಾಶೀನಾಥಶಾಸ್ತ್ರಿಗಳ ಜೋಗುಳ ಪದ್ಯಗಳನ್ನು ಸಶಾಸ್ತ್ರ ಸಂಗೀತಶಾಸ್ತ್ರಸ್ವರದೊಂದಿಗೆ ಸರಾಗವಾಗಿ ಹಾಡಿದರು, ತರುವಾಯ ಜಗದಾಚಾರ್ಯರ ಹಾಗೂ ಅಮರ ಪಂಡಿತರ ಮಂಗಲ ಜಯಘೋಷದೊಂದಿಗೆ ಸಭೆಯು ಮುಕ್ತಾಯಗೊಂಡಿತು

ಪ್ರತ್ಯಕ್ಷದರ್ಶಿ

ಪಂಚಾಚಾರ್ಯ ಪ್ರಭಾ

೧೯೫೭ ನೆಯ ಏಪ್ರಿಲ್ ತಾ|| ೨೨ ನೆಯ ಸೋಮವಾರ

ಧರ್ಮಜಾಗ್ರತೆಗೊಳಿಸಲು ಸುಸಮಯ

ಬಳ್ಳಾರಿ ಜಿಲ್ಲೆಗೆ ಸೇರಿದ ಉಜ್ಜಯಿನಿ ಪಟ್ಟಣದಲ್ಲಿ ಪ್ರಸಂಸ್ಥೆ ಪಟ್ಟಾಭಿಷಿಕ್ತರಾದ ಇದೇ ನೈರಾಮಿ ಶು ೧ ದಿವಸ ವೀರಶೈವಸಮಾಜಸ್ಥಾಪಕರೂ ಸದ್ಧರ್ಮಪ್ರತಿಪಾದಕರೂ ಆದ ಶ್ರೀಜಗದ್ಗುರು ದಾರುಕಾಚಾರ್ಯರ ಜಯಂತಿಮಹೋತ್ಸವವು ಬಳ್ಳೇ ವೈಭವದಿಂದ ಜರುಗುವುದು ಉತ್ತರೋತ್ತರ ಪೀಠಾಧಿರೋಹಿತರಾದ ಶ್ರೀಜಗದ್ಗುರು ಮರುಳಸಿದ್ಧ ಶಿವಾಚಾರ್ಯರ ಮಹಾರಥೋತ್ಸವವೂ ನಡೆಯುತ್ತದೆ. ಈ ಉತ್ಸವಕ್ಕೆ ಸಂಬಂಧಪಟ್ಟ ಎಲ್ಲಾ ಕಾರ್ಯಕ್ರಮಗಳನ್ನೂ ಸವಿಸ್ತರವಾಗಿ ಶ್ರೀಜಗದ್ಗುರು ಸಿದ್ಧೇಶ್ವರ ಸ್ವಾಮಿಗಳ ಸಹಿತವಾಗಿ ಪ್ರಕಟಿಸಲಾಗಿದೆ. ಈ ಉತ್ಸವಕ್ಕೆ ಆಗಮಿಸಲಿರುವ ಸಹಸ್ರಾರು ಭಕ್ತಾದಿಗಳಿಗೆ ಅನುಕೂಲವಾಗುವಂತೆ ಸಕಲ ಏರ್ಪಾಡುಗಳನ್ನೂ ಮಾಡಲಾಗಿದೆ. ಈ ಉತ್ಸವಕ್ಕೆ ಆಗಮಿಸಲಿರುವ ಶ್ರೀಜಗದ್ಗುರುಗಳಿಗೂ ಇತರರಿಗೂ ಅವಶ್ಯಕವಾದ ಪಿಠೋಪಕರಣಗಳನ್ನು ಏರ್ಪಡಿಸಲಾಗಿದೆ. ಈ ಉತ್ಸವವು ಯಶಸ್ವಿಯಾಗಿ ನೆರವೇರಲಿ ಎಂದು ಹಾರೈಸುತ್ತೇವೆ.

ಈ ಉತ್ಸವದಲ್ಲಿ ಸಮಸ್ತ ವೀರಶೈವ ಬಂಧುಗಳೂ ಭಾಗವಹಿಸಿ ಶ್ರೀಜಗದ್ಗುರುಗಳವರ ಕೃಪೆಗೆ ಪಾತ್ರರಾಗಬೇಕೆಂದು ಆಶಿಸುತ್ತೇವೆ.

ಈ ಉತ್ಸವದಲ್ಲಿ ಸಮಸ್ತ ಧರ್ಮಾಭಿಮಾನಿಗಳೂ ಭಾಗವಹಿಸಿ ಸದ್ಧರ್ಮ ಪ್ರಚಾರಕ್ಕೆ ಸಹಾಯಕರಾಗಬೇಕೆಂದು ಪ್ರಾರ್ಥಿಸುತ್ತೇವೆ.

ಈ ಉತ್ಸವದಲ್ಲಿ ಭಾಗವಹಿಸಲು ಬಯಸುವವರು ಕೂಡಲೇ ಕಾರ್ಯದರ್ಶಿಗಳಿಗೆ ತಿಳಿಸಿ ಸ್ಥಳಗಳನ್ನು ಕಾದಿರಿಸಿಕೊಳ್ಳಬೇಕೆಂದು ಸೂಚ

ಶ್ರೀ ಉಜ್ಜಯಿನೀ ಸದ್ಧರ್ಮಸಿಂಹಾಸನಮಠದ ಜೀರ್ಣೋದ್ಧಾರ

ಶ್ರೀ ಉಜ್ಜಯಿನೀ ಸದ್ಧರ್ಮಸಿಂಹಾಸನಮಠದ ಪ್ರಾಚೀನ ಕಟ್ಟಡ

ಶ್ರೀ ಉಜ್ಜಯಿನೀ ಸದ್ಧರ್ಮಸಿಂಹಾಸನಮಠದ ರಚನೆಯು ಅತಿ ಪುರಾತನಕಾಲಿಕವಾಗಿರುವುದರಿಂದ ಬಹು ಶಿಥಿಲವಾಗಿ ಶ್ರೀ ಸಿಂಹಾಸನದ ದಕ್ಷಿಣದಿಕ್ಕಿನ ಶ್ರೀ ದಾರುಕತೀರ್ಥದ ಸುತ್ತಲಿರುವ ಶಿವಪೂಜಾ ಮಂದಿರ, ಭೋಜನಶಾಲೆಮೊದಲಾದವುಗಳು ವಾಸಕ್ಕೆ ಅನರ್ಹವಾಗಿದ್ದವು ಆದಕಾರಣದಿಂದಲೇ ಶ್ರೀ ೧೦೦೮



ಶ್ರೀಜಗದ್ಗುರು ಸಿದ್ಧಲಿಂಗಶಿವಾಚಾರ್ಯರು

ಜಗದ್ಗುರು ಸಿದ್ಧಲಿಂಗಶಿವಾಚಾರ್ಯ ಮಹಾಸ್ವಾಮಿಗಳು ೧೯೩೦ ನೇ ಇಸವಿಯಲ್ಲಿ ಬಿಜಾಪುರಕ್ಕೆ ಸ್ವಾಗತದ ಮನೆ ಶ್ರೀ ಜಗದ್ಗುರು ಪಂಚಾಚಾರ್ಯ ಮಹಾ ಸಮ್ಮೇಲನಾಥವಾಗಿ ಸಭಾಭವನ (ದರ್ಬಾರಹಾಲ್) ಇತ್ಯಾದಿ ನೂತನ ಶಿಲಾಮಠದ ನಿರ್ಮಾಣ ಕಾರ್ಯ ಮೊದಲಿನ ಭವ್ಯ ಹಾಗು ಭದ್ರವಾದ ೧೦೧ ಗೋಣ್ಣೆ ಶಾಲೆಯೂ ಅತಿಥಿ (ವಿದ್ಯಾರ್ಥಿ) ಗಳ ನಿಮಿತ್ತ ವಿಶಾಲ ದ್ವೈಭೋಜನಶಾಲೆಯ ನಿರ್ಮಾಣಕಾರ್ಯವೂ ಕೈಕೊಳ್ಳಲ್ಪಟ್ಟವು ಈ ನೂತನ ಶಿಲಾಮಠದ ಜೀರ್ಣೋದ್ಧಾರ ಕಾರ್ಯಕ್ಕಾಗಿ ತಾನಾ ಪ್ರಾಂತದ ಮಹಾಜನರುಭಕ್ತರು ೩೩೫೦೦ ರೂಪಾಯಿಗಳನ್ನು ದಾನರೂಪದಿಂದ ಸಮರ್ಪಿಸಿ ಶ್ರೀಮತದ ನೂತನ ಶಿಲಾಪೀಠವನ್ನು ಉಲ್ಲೇಖಿಸಿಯರಾಗಿರುವದರಿಂದ ಈ ದಾತೃಗಳ ನಾಮಾವಲಿಯೂ ಸಹ ಯೋಜಿಸಲಾಯಿತು ಇದಕ್ಕೆ ಶ್ರೀ ಸೀರದ ಧನಾಗಾರದಿಂದಲೂ ಧನವು ಹೇರಳವಾಗಿ ವಿನಿಯೋಗಿಸಲ್ಪಟ್ಟಿತು ತಥಾಪಿ ಶ್ರೀ ಜಗದ್ಗುರು ಸಿದ್ಧಲಿಂಗಶಿವಯೋಗೀಶ್ವರರ ಸಂಕಲ್ಪವು ಅಪೂರ್ಣವಾಗಿರ ವಾಗಲೇ ೧೯೩೬ ನೆಯ ಇಸವಿಯಲ್ಲಿ ಉಕ್ತ ರೇಣ್ಯೆಯಿಂದ ಶ್ರೀ ಜಗದ್ಗುರು ಸಿದ್ಧಲಿಂಗಶಿವಯೋಗೀಶ್ವರರು ವಿಶ್ವೈಕ್ಯರಾದಪ್ರಯುಕ್ತ ಶ್ರೀಶಿವಯೋಗೀಶ್ವರರ ನೂತನ ಶಿಲಾಮಯ ಭವ್ಯನಿವಯೋಗಸಮಾಧಿಸ್ಥಲದ ಮಹಾದೇವಾಲಯಕ್ಕಾಗಿ ಅಕ್ಯಧಿಕಧನವನ್ನು ವಿನಿಯೋಗಿಸುವ ಪ್ರಸಂಗವು ನೂತನ ಶ್ರೀ ಜಗದ್ಗುರು ಸಿದ್ಧೇಶ್ವರಶಿವಾಚಾರ್ಯ ಮಹಾಸ್ವಾಮಿಗಳಿಗೆ ಅನಿವಾರ್ಯವೂ ಪರಮಾವಶ್ಯಕವೂ ಆಯಿತು ಈ ಸಮಾಧಿಯಲ್ಲಿ ಈಗ ಅಮೃತಶಿಲಾವಿಗ್ರಹ ಅಷ್ಟಂಡಿಪರಿಗಳ ಸ್ಥಾಪನೆಯಾಗಿರುತ್ತವೆ ಪ್ರತಿನಿತ್ಯ ಶ್ರೀರುದ್ರಾಭಿಷೇಕಾದಿ ಪೂಜಾಕ್ರಮವು ಸಾಂಗವಾಗಿ ನಡೆಯುತ್ತಲಿದೆ ಆ ಮಹಾಮಹಿಮಾನ್ವಿತ ಪರಮತಪೋನಿಧಿ ಶಿವಯೋಗಿಸಾರ್ವಭೌಮರಾದ ಶ್ರೀ ಜಗದ್ಗುರು ಸಿದ್ಧಲಿಂಗಶಿವಯೋಗಿ ಮಹಾಸ್ವಾಮಿಗಳ ಆ ಸಂಕಲ್ಪವನ್ನು ಈಗ ಸಂಪೂರ್ಣ ಮಾಡಬೇಕಾದ ಅವಶ್ಯಕತೆಯಿರುತ್ತದೆ ಆದಕಾರಣ ಸಮಸ್ತ ಸದ್ಭಕ್ತರೂ ಯಥಾಶಕ್ತಿ ಧನ ದಾನಮಾಡಿ ಶ್ರೀ ಜಗದ್ಗುರು ಸಿದ್ಧಲಿಂಗಮಹಾಸ್ವಾಮಿಯ ಕೃಪೆಗೆ ಪಾತ್ರರಾಗಬೇಕು

ಶ್ರೀಗುರುಭಕ್ತರ ಸೇವಾಧರ್ಮಕಾರ್ಯವಿಸ್ತಾರ

೧ ಶ್ರೀ ಪಂಚಾಚಾರ್ಯ ಸಭಾಭವನದಲ್ಲಿ ನಿರ್ಮಿತವಾಗಿರುವ ಏಮು ಪೀಠಗಳನ್ನು ಅಮೃತಶಿಲಾಖಚಿತ ಸಿಂಹಗಳಿಂದ ಪರಿಶೋಭಿಸುವಂತೆ ವಿರಚಿತವ ಸೇವಾಕಾರ್ಯವನ್ನು ನಹಿಸುವದಕ್ಕಾಗಿ ಒಂದು ಸಾವಿರಕ್ಕೆ ಮೇಲ್ಪಟ್ಟು ಧನಸಮರ್ಪಣೆ ಮಾಡುವವರ ನಾಮವನ್ನು ಶಿಲಾಶಾಸನದಲ್ಲಿ ಉಲ್ಲೇಖಿಸುವದಾಗುವದು

೨ ಶ್ರೀ ಪಂಚಾಚಾರ್ಯ ಸಭೆಯ ದರ್ಬಾರ ಹಾಲಿನಸ್ತಂಭನವ ಧೆರಂಗದ ಒಂದೊಂದು ನುಟಿಕದ ಸಂಪೂರ್ಣ ನಿರ್ಮಾಣಕ್ಕಾಗಿ ಏಮನೂರು ರೂಪಾಯಿಗಳನ್ನು ಸಮರ್ಪಿಸಿದವರ ನಾಮವನ್ನು ಶಿಲಾಶಾಸನದಲ್ಲಿ ಉಲ್ಲೇಖಿಸುವದಾಗುವದು

೩ ಈಗ ನೂತನ ಶಿಲಾಮಠದ ನಿರ್ಮಾಣಕ್ಕಾಗಿ ಧನಸಮರ್ಪಣೆ ಮಾಡಿದವರ ನಾಮಾವಲಿಯನ್ನು ಈ ರೀತಿ ಶಾಶ್ವತವಾಗಿ ಶಿಲಾಮಂಟಪಗಳಲ್ಲಿ ಉಲ್ಲೇಖಿಸುವದೆಂದಿರುತ್ತದೆ

೪ ಶ್ರೀ ೧೦೦೮ ಜಗದ್ಗುರು ಸಿದ್ಧಲಿಂಗಶಿವಾಚಾರ್ಯ ಶಿವಯೋಗಿ ಕರರ ದೇವಾಲಯದಲ್ಲಿ ಶ್ರೀಗಳ [ಸಂ|| ಕೈಲಾಸಲಿಂಗ ಶಿವಾಚಾರ್ಯಪ್ರಕಾಶಿತ] ಚರಿತ್ರೆಗಳು ಯಾತ್ರಿಕರಿಗೆ ದೊರೆಯುತ್ತವೆ ಈ ಚರಿತ್ರೆಗಳನ್ನು ಸ್ವೀಕರಿಸಿ ಅಮರಿಂದ ದೀಪಾರಾಧನೆಗೆಗೆ ಪುಣ್ಯಭಾಗಿಗಳಾಗಿರಿ

ಶ್ರೀ ೧೦೦೮ ಜಗದ್ಗುರು ಸಿದ್ಧಲಿಂಗಶಿವಾಚಾರ್ಯ ಮಹಾಸ್ವಾಮಿಗಳ ಶಿವಯೋಗಸಮಾಧಿಯುಳ್ಳ ಮಹಾದೇವಾಲಯವನ್ನು ಮತ್ತು ಶ್ರೀ ಪಂಚಾಚಾರ್ಯಸಭಾಶ್ಯಳ ಎರಡೂ ಭಾಗದಲ್ಲಿರುವ ಎಲ್ಲ ರೂಮುಗಳನ್ನು ಶ್ರೀ ಜಗದ್ಗುರು ಸಿದ್ಧೇಶ್ವರಶಿವಾಚಾರ್ಯ ಮಹಾಸ್ವಾಮಿಗಳು ಸಂಪೂರ್ಣ ಶಿಲಾಕಟ್ಟಡದಿಂದ ಪೂರ್ತಿಸಿದರು ಈಗ ಶ್ರೀ ಸದ್ಧರ್ಮಸಿಂಹಾಸನದ ವಾಮಭಾಗದಲ್ಲಿರುವ ಶ್ರೀ ಪೀಠಾಧಿಪತಿಗಳ ಖಾಸಾ ಶಿವಾರ್ಚನಮಂದಿರ ಸ್ವರ್ಣಭಾಂಡಾರ ಮತ್ತು ಸ್ನಾನದ ಮನೆ ಪಾಕಗೃಹಾದಿಗಳನ್ನು ಪರಿಪೂರ್ಣ ಮಾಡುತ್ತಲಿದ್ದಾರೆ

ನಾನಾವಿಧ ದಾನದಾತೃಗಳಿಗೆ ಅವಕಾಶ

ಶ್ರೀ ಉಜ್ಜಯಿನೀ ಸದ್ಧರ್ಮಪೀಠದಲ್ಲಿ ವಿಶೇಷತಃ ಸೇವಾಭಕ್ತಿಗಳನ್ನು ಸಮರ್ಪಿಸುವವರಿಗೆ ಕೆಳಕಂಡಂತೆ ಅವಕಾಶವನ್ನು ಕಲ್ಪಿಸಿದ್ದಾಗಿದೆ

೧ ವಿದ್ಯಾರ್ಥಿಭವ ದಾನ

೨ ನೀರಿನ ಮೋಟಾರ ದಾನ

೩ ವಿದ್ಯಾರ್ಥಿಗಳ ಅಧವಾ ಯಾತ್ರಿಕರ ವಾಸಕ್ಕಾಗಿ ರೂಮುಗಳಿಗೆ ಬೇಕಾದ ಸೌಕರ್ಯ ದಾನ

೪ ಗೋದಾನ, ಭೂದಾನ ಗಜದಾನ, ಧನ ಧಾನ್ಯ ದಾನ, ಲೋಹದ ಪಾತ್ರ ದಾನ, ರಜತಪಾತ್ರ ದಾನ, ಸ್ವರ್ಣ ಪಾತ್ರೆ ದಾನ, ತಾಮ್ರ ಪಾತ್ರದಾನ, ಹಿತ್ತಾಳೆ ಪಾತ್ರ ದಾನ, ಇತ್ಯಾದಿ ಯಥೇಷ್ಟ ದಾನ ಗಳಲ್ಲದೆ ಶಿವಪೂಜಾ ಮತ್ತು ಅಡಿಗೆ ಗೃಹಗಳಿಗೆ ಉಪಯುಕ್ತವಾದ ಸಾಮಗ್ರಿ ದಾನ

೫. ವಿಶೇಷತಃ ಯಾತ್ರಾಕಾಲಿಕ ಅನ್ನದಾನ ದೀಪಾರಾಧನೆಯ ಕಾಣಿಕಾ ವಸ್ತ್ರಿ ಧರ್ಮಶಾಲಾ (ಛತ್ರ) ನಿರ್ಮಾಣ ಧನ ದಾನಗಳು

ಫೋ:—ಉಜ್ಜಯಿನಿ, ತಾ|| ಕೂಡ್ಲಿಗಿ ಜಿ-ಬಳ್ಳಾರಿ,
ಬಿ ಮಲ್ಲಪ್ಪ ಹೆಡ್‌ಕ್ಲಾರ್ಕ್,
ಶ್ರೀ ಉಜ್ಜಯಿನೀಸದ್ಧರ್ಮಸಿಂಹಾಸನ ಮಠ.

ಇಷ್ಟಲಿಂಗಪೂಜಾವಿವರಣೆ

ಶ್ರೀ ಜಗದ್ಗುರು ವಿಶಾಸನಂದ ಜಂಗಮಾಚಾರ್ಯ ವಿರಚಿತ
" ವೀರಶೈವ ಪ್ರಕಾಶ " ಗ್ರಂಥದಿಂದ ಸಂಗ್ರಹಿಸಿದ್ದು

—

ಲೇ ಎಂ ಿ ಪ್ರಭುರಾಜೇ ಅರಮನೆಯ ಮಾ
ಮೈಸೂರು

(ಕಳೆದ ಸಂಚಿಕೆಯಿಂದ ಮುಂದುವರೆದುದು)

ಕೀಟೋ ಭೃಮರಯೋಗೆನ ಬ್ರಮರೋ ಒವಠಿಳ್ಳವಂ ಮಾನವ ತಿವಯೋಗೇನ ತಿಪ್ಪೀಜನಿತ ನಿಶ್ಚಯಂ ॥

ಕೀಟವು ಭ್ರಮರ ಸಂಗದಿಂಮುಂಟಾದ ಧ್ಯೇಂಕಾರೋಪದೇಶದಿಂದ ಬ್ರಮರವೇ ತಾನಾಗುವಂತೆ ಮಾನವನು ಇಷ್ಟಲಿಂಗವನ್ನು ಸದಾ ದೇಹದಲ್ಲಿ ಧರಿಸಿ ತನ್ನ ಪಾಮಕರಸೀರದಲ್ಲಿಟ್ಟು ಆತ್ಮೋಪಚಾರಗಳಿಂದ ಪೂಜಿಸುತ್ತಾ ಶಿವಧ್ಯಾನೈಕತತ್ಪರನಾಗಿ ಶಿವನನ್ನೇ ಹೊಂದುತ್ತಾನೆ ಎನ್ನಲೇ ಆಗುತ್ತಾನೆ

ಫಲಾದಿಕಂ ಕ್ರಿಯಾಸಾಸ್ಯಾಂ ನೀರಶೈವಂತು ಕನ್ಯತೆ।
ಆನ್ಯಶೈವಂತು ತತ್ಪರಂ ಫಲಮಲ್ಪ ಕ್ರಿಯಾ ಬಪು ॥

ವೀರಶೈವಮತದ ಕ್ರಿಯಾಚರಣೆಗಳು ಸೂಕ್ಷ್ಮವಾಗಿ ಇರುವುದರಿಂದಲೇ ಲಿಂಗಪೂಜಾಸಲವು ಮಹತ್ತರವೆಂದು ಇತರೇ ಶೈವಮತಕ್ರಿಯಾಚರಣೆಗಳು ಲಭಿಸಾಗಿದ್ದರೂ ಸಲವು ಮಾತ್ರ ಅಲ್ಪವಾಗಿ

ವೀರಶೈವಮತಂ ಸದ್ಯೋಜಙ್ಞಗವೋತ್ಪ್ರಕಾಧನ
ಸರ್ವೋತ್ಕೃಷ್ಟಮಂ ಮಮು ಮತಂ ಯತ ಸರ್ವತ್ರ
ಮೋಕ್ಷ ಸಿದ್ಧಿಃ ॥
ನ ವಿ ರಶೈವಸದೃಶಂ ಮತಮನ್ಯಿತ್ಪತ್ರಯೇ।
ಸರ್ವಭೋಗಸ್ವರೂಪಾಣ್ಯಾಂ ವಿಶೇಷಾಯುಜ್ಯಪಾಯಕಂ

ಶೈವರು ಗೃಹಸ್ಥಾಶ್ರಮವನ್ನು ತ್ಯಜಿಸಿ ವಾನಪ್ರಸ್ಥಾಶ್ರಮವನ್ನು ಹೊಂದಿ ಕಾಡಿನಲ್ಲಿ ವಾಸಿಸುತ್ತ ಕಂದಮೂಲಾಹಾರವನ್ನು ಸೇವಿಸುತ್ತಾ ತಪೋಕ್ಲೇಶವನ್ನು ಸಹಿಸುತ್ತಾ ಕೊನೆಗೆ ಶರೀರತ್ಯಾಗವನ್ನು ಮಾಡಿ ಶಿವಸಾಯುಜ್ಯವನ್ನು ಅಂದರೆ ಮೋಕ್ಷವನ್ನು ಸುಲಭವಾಗಿ ಪಡೆಯುತ್ತಾರೆ. ಇಂಥ ಶ್ರೇಷ್ಠವಾದ ಸನ್ಮಾರ್ಗ ವೀರಶೈವಮತಕ್ಕಿಂತ ಬೇರೆ ಯಾವ ಮತವಾ ಮೂರು ಲೋಕಗಳಲ್ಲಿಯೂ ಇಲ್ಲವೆಂದು ಪರಂವನು ಪಾರ್ವತಿಗೆ ಬೋಧಿಸಿರುತ್ತಾನೆ

ಸ ಭೂತ್ಯಯಾಕ್ಷತಕುಂ ಸ ಲಿಂಗಂ ಶಿವಯೋಗಿನಂ।
ದೈಸ್ಪಾಪ್ಯಸದ್ಯೋ ವಿಮುಚ್ಯಂತೇ ಪಾಪೆನ್ಯೋಪಿ
ನ ಸಂಶಯಃ ॥

ಭಸ್ಮೋದ್ಧೂಳನ ತ್ರಿಪುಂಡ್ರಧಾರಣೆಯಿಂದ ಕೂಡಿದವನೂ, ರುದ್ರಾಕ್ಷಿಯೇ ಆಭರಣವಾಗಿಳ್ಳವನೂ, ಯಾವಾಗಲೂ ಯಜಿಸಿಬಿಡದೆ ಲಿಂಗವನ್ನು ದೇಹದಲ್ಲಿ ಧರಿಸಿರುವಾತನೂ, ಲಿಂಗಬಾಹ್ಯನಾಗುವೆಂಬ ಭಯದಿಂದ ಬೇರೆ ಸೀಥದಲ್ಲಿಟ್ಟು ಪೂಜಿಸದೆ ತನ್ನ ವಾಮಕರವನ್ನೇ ಸೀರವನ್ನಾಗಿ ಮಾಡಿಕೊಂಡು ಪೂಜಿಸುತ್ತಿರುವ ಯಾವ ತಿವಯೋಗಿಯ ದರ್ಶನಮಾತ್ರದಿಂದ ಪಾಪಿಯು ತನ್ನ ಪಾಪವನ್ನು ಕಳದುಕೊಳ್ಳುತ್ತಾನೆಂದು ಪರಮೇಶ್ವರನು ಪಾರ್ವತಿಗೆ ಹೇಳಿರುತ್ತಾನೆ

ಕೈವಿಶೇಷ ಪತಂಗೇಭ್ಯಃ ಪತಮಃ ಪ್ರಜ್ಞಯಾಧಿಕಾಃ
ಪ್ರಯೋಜ್ಯೋಸ್ಮಿನ್ ನಂತಃ ಶ್ರೇಷ್ಠಾಸ್ತೇಷಾಮ ಶ್ರೇಷ್ಠಾ
ದ್ವಿಜಾತಯಃ ॥
ದ್ವಿಜಾತಿಷ್ವಧಿಕಾಸಿದ್ಧಾ ವಿಪ್ರೇಷು ಕೃತಬುದ್ಧಯಃ।
ಕೃತಬುದ್ಧಿಷು ಕರ್ತಾರಸ್ತೇಭ್ಯಃ ಸನ್ಯಾಸಿನೋ
ಧಿಕಾ ॥
ತೇಭ್ಯೋ ವಿಜ್ಞಾನಿನಃ ಶ್ರೇಷ್ಠಾಸ್ತೇಷು ಶಂಕರ
ಪೂಜಕಾಃ ।
ತೇಷು ಶ್ರೇಷ್ಠಾಮಹಾಭಾಗ ಮಮಲಿಂಗಾಂಗಸಂಗಿನಃ
ಲಿಂಗಸಂಗಿನೀಷ್ಟಧಿಕಃ ಪಟಿಸ್ಥಲಜ್ಞಾನವಾನ್
ಪುಮಾನ್ ।
ತಸ್ಮಾದಪ್ಯಧಿಕೋನಾಸ್ತಿ ತ್ರಿಪುಲೋಕೇಷುಸರ್ವದಾ॥

ಕ್ರಿಮಿಕೀಟಗಳಿಗಿಂತ ಪತಂಗದ ಹುಳುವು ಶ್ರೇಷ್ಠವೆಂದ್ದು ಪತಂಗಕ್ಕಿಂತಲೂ ಪಕ್ಷುಗಳು ಶ್ರೇಷ್ಠವಾದವು ಪಕ್ಷುಗಳಿಗಿಂತಲೂ ಮಾನವರು ಶ್ರೇಷ್ಠರು ಮಾನವರಲ್ಲಿ ದ್ವಿಜರು ಶ್ರೇಷ್ಠ ದ್ವಿಜರಿಗಿಂತಲೂ ವಿಪ್ರರು ಶ್ರೇಷ್ಠರು ವಿಪ್ರರಿಗಿಂತಲೂ ಅಗ್ನಿಹೋತ್ರಿಯ ಶ್ರೇಷ್ಠ ಅಗ್ನಿಹೋತ್ರಿಗಿಂತಲೂ ಯಜ್ಞಕರ್ತರು ಶ್ರೇಷ್ಠರು ಯಜ್ಞಕರ್ತರಿಗಿಂತಲೂ ಸನ್ಯಾಸಿಯು ಅಧಿಕರು ಸನ್ಯಾಸಿಗಿಂತಲೂ ಜ್ಞಾನಿಯಾದ ಸ್ಥಾವರ ಲಿಂಗ ಪೂಜಕರು ಶ್ರೇಷ್ಠರು ಸಾವರಲಿಂಗಪೂಜಕರಿಗಿಂತಲೂ ನನ್ನವನಾದ ಲಿಂಗಾಂಗಸಂಗಿಯು ಶ್ರೇಷ್ಠರು ಲಿಂಗಾಂಗಸಂಗಿಗಿಂತಲೂ ಪಟ್ಟಸ್ಥಲಬ್ರಹ್ಮಜ್ಞಾನಿಯು ಶ್ರೇಷ್ಠನು ಇವರಿಗಿಂತ ಶ್ರೇಷ್ಠನಾದವನು ಮೂರು ಲೋಕದಲ್ಲು ಮತ್ತಾರೂ ಇಲ್ಲವು ಎಂಬುದಾಗಿ ಲಿಂಗಾಂಗಸಂಗಿಯೂ ಪಟ್ಟಸ್ಥಲಜ್ಞಾನಿಸಂಪನ್ನನೂ ಆದ ಶಿವಯೋಗಿಯನ್ನು ಪರಂವನು ಈ ಪ್ರಕಾರ ಮುಕ್ತಕಂಠದಿಂದ ಸಾರಿರುತ್ತಾನೆ

ತಸ್ಮೈ ಪ್ರಭೃತಿ ಸರ್ವಾತ್ಮಂ ತ್ರಿಪುಂಡ್ರಧಾರ್ಯನಾಸಹ।
ಸರ್ವಾಂಗೋದ್ಧೂಲನಂ ನಿತ್ಯಂ ಕುಲಧರ್ಮಪರಿರಾ
ಯಣಃ ॥
ಲಿಗ್ಗರಿಶ್ಚಾದಿಧರ್ಮಂತ್ರೈವ ಏವಪಂಜಾಕ್ಷರೋಣವಾ
ರುದ್ರಾಕ್ಷಂಧಾರ್ಯಾಸಹ ಪರೋಭವ ಸಮಾಹಿತ ॥
ಯಾವಜ್ಜೀವನಿಮಂ ದತ್ತಮಿತ್ಯಲಿಂಗಂ ಸನಿರ್ಜ
ಯೇತ್ ।
ಕರಂಬ್ಯಪಿಂ ವಿನ್ಯಸ್ಯ ತದ್ಧ್ಯಾನಾಸಕ್ತಮಾನಸಃ ॥

ಪಿರ್ವನು ತನ್ನ ಇಷ್ಟಲಿಂಗಪೂಜೆಯನ್ನಾಚರಿಸುವಾಗ ಪ್ರಾರ್ಥಿಸಿದಂತೆ ಶ್ರೀಪಂಡ್ರಧಾರಣೆಯಿಂದಲೂ ರುದ್ರಾಕ್ಷಧರಣೆಯಿಂದಲೂ ಧರಿಸಿ ಇಷ್ಟಲಿಂಗವನ್ನು ಕರದಲ್ಲಿಟ್ಟು ಧ್ಯಾನಾಸಕ್ತನಾಗಿ ಶಿವಪಂಚಾಕ್ಷರಿಯನ್ನು ಜಪಿಸುತ್ತಾ ಶಿವಪೂಜೆಯನ್ನು ಮಾಡಿ ತದನಂತರ ಭೋಜನಾದಿಗಳನ್ನು ಮಾಡಿ ಶಿವಯೋಗಿಯ ದರ್ಶನಮಾತ್ರದಿಂದಲೇ ಪಾಪಿಯು ತನ್ನ ಪಾಪವನ್ನು ಕಳದುಕೊಳ್ಳುತ್ತಾನೆಂದು ಪರಮೇಶ್ವರನು ಪಾರ್ವತಿಗೆ ಹೇಳಿರುತ್ತಾನೆ

ಶೈವಮತದಲ್ಲಿ ಸಂಸಾರತ್ಯಾಗಿಯಾದ ಸನ್ಯಾಸಿಗಳಿಗೆ ಮಾತ್ರ ಲಿಂಗಧಾರಣೆಯು ಇರುವುದು ಆದರೆ ವೀರಶೈವಮತದಲ್ಲಿ ಸಂಸಾರಿಗಳಾದ ಗೃಹಸ್ಥರಿಗೂ ಲಿಂಗಧಾರಣೆಯು ಇರುವುದರಿಂದ ವೀರಶೈವರು ಯಾವ ಕಾರಣದಿಂದಲೂ ಕರಪಿಸವನ್ನು ಒಟ್ಟು ಪ್ರತ್ಯೇಕಿಸಿರದ ಮೇಲೆ ತಮ್ಮ ಇಷ್ಟಲಿಂಗವನ್ನಿಟ್ಟು ಪೂಜಿಸುವುದಿಲ್ಲವು ಪ್ರಮಾದವಶಾತ್ ಮಾಡಿದ್ದಾದರೆ ಅಕ್ಷಸಂದಿಪತಿಯಾದರಾವಣನಿಗಾದ ಫಲವೇ ಪ್ರತ್ಯೇಕ ಸೀರದಲ್ಲಿಟ್ಟು ಪೂಜಿಸಿದ ವೀರಶೈವರಿಗೂ ಪ್ರಾಪ್ತವಾಗುವುದರಲ್ಲಿ ಸಂಶಯವಿಲ್ಲ. ಆದ್ದರಿಂದಲೆ ವಿಸಿಧಿಧ್ಯ ತದಾತ್ಮಂ ವಿವರೀಲೋಹಪಾತ್ರಕೇ। ವಿವಲಿಂಗಂ ವಿಸಿಧ್ಯಸ್ಯ ಪೂಜಯಂಂಚಿರಂಶ್ಚಿತಃ ॥ ಎಂಬಂತೆ ಇಷ್ಟಲಿಂಗವನ್ನು ಯಾರು ಲೋಹಪಾತ್ರೆಯಲ್ಲಿಟ್ಟು ಪೂಜಿಸುತ್ತಾರೋ ಅವರ ಪೂಜೆಯು ರಾಕ್ಷಸರು ಮಾಡುವ ಪೂಜೆಯಾಗಿ ಪರಿಣಮಿಸಿ ಉದಾತ್ತವಾದ ಪಲಕ್ಕೆ ಪ್ರಯತ್ನಿಸಲಾಗಿ ವಿರೋಧ ಫಲಪ್ರಾಪ್ತಿಯಾಗುತ್ತದೆ ಆದ್ದರಿಂದ ವೀರಶೈವರು ಕರಪೀಠಾರ್ಚನೆಯನ್ನೆಸ್ಟೇ ಪ್ರಧಾನವಾಗಿ ಅಂಗೀಕರಿಸಿ ಶಿವಯೋಗಿಗಳಾಗಿ ಅನಂತಮಹಿಮಸ್ಥಾತ್ಮಕವಾಷಡಗಳನ್ನು ಪ್ರತ್ಯಕ್ಷವಾದ ಮಾಡಿತೋರಿಸಿರುತ್ತಾರೆ ತೋರಿಸುತ್ತಿದ್ದಾರೆ

(ಸತೀಪ)

ಪ್ರಕಟಣೆ

ರೂರಲ್ ರಿಸಿಡೆನ್ಷಿಯಲ್ ಹೈಸ್ಕೂಲ್
ಅಂಕನಹಳ್ಳಿ ಮಹ, ಕುಣಿಗಲ್ ತಾ॥

ಮೇಲ್ಕಂಡ ಪಾಠಶಾಲೆಗೆ ದಾಖಲಾಗಲು ಇಚ್ಛಿಸುವ ವಿದ್ಯಾರ್ಥಿಗಳು ತಾ॥ ೧೦-೫-೧೯೩೭ ರೊಳಗೆ ಅರ್ಜಿಯನ್ನು ಹಾಕಿಕೊಳ್ಳತಕ್ಕದ್ದು ಆಪ್ಟಿ ಕ್ಷೇತ್ರಪಾಲ್ ಫಾರಂಗಳನ್ನು ಇಚ್ಛೆಯುಳವರು ಸ್ಕೂಲಿನಲ್ಲೇ ಪಡೆಯತಕ್ಕದ್ದು ಯೋಗ್ಯರಾದ ಬಡ ವಿದ್ಯಾರ್ಥಿಗಳಿಗೆ ಉಚಿತ ವಸತಿ ಮತ್ತು ಊಟ ಸಹ ವಿರ್ಪಡಿಸಿರುತ್ತದೆ ತಾ॥ ೧೫-೫-೧೯೩೭ ರೊಳಗೆ ಬಂದು ದಾಖಲಾಗಬೇಕು ನಂತರ ಬಂದ ಅರ್ಜಿಗಳನ್ನು ಗಮನಿಸುವುದಿಲ್ಲ

ಶ್ರೀ ತಿದ್ದ ಲಿಂಗಿಕಿವಾಚಾರ್ಯ ಸ್ವಾಮಿಗಳು
ಪ್ರೆಸಿಡೆಂಟ್

ಕೇದಾರಪೀಠದ ವ್ಯಾಜ್ಯಮುಕ್ತಾಯಕ್ಕೆ ಯೋಗ್ಯ ಸಲಹೆ

ವೈರಾಗ್ಯಪೀಠವೆಂದು ಪ್ರಖ್ಯಾತಿಪೆತ್ತ ಶ್ರೀಜಗದ್ಗುರು ಕೇದಾರ ಮಹಾಪೀಠದ ವ್ಯಾಜ್ಯದ ಇತಿಶ್ರೀಗಾಗಿ " ಪಂಚಾಚಾರ್ಯಪ್ರಭಾ " ಸಂಪಾದಕರು ಬರೆದ ಲೇಖನವು ಸೂಕ್ತವೂ, ಸಮಯೋಚಿತವೂ ಆಗಿದೆಯೆಂದು ಹೇಳಲು ಯಾವ ಆಭ್ಯಂತರವಿಲ್ಲ ಶ್ರೀ ಪಂ॥ ಕೈಲಾಸಲಿಂಗಶಿವಾಚಾರ್ಯಮಹಾಸ್ವಾಮಿಗಳ ಸನ್ನಿಧಿಯಲ್ಲಿ ಕೆಲವೇ ದಿವಸ ಅಂತೇವಾಸಿಯಾಗಿ ಅಧ್ಯಯನ ಮಾಡಿದ ನಮಗೆ ಅವರ ವಿದ್ಯಾಪ್ರಭೆ, ತಪಃಶಕ್ತಿ, ಲಿಂಗಪೂಜಾನಿಷ್ಠೆ ಮೊದಲಾದ ಅವರ್ಣನೀಯ ಶಕ್ತಿ ಸಾಮರ್ಥ್ಯಗಳನ್ನು ವರ್ಣಿಸುವ ಶಕ್ತಿಯಿಲ್ಲದಿದ್ದರೂ ಹಿಂದೆ ಅವರು ಪೀಠಾಚಾರ್ಯರಾಗಿದ್ದಾಗ ಅವರ ಯೋಗ್ಯತೆಯನ್ನು ಸ್ವತಃ ಕಂಡು ಅಮಭವಿಸಿದ ನಮಗೆ ಅವರ ಬಗ್ಗೆ ಒಂದೆರಡು ಮಾತುಗಳನ್ನು ಬರೆಯಲು ತುಂಬಾ ಹೆಮ್ಮೆಯೆನಿಸುತ್ತಿದೆ

ಶ್ರೀ ಪಂ॥ ಕೈಲಾಸಲಿಂಗಶಿವಾಚಾರ್ಯರು ಅಪ್ರತಿಮ ವಿದ್ವಾಂಸರೂ, ಜಿತೇಂದ್ರಿಯರೂ ಆದುದರಿಂದಲೇ ಹಿಂದಿನ ಶ್ರೀಜಗದ್ಗುರು ಸಿಲಲಕಂರಲಿಂಗ ಶಿವಾಚಾರ್ಯ ಮಹಾಸ್ವಾಮಿಗಳು ಅವರಿಗೆ ಪೀಠಾಧಿಕಾರವನ್ನ ನೆಗ್ಗಿಸಿ ಪೀಠದ ಆಧಿಕಾರವಹಿಸಿ ಎಲ್ಲ ಆಸು ಕೂಲತೆಗಳನ್ನೊದಗಿಸಿಕೊಟ್ಟು ಕರ್ತೃತ್ವದ ಸಂಪೂರ್ಣ ಆಧಿಕಾರ ಕೊಟ್ಟಿದ್ದರು ಸಂಸ್ಥಾನದ ಆಡಳಿತೆಯೆಲ್ಲವೂ ಸುಗಮವಾಗಿಯೇ ಸಾಗಿತ್ತು ಆದರೆ ಕಾಲಗತಿಯ ವೈಚಿತ್ರ್ಯದಿಂದ ಸ್ವಾರ್ಥಸಾಧಕರ ಬಲೆಗೆ ಸಿಕ್ಕು ಇವರು ವ್ಯಾಜ್ಯದ ಸೆಳವಿಗೆ ಬಿದ್ದರು

ಹೀಗೆ ವ್ಯಾಜ್ಯದ ಮೂಲಕ ಎಷ್ಟೊಂದು ತ್ರಾಸು ಬಂದರೂ ತಮ್ಮ ವೀರವೃತದಿಂದ ಸಹಿಸಿಕೊಂಡು ಸ್ವತಃ ಭಿಕ್ಷಾವೃತ್ತಿಯಿಂದ, ನಾಡಿನ ಸದ್ಭಕ್ತರಿಂದ ಧನ ಸಂಗ್ರಹಿಸಿ ವ್ಯಾಜ್ಯಮಾಡಿ ಕೋರ್ಟಿನವರಿಂದ' ದ್ವನ್ನಣ ದೇಶದ ಜಂಗಮ ಗೋಸಾಯಿಗಳಿಗೆ ಅಧಿಕಾರವಾಗಿ ತಕ್ಕದ್ದೆಂಬ " ಏಕಾಯವನ್ನು ಪಡೆದ ಶ್ರೀ ಪಂ॥ ಕೈಲಾಸಲಿಂಗಶಿವಾಚಾರ್ಯ ಮಹಾಸ್ವಾಮಿಗಳಿಗೆ ಬೆಂಬಲಕೊಡುವದು ಪೀಠಾಚಾರ್ಯರ, ಹಾಗೂ ಸಮಾಜ ಧುರೀಣರ ಆದ್ಯ ಕರ್ತವ್ಯ

ಧರ್ಮಗ್ಲಾನಿಯ ಇಂದಿನ ನೆವ ಮನ್ವಂತರದಲ್ಲಿ ಧರ್ಮದ ಕೇಂದ್ರಗೊಳದ ಧರ್ಮಪೀಠಗಳು ಧರ್ಮೋಧಿಕಾರಿಗಳಲ್ಲದೇ ವಿರಾಜಿಸುವದೆಂತು ? ಕಾರಣ ಕೇದಾರ ಪೀಠದ ಅಧಿಕಾರ ಪ್ರಾಪ್ತಿಗಾಗಿ ಭಿಷಜ್ಯಕ್ಷೆಚ್ಛೆಗೆದ್ದು ಮಠ, ಮನೆಗಳನ್ನು ತ್ಯಜಿಸಿ, ಅಹೋರಾತ್ರಿ ಪರಿಶ್ರಮಿಸುತ್ತಿರುವ ಶ್ರೀ ಪಂ॥ ಕೈಲಾಸಲಿಂಗಶಿವಾಚಾರ್ಯರಿಗೆ ಸಮಾಜಾಭಿಮಾನಿಗಳು ಬೆಂಬಲಕೊಟ್ಟು ಅವರನ್ನು ಪುನಃ ಕೇದಾರ ಪೀಠದ ಜಗದ್ಗುರುಗಳನ್ನಾಗಿ ಕಾಣುವ ಸಂಯೋಗವನ್ನೊದಗಿಸಿಕೊಡಲೆಂದು ಶ್ರೀಜಗದಾಚಾರ್ಯರಲ್ಲಿ ಅನನ್ಯ ಪ್ರಾರ್ಥನೆ

ಶ್ರೀ॥ ಪಂ॥ ಬ್ರಿ॥ ಸಂಗಮೇಶ್ವರವಿರಾಚಾರ್ಯರು
ಕಾವ್ಯಕಿರ್ಥ
ಆರಳೆರೀಮಠ ಕಾಕನೂರ

ಆನಂದ ಪರ್ ಫ್ಯೂಮರಿ ವರ್ಕ್ಸ್

973, ಶಬೀರ್ ರೋಡ್, ಮೈಸೂರು

ದೇಶಬಾಂಧವರೆ!

ಈ ಕಾಲದಲ್ಲಿ ಸರ್ವರೂ ನಾನಾರೀತಿಯಿಂದ ತಮ್ಮ ಇಷ್ಟದೇವತೆಗಳನ್ನು ಪೂಜಿಸುವುದುಂಟು ಪೂಜೆಗೆ ಅಮಿಪಮವಾದ ಸುಗಂಧದ್ರವ್ಯಗಳು ಅವಶ್ಯವಾಗಿ ಬೇಕು. ಆದುದರಿಂದ ಪರಿಶುದ್ಧವಾದ, ಮಧುರ ಪರಿಮಳವುಳ್ಳ ನಮ್ಮ ದಯಾನಂದ ಮೈಸೂರು ಅಗರ ಬತ್ತಿಗಳನ್ನೇ ಯಾವಾಗಲೂ ಉಪಯೋಗಿಸಿರಿ

ಒಂದ್ಡಕಾಶ (24 ತೊಲಾ) 1 ಸೇರಿಗೆ 8 ರೂ
ದಯಾನಂದ ,, ,, 6 ರೂ
ಪ್ರೇಮಗಿರ್ತಾ ,, ,, 12 ರೂ

ವಿಳಾಸ –

ದಯಾನಂದ ಪರ್ ಫ್ಯೂಮರಿ ವರ್ಕ್ಸ್,
973, ಶಬೀರ್ ರೋಡ್, ಮೈಸೂರು

Edited Printed and Published by Brihanmathadhyaksha Sri Mahadevaiah at Sri Panchacharya Electric Press, Sayaji Rao Road, Mysore

REGISTERED No. M 2266 ‖ ಶ್ರೀಜಗದ್ಗುರು ಪಂಚಾಚಾರ್ಯಾಭ್ಯಾಂ ಪ್ರಸೀದತಂ ‖ REGISTERED No M 2266

ಪಂಚಾಚಾರ್ಯಪ್ರಭಾ

ಪ್ರತಿ ಸೋಮವಾರ ಮೈಸೂರು ನಗರದಲ್ಲಿ ಪ್ರಕಟಿಸಲ್ಪಡುವುದು.

ಪಂಚಾಸ್ಯಾಸನಪಂಕಜಾತಜನಿತರ್ ಪಂಚಾಸ್ಯಪೀಠಾಧಿಪರ್ । ಪಂಚಶ್ಲೋಕವಿನಾತಕರ್ ಪರತರಶ್ರೀಪಂಚಲಿಂಗೋದ್ಭವಾ ॥
ಪಂಚಾಚಾರನಿಯಾಮಕರ್ ಪರಿಲಸತ್ಪಂಚಾಕ್ಷರೀಮೋದಧರ್ । ಪಂಚಾಚಾರ್ಯಜಗದ್ಗುರೂತ್ತಮರನರ್‌ಪಾಲಿಪ್ಪ ವೀರೇಶಮಂ ॥

ಸಂಸ್ಥಾಪಕರು— ಶಾಗಸೂರು ಬೃಹನ್ಮಠಾಧ್ಯಕ್ಷರಾದ ವೇರಿ ಪಂಚಿ ಶ್ರೀ ಶಾಶ್ವತಶಾಕ್ತಾಶ್ರಿಗಳವರು.

ಚಾರ್ಜಿಸಿಯಂದಾ ೩ ರೂ. ೫೦ ನಯೆಪೈಸೆ] ಸಂಪಾದಕರು— ಶಾಗಸೂರು ಬೃಹನ್ಮಠಾಧ್ಯಕ್ಷರಾದ ಶ್ರೀ ಮಹಾದೇವಯ್ಯನವರು [ವಿ ಖರ್ಚು ಸೇರಿ ೪ ರೂ

ಸಂಪುಟ ೩೦] ಸೋಮವಾರ ತಾ॥ ೨೯ ನೇ ಏಪ್ರಿಲ್ ೧೯೫೭ [ಸಂಚಿಕೆ ೫೦

ಪತ್ರವ್ಯವಹಾರ

[ಚಾತ್ಮೀದಾರರು ಅಭಿಪ್ರಾಯ ಪಡುವ ಲೇಖನಗಳಿಗೆ ಪತ್ರಿಕಾಕರ್ತರು ಜವಾಬ್ದಾರರಲ್ಲ ಎಂಬ ವಿಷಯವನ್ನು ಸರ್ವರೂ ಲಕ್ಷ್ಯದಲ್ಲಿಡತಕ್ಕದ್ದು. —ಸಂ]

ಮಹಾರುದ್ರಾಭಿಷೇಕ-ಸಮಾರಂಭ ಬೆನಕೊಪ್ಪ

ಧಾರವಾಡ ಜಿಲ್ಲಾ ನರಗುಂದ ಪೇರಾ ಪೈಕೆ ಬೆನಕೊಪ್ಪ ಗ್ರಾಮದಲ್ಲಿರುವ ವೇ॥ ಶ್ರೀ ಇಂದುಧರಯ್ಯಾ ಚರಂತಿಯ್ಯಾ ಹಿರೇಮಠರ ಇವರು ಶ್ರೀ॥ ಷ॥ ಬ್ರ॥ ಕಟ್ಟವಸ್ಯಾಮಿಗಳು ಹಿರೇಮಠ ಕೊಣ್ಣೂರು ಇವರನ್ನು ಕರೆದುಕೊಂಡು ಬಂದು ತಮ್ಮ ಮರದಲ್ಲಿ ಶ್ರೀ ಶಕೆ ೧೮೭೯ ಹೇವಿಳಂಬಿ ಸಂವತ್ಸರ ಜೈತ್ರ ಬಹುಳ ೪ (ತಾ॥ ೧೪-೪-೫೭) ನೇ ಗುರುವಾರ ಸದರಿ ಶ್ರೀಗಳವರ ಪಾದಕಮಲಗಳಿಗೆ ರುದ್ರಾಭಿಷೇಕ ನಂತರ ಪಾದಪೂಜೆಗಳನ್ನು ವೈಭವದಿಂದ ನೆರವೇರಿಸಿದರು ಈ ಮಂಗಲಕಾರ್ಯದಲ್ಲಿ ಪಂಚಾಚಾರ್ಯ ಪ್ರಭಾಪೋಷಣಕ್ಕಾಗಿ ಒಂದು ರೂಪಾಯಿ ಶ್ರೀಗಳವರ ಅಪ್ಪನೆಯ ಪ್ರಕಾರ ಇಂದುಧರಯ್ಯನವರು ಸಮರ್ಪಿಸಿದರು ಶ್ರೀಜಗದ್ಗುರು ಪಂಚಾಚಾರ್ಯರು ಸದರಿಯವರ ಕುಟುಂಬವರ್ಗಕ್ಕೆ ಆಯುರಾರೋಗ್ಯಭಾಗ್ಯಾದಿಗಳನ್ನೆತ್ತು ರಕ್ಷಿಸಲೆಂದು ಹಾರೈಸುತ್ತೇವೆ

ಏನರ ಪ್ರೇಷಕ

ಶ್ರೀ ವೀರಭದ್ರಸ್ವಾಮಿ ರಥೋತ್ಸವ ಸಮಾಪ್ತಿ

ಆದವಾನಿಯಲ್ಲಿ ದಿನಾಂಕ ೧೫-೪-೫೭ ನೇ ದಿವಸ ಶ್ರೀ ಕೋಟೆ ವೀರಭದ್ರೆ ಸ್ವಾಮಿಯ ರಥೋತ್ಸವದ ಅಂಗವಾಗಿ ಶ್ರೀ ಪೇಟೆ ವೀರಭದ್ರ ಸ್ವಾಮಿ ದೇವಸ್ಥಾನದಲ್ಲಿ ಸುಸ್ವಸಿದ್ಧ ಕೀರ್ತನ ವಿದ್ವಾನ್ ವುಲಗೊರ್ ದತ್ತಂಭಟ್ಟರಿಂದ ೫ ದಿವಸದಿಂದ ತಾ॥ ೧೧ ೪-೫೭ ರಿಂದ ೧೫ ೪ ೫೭ ರವರೆಗೆ ಕೀರ್ತನಗಳು ಜರುಗಿದವು ಕೀರ್ತನಲು ಶ್ರೋತ್ರುಗಳು ಭಕ್ತರು ಕಿಕ್ಕಿರಿದು ಕೂಡುತ್ತಿದ್ದರು. ಆದವಾನಿ ಭಾಗವು ಆಂಧ್ರಕ್ಕೆ ಸೇರಿದ್ದು ಆದವಾನಿ ಕನ್ನಡಿಗರು ಕನ್ನಡ ಭಾಷೆಯನ್ನು ಮರೆಯದಿದ್ದರೆ ಒಂದಾನೊಂದು ವೇಳೆಯಲ್ಲಿ ಆದವಾನಿ ಭಾಗವು ಕರ್ನಾಟಕದಲ್ಲಿ ವಿಲೀನವಾಗುವುದೆಂದು ಕೀರ್ತನಕಲ್ಲಿ ಸಿರಪಿಸಿದರು ಕೊನೆಯ ದಿವಸ ಶ್ರೀಮತ್ ಪೂಜ್ಯ ಶ್ರೀಗಂಗಾಧರ ಸ್ವಾಮಿಗಳವರು ಮಸ್ಸಿ ಇವರ ನೇತೃತ್ವದಲ್ಲಿ ಮಂಗಳಕಾರ್ಯವು ಜರುಗಿ ಅಮಂಕ್ತಿಶರಿಗೆ ಸಹಸ್ರಾಶಮಹಲಾಯಿತು.

ಹಿರೇಮಠದ ರಾಜಯ್ಯಸ್ವಾಮಿ
ವೀರಶೈವ ಸಮಾಜ ಸೇವಾ ಸಂಘ
ಆದವಾನಿ

ಶ್ರೀ ಉಜ್ಜಯಿನೀಸದ್ಧರ್ಮಪೀಠದ ಜ್ಞಾನಗುರುವಿದ್ಯಾಪೀಠ

೧ ಶ್ರೀ ೧೦೦೮ ಜಗದ್ಗುರು ಸಿದ್ಧಲಿಂಗವಾಚಾರ್ಯ ಮಹಾಸ್ವಾಮಿಗಳಿಂದ ೧೯೨೨ ನೇ ಇಸವಿಯಲ್ಲಿ ಜೆರುಸ್ಥಿರ ಆಸ್ತಿ (ಧನರಾಶಿ) ಗಳೊಡನೆ ಸಂಸ್ಥಾಪಿತವಾದ ಜ್ಞಾನಗುರು ವಿದ್ಯಾಪೀಠದ ನಿಯಮಾವಳಿಯು ಪ್ರತ್ಯೇಕ ಮುದ್ರಿತವಾಗಿದೆ ಈ ವಿದ್ಯಾಪೀಠದಲ್ಲಿ ಪ್ರವೇಶಮಾಡುವ ವೀರಮಾಹೇಶ್ವರ ವಟುಗಳು ೫ ರೂಪಾಯಿ ಪ್ರವೇಶ ಶುಲ್ಕದೊಡನೆ ಬರಬೇಕು

೨ ವಟುಗಳು ವೀರಮಾಹೇಶ್ವರೋಚಿತ ಉಪನಯನ ದೀಕ್ಷಾ ಸಂಸ್ಕಾರಗಳನ್ನು ಪಡೆದವರಾಗಿರಬೇಕು ಅಥವಾ ಶ್ರೀ ಉಜ್ಜಯಿನೀ ಸದ್ಧರ್ಮಪೀಠದಲ್ಲಿ ಪದ್ಧತಿಯಂತೆ ಪಡೆಯುವ ದೀಕ್ಷಾಗುರುಸ್ಥಲದಲ್ಲಿ ಈ ಸಂಸ್ಕಾರಗಳನ್ನು ಶಾಸ್ತ್ರೋಕ್ತರೀತ್ಯಾ ಪಡೆಯಲು ಯೋಗ್ಯರಾಗಿರಬೇಕು ದೀಕ್ಷಾಪೇಕ್ಷೆ ವಟುಗಳು ೫ ರೂಪಾಯಿ ಕಾಣಿಕಾಸಮರ್ಪಣವಾಡಬೇಕು ವಿಶೇಷ ಜಿಜ್ಞಾಸುಗಳು ಶ್ರೀ ಜಗದ್ಗುರು ಸದ್ಧರ್ಮಪೀಠಾಧಿಪತಿಗಳ ಸಿದ್ಧೇಶ್ವರ ಮಹಾಸ್ವಾಮಿಗಳವರೆ ಸಪ್ತಧಿಯಲ್ಲಿ ಸಂದರ್ಶನ ಮಾಡಿಕೊಂಡು ಪ್ರಯೋಜನ ಪಡೆಯಬೇಕು

ಶ್ರೀ ಜ್ಞಾನಗುರುವಿದ್ಯಾಪೀಠದ ಸೆಕ್ರೆಟರಿ
ಎಂ ಎಂ. ಚನ್ನಬಸಯ್ಯನವರು
ಶ್ರೀ ಉಜ್ಜಯಿನೀ ಸದ್ಧರ್ಮಸಿಂಹಾಸನಮಠ

ಪೋ—ಉಜ್ಜಯಿನಿ, ತಾ—ಕೂಡ್ಲಿಗಿ, ಜೆ—ಬಳ್ಳಾರಿ

ಪುರಾಣ ಸಮಾಪ್ತಿ ಮಹೋತ್ಸವ ಗದಗ

ಶ್ರೀ ಜಗದ್ಗುರು ರೇಣುಕಾಚಾರ್ಯ ಭಗವತ್ಪಾದರ ಪುರಾಣ ಪ್ರವಚನವು ಸಡಕ ಒಂದು ತಿಂಗಳ ಪರಿಯಂತರ ವೇ॥ ರುದ್ರಯ್ಯಸ್ವಾಮಿ ಮಾಳೇಕೊಪ್ಪ ಮಠ ಗದಗ ಇವರ ಡೈಮಂ ಬಿಲ್ಲಿಂಗಿಪ್ಪಲ್ಲಿ ಶ್ರೀ ವೇ॥ ಶಿವಪ್ಪಯ್ಯಶಾಸ್ತ್ರಿಗಳು ಹಿರೇಮಠ ಇವರಿಂದ ಬೋಧಿಸಲ್ಪಟ್ಟು ನಂತರ ಕೊನೆಯ (ತಾ॥ ೧೪-೪ ೫೭ ನೇ) ದಿನ ಪುರಾಣ ಸಮಾಪ್ತ ಮಹೋತ್ಸ ಶ್ರೀ॥ ಷ॥ ಬ್ರ॥ ಉಪ್ಪಿನ ಮದ್ದಾನೆ ಮಠದ ಪಟ್ಟದ ಮಹಾಸ್ವಾಮಿಗಳವರ ನೇತೃತ್ವದಲ್ಲಿ ಮಹಾಗಣಾರಾಧನೆಯು ಒಳ್ಳೇ ತೃಪ್ತಿಕರವಾಗಿ ನಡೆಯಿತು ಮತ್ತು ಶ್ರೀ ಜ॥ ॥ ರೇಣುಕಭಗವತ್ಪಾದರ ವಿಷಯಕ್ಕೆ ಅನೇಕ ಪಂಡಿತರ ಭಾಷಣಗಳಾದವು. ಗದಗ-ಬೆಟಗೇರಿ ಶ್ರೀ ಜ॥ ಪಂಚಾಚಾರ್ಯ ಸೇವಾಸಂಘದ ಪರವಿಯಿಂದಾ ವೇ॥ ಶಿವಪ್ಪಯ್ಯಶಾಸ್ತ್ರಿಗಳಿಗೂ ವೇ॥ ರುದ್ರಯ್ಯಸ್ವಾಮಿ ಮಾಳೇಕೊಪ್ಪಮಠ ಇವರಿಗೂ ಫಲವಾ ಲಾರ್ಪಣ ಮಾಡಿ ಗೌರವಿಸಿ ಇನ್ನೂ ಹೆಚ್ಚು ಹೆಚ್ಚಾಗಿ ಶ್ರೀ ಜ॥ ಪಂಚಾಚಾರ್ಯರ ಕೃಪೆಗೆ ಪಾತ್ರರಾಗಲೆಂದು ಹಾರೈಸಲಾಯಿತು. ಕಡುಬಾಯ ವೇ॥ ಮಾಳೇಕೊಪ್ಪ ಮಠದ ರುದ್ರಯ್ಯಶಾಸ್ತ್ರಿಗಳಿಗೂ ವೇ॥ ಶಾಸ್ತ್ರಿಗಳವರಿಗೂ ಆಗಮಿಸಿದ ಯಾವತ್ತು ಅತಿಥಿಗಳಿಗೂ ಆಭಾರ ಮಪ್ಪಿಸಿದ ನಂತರ ಶ್ರೀ ಜ॥ ॥ ಗಳವರ ಪುರಾಣದ ಪೂಜೆಯು ನಡೆದು ಕಾಯ ಕರ್ಪೂರ ಮಹಾಮಂಗಳಾರತಿ ಮೊದಲಾದ ಮಂಗಲ ಕಾರ್ಯಗಳು ಸಾಂಗ ಗೊಂಡವು ನಂತರ ಶ್ರೀಜಗದ್ಗುರು ಪಂಚಾಚಾರ್ಯರ ಜಯಘೋಷದೊಡನೆ ಸಭೆ ವಿಸರ್ಜನೆಯಾಯಿತು ಈ ಶುಭ ಪ್ರಸಂಗದಲ್ಲಿ ಶ್ರೀ ಪಂಚಾಚಾರ್ಯಪ್ರಭಾ ಪತ್ರಿಕೆ ಪೋಷಣಕ್ಕಾಗಿ ಎರಡು ರೂಪಾಯಿ ಗದಗ ನಾಗರಿಕ ಪತ್ರಿಕೆಗೆ ಒಂದು ರೂಪಾಯಿ ಗದಗ-ಬೆಟಗೇರಿ ಶ್ರೀ ಜ॥ ಪಂ॥ ಸೇ॥ ಸಂಘಕ್ಕೆ ಎರಡು ರೂಪಾಯಿಗಳು ಹೀಗೆ ಐದು ರೂಪಾಯಿ ದೇಣಿಗೆಯಾಗಿ ಕೊಟ್ಟ ಬಗ್ಗೆ ಶ್ರೀ॥ ಜ॥ ಪಂಚಾಚಾರ್ಯರು ಸಕಲ ವಿಶ್ವರ್ಯವನ್ನೆತ್ತು ಕಾಪಾಡಲೆಂದು ನಮ್ಮ ಹಾರೈಕೆ

ಬಿ ಡಿ ರಾಮ-ನಗೌಡ್ರ, ಸೆಕ್ರೆಟರಿ
ಶ್ರೀ॥ ಜ॥ ಪಂ॥ ಸೇವಾಸಂಘ, ಗದಗ-ಬೆಟಗೇರಿ

ಭಕ್ತಾವರ್ತಿ ವೀರಭದ್ರಯ್ಯನ ಶ್ರಮೋಪಹಾರಚಿತೆ

ಈ ಸಾರಿ ಶ್ರೀಶೈಲದಲ್ಲಿ ಯುಗಾದಿ ಜಾತ್ರೆಯ ಕಾಲಕ್ಕೆ ಭಕ್ತಾವರ್ತಿ ವೀರಭದ್ರಯ್ಯ ಎಂಬವನು ಕಪಟವೇಷವನ್ನು ಧರಿಸಿಕೊಂಡು ಶ್ರೀಶೈಲಜಗದ್ಗುರುಗಳ ಹೆಸರಿನಲ್ಲಿ ಭಕ್ತಾದಿಗಳನ್ನು ಮೋಸಗೊಳಿಸಿದ್ದಲ್ಲದೆ ಶ್ರೀಶೈಲವೀರಾರಾಧ್ಯಕ್ಷರಾದ ಶ್ರೀಜಗದ್ಗುರು ಶ್ರೀವಾಗೀಶ ಪಂಡಿತಾರಾಧ್ಯ ಶಿವಾಚಾರ್ಯಮಹಾಸ್ವಾಮಿಗಳ ವಿರುದ್ಧ ಸುಳ್ಳು ಹೆಸರಿನಿಂದ ಆಕ್ಷೇಪವೂ ಅಸತ್ಯವೂ ಆದ ಒಂದು ಜಾಹೀರಾತನ್ನು ಹಂಚಿದನು ಸದರೀ ವೀರ ಬದ್ರಯ್ಯನ ಅನುಚಿತ ಮತ್ತು ಅನಧಿಕಾರಚೇಷ್ಟೆಯಿಂದ ಭಕ್ತಾದಿಗಳು ಅಸಂತುಷ್ಟರಾಗಿ ಅವನು ಇಳಿದುಕೊಂಡಿದ್ದ ಬಾಡಿಗೆ ರೂಮಿನಲ್ಲಿ ತಾ॥ ೩೧-೩-೫೭ ನೇ ದಿವಸ ಸಾಯಂಕಾಲ ಸೇರಿ ಚೆನ್ನಿ ಪೆಟಿಮಕೊಳ್ಳಲಾಗಿ ಸದರೀ ವೀರಭದ್ರಯ್ಯನು ತಾನು ಮಾಡಿದ ಅಧಿಕ ಪ್ರಸಂಗತನ ಮತ್ತು ಅಪರಾಧಕ್ಕಾಗಿ ಕ್ಷಮೆ ಕೇಳಿದ್ದಲ್ಲದೆ " ತಾನು ಜಗದ್ಗುರುವಲ್ಲವೆಂತಲೂ ಇಲ್ಲಿಯವರೆಗೆ ಸುಳ್ಳು ಹೇಳಿ ಭಕ್ತಾದಿಗಳನ್ನು ಮೋಸಗೊಳಿಸಿದ್ದು ಅಪರಾಧವೆಂತಲೂ, ಇನ್ನುಮುಂದೆ ಈ ತರಹದ ಮೋಸಕೃತ್ಯವನ್ನು ಮಾಡುವುದಿಲ್ಲವೆಂತಲೂ ಪತ್ರಾ ತ್ಮಾಪವನ್ನು ವ್ಯಕ್ತಮಾಡಿದನು ತಾನು ಹಂಚಿದ ಜಾಹೀರಾತು ಅಸತ್ಯವಾಗಿದ್ದು ಇನ್ನುಮುಂದೆ ಈ ಜಾಹೀರಾತನ್ನು ಹಂಚುವುದಿಲ್ಲವೆಂದು ಹೇಳಿ ಇದ್ದ ಒಂದೆರಡು ಜಾಹೀರಾತುಗಳನ್ನು ಭಕ್ತರ ಸಮ್ಮುಖದಲ್ಲಿ ಸ್ವಹಸ್ತದಿಂದ ತರಿದುಹಾಕಿದನು ರೂಮಿನಮುಂದೆ ಅಟ್ಟದ ಮೋಡುಗಳನ್ನು ತಕ್ಷಣ ತೆಗೆದುಹಾಕಿದನು. ಸದರೀ ವೀರಭದ್ರಯ್ಯನ ಬಗ್ಗೆ ಭಕ್ತಾದಿಗಳು ಕ್ಷಮ ಪಡೆಯಿಸಿದಾಗ ಶ್ರೀಶೈಲ ದೇವಸ್ಥಾನ ಮಾತ್ರವೇಯ ಎಕ್ಸಿಕ್ಯೂಟಿವ್ ಆಫೀಸರರು ತಾಖಲಿಸ್ದ್ದರು.

ಭಕ್ತಾವರ್ತಿ ಮಹಿಮೆಕ್ಕಥಾಶ್ರೀ,
ಸೊಲ್ಲಾಪುರ.

ಶ್ರೀಮಜ್ಜಗದ್ಗುರು ಏಕೋರಾಮಾರಾಧ್ಯರ
ಹಾಗೂ
ಶ್ರೀಜಗದ್ಗುರು ದಾರುಕಾಚಾರ್ಯರ
ಜಯಂತೀಮಹೋತ್ಸವಗಳು

ವೈಶಾಖ ಶು|| ೩ ಗುರುವಾರ ವೈಶಾಖ ಶು|| ೫ ಶನಿವಾರ

ಯಾವ ಮಹಾತ್ಮರು ಭರತಖಂಡದಲ್ಲಿರತಕ್ಕ ಸಮಸ್ತ ಪವಿತ್ರಕ್ಷೇತ್ರ ಮಸ್ತಕಮಣೀ ಭೂತ ಗಳಾದ ಶ್ರೀ ದ್ರಾಕ್ಷಾರಾವ, ಉಜ್ಜಯನೀಕ್ಷೇತ್ರಗಳಲ್ಲಿ ವಿರಾಜಿಸುತ್ತಿರುವ ಶ್ರೀ ಭೀಮನಾದ ಶ್ರೀಸಿದ್ಧೇಶ್ವರ ಮಹಾಲಿಂಗಗಳಿಂದವತರಿಸಿ, ಪರಮಪವಿತ್ರವಾದ ವೀರಶೈವಸಿದ್ಧಾಂತವನ್ನು ಭೂಮಂಡಲ ದಲ್ಲಿ ನೆಲೆಗೊಳಿಸಿ, ವ್ಯಾಸ, ದಧೀಚಿ ಮೊದಲಾದ ಅನಂತಜನ ಮಹರ್ಷಿಗಳನ್ನೂ, ಗೌತಮೇಂದ್ರ, ದೇನೆನಂದನ ಮೊದಲಾದ ಚಕ್ರವರ್ತಿಗಳನ್ನೂ ಶಿವಸಿದ್ಧಾಂತೋಪದೇಶವ್ವಾರಾ ಉದ್ಧರಿಸಿ ಲೋಕೈಕ ಪೂಜ್ಯರಾಗಿರುವರೋ, ಅಂತಹ ಶ್ರೀ ಜಗದ್ಗುರು ಏಕೋರಾಮಾರಾಧ್ಯರ ಹಾಗೂ ಶ್ರೀ ಜಗದ್ಗುರು ದಾರುಕಾಚಾರ್ಯರ ಜಯಂತೀ ಮಹೋತ್ಸವಗಳು ಇದೇ ವೈಶಾಖ ಶುದ್ಧ ಪಕ್ಷದಲ್ಲಿ ಪ್ರಾಪ್ತವಾಗುವುದರಿಂದ ಸರ್ವ ಗುರುಭಕ್ತರೂ ಈ ಜಯಂತೀಮಹೋತ್ಸವಗಳನ್ನು ಅತ್ಯಂತವೈಭವಯುತವಾಗಿ ನೆರವೇರಿಸ ಬೇಕು **ವೈಶಾಖ ಶು|| ೩ ಗುರುವಾರ ತಾ|| ೨—೫—೧೯೫೬** ನೆಯ ದಿನದ ಶ್ರೀ ಜಗದ್ಗುರು ಏಕೋರಾಮಾರಾಧ್ಯರ ಜಯಂತೀಮಹೋತ್ಸವನವನ್ನೂ, **ವೈಶಾಖ ಶು|| ೫ ಶನಿವಾರ ತಾ|| ೪—೫—೫೬** ನೆಯ ದಿನದ ಶ್ರೀ ಜಗದ್ಗುರು ದಾರು-ಕಾಚಾರ್ಯರ ಜಯಂತೀಮಹೋತ್ಸವವನ್ನೂ ನೆರವೇರಿಸಬೇಕು ಈ ಮೊದಲು ಈ ಪತ್ರಿಕೆಯಲ್ಲಿ ಸ್ವಸಿದ್ಧಪಡಿಸಿದಂತೆ ಭರತಖಂಡದಲ್ಲಿರುವ ಲಕ್ಷೋಪಲಕ್ಷ ಜನ ಶುದ್ಧ ಸಂಪ್ರದಾಯದ ವೀರಶೈವರು ಶ್ರೀ ಜಗದ್ಗುರು ರೇಣುಕಾಚಾರ್ಯರ ಹಾಗೂ ಪಂಡಿತಾರಾಧ್ಯ, ವಿಶ್ವಾ ರಾಧ್ಯರ ಜಯಂತೀಮಹೋತ್ಸವಗಳನ್ನು ಅಯಾಯ ಪವಿತ್ರ ದಿನಗಳಲ್ಲಿ ಅತ್ಯಂತ ಭಕ್ತಿಯಿಂದಲೂ, ವೈಭವದಿಂದಲೂ ನೆರವೇರಿಸಿದ ವಿಷಯವು ಸರ್ವರಿಗೂ ವೇದ್ಯವೇ ಆಗಿದೆ. ಆದುದರಿಂದ ಶುದ್ಧ ಸಂಪ್ರದಾಯದ ವೀರಶೈವರು ಸದ್ಯಃ ಪ್ರಾಪ್ತವಾಗಿರುವ ಆಚಾರ್ಯರ ಜಯಂತೀಮಹೋತ್ಸವಗಳನ್ನು ಅತ್ಯಂತ ಭಕ್ತಿಯಿಂದಲೂ, ಉತ್ಸಾಹದಿಂದಲೂ, ವೈಭವದಿಂದಲೂ ನೆರವೇರಿಸಿ, ಜಗದಾಚಾರ್ಯರ ಕೃಪೆಗೆ ಪಾತ್ರರಾಗಬೇಕೆಂದು ಹಾರೈಸುತ್ತೇನೆ.

ಇಷ್ಟಲಿಂಗಪೂಜಾವಿವರಣೆ

ಶ್ರೀ ಜಗದ್ಗುರು ಶಿವಾನಂದರಾಜೇಂದ್ರಶಿವಾಚಾರ್ಯ ವಿರಚಿತ 'ವೀರಶೈವಲಿಂದುಶೇಖರ' ಗ್ರಂಥದಿಂದ ಸಂಗ್ರಹಿಸಿದ್ದು.

ಲೇ—ಎಂ ರುದ್ರಯ್ಯಶಾಸ್ತ್ರೀ, ಬಿ.ಎ.ಎಲ್.ಬಿ. ಪಂಡಿತ, ಮೈಸೂರು

ಲಿಂಗಪೂಜೆಗೆ ಅರ್ಹರಾರು

ವಿಶಜ್ಞೇ ನೋಜ್ಞಶೇ ವಿದ್ಯಾಶಿವಜೀವೈಕ್ಯಭೋಧಿನಾ।
ತಸ್ಯಾಂ ರಮಂತೇ ಯೇವೈವಾ ವೀರಶೈವಾಸ್ತುತೇ ಮತಾಃ॥

'ವಿ' ಎಂಬ ಶಬ್ದವು ಲಿಂಗಾಂಗಸಾಮರಸ್ಯ ರೂಪವಾದ ಶಿವಜೀವೈಕ್ಯ ವಿದ್ಯೆಯನ್ನು ಬೋಧಿಸುತ್ತದೆ. 'ರ' ಎಂಬ ಶಬ್ದವು ಅಂಥಾ ವಿದ್ಯೆಯಲ್ಲಿ ಪ್ರೇಮ ದಿಂದ ರಮಿಸಬೇಕೆಂಬುದನ್ನು ಬೋಧಿಸುತ್ತದೆ. 'ಏ' ಶಬ್ದಕ್ಕೆ ದೀರ್ಘವು ಪ್ರಾಪ್ತವಾಗುವುದರಿಂದ ವೀರ ಎಂಬ ಶಬ್ದವು ಸಿದ್ಧವಾಗುತ್ತದೆ. ಆ ಪ್ರಕಾರ ಶಿವಜೀವೈಕ್ಯ ಬೋಧಕ ಲಿಂಗಾಗ ಸಾಮರಸ್ಯರೂಪವಾದ ಲಿಂಗಧಾರಣೆಯುಳ್ಳವರೇ ವೀರಶೈವರು

ದೀಯತೇಚ ಶಿವಜ್ಞಾನಂ ಕ್ಷೀಯತೇ ಪಾಶಬಂಧನಂ।
ಯಸ್ಮಾದತಃ ಸಮಾಖ್ಯಾತಾ ದೀಕ್ಷೇತೀಯಂ ವಿಚಕ್ಷಣೈಃ॥

ಯಾವುದು ಶಿವಜ್ಞಾನವನ್ನುಂಟುಮಾಡುವುದೋ ಮತ್ತು ಮಲಮಾಯಾ ಕರ್ಮಬಂಧನವನ್ನು ನಾಶ ಮಾಡುವುದೋ ಅದಕ್ಕೆ ದೀಕ್ಷೆಯೆಂದು ಹೇಳುತ್ತಾರೆ

ಸಾದೀಕ್ಷಾ ತ್ರಿವಿಧಾಪ್ರೋಕ್ತಾ ಶಿವಾಗಮ ವಿಶಾರದೈಃ।
ವೇದಾರೂಪಾ ತ್ರಯೀರೂಪಾ ಮಂತ್ರರೂಪಾ ಚ ತಾವಸಾ॥

ದೀಕ್ಷೆ ಎಂಬುದು ವೇಧಾದೀಕ್ಷೆ, ಮಂತ್ರದೀಕ್ಷೆ, ಕ್ರಿಯಾದೀಕ್ಷೆಯೆಂದು ಮೂರುತೆರನಾಗಿರುತ್ತದೆ ಶ್ರೀ ಗುರುವು ಶಿಷ್ಯನನ್ನು ಕೃಪಾಕಟಾಕ್ಷದಿಂದ ಈಕ್ಷಿಸಿ ತನ್ನ ಹಸ್ತವನ್ನು ಶಿಷ್ಯನ ಮಸ್ತಕದ ಮೇಲಿರಿಸಿ ತನ್ನ ಶಕ್ತಿಯನ್ನು ಬೀರುವುದೇ ವೇಧಾದೀಕ್ಷೆಯೆಂದೂ, ಶಿವ ಪಂಚಾಕ್ಷರೀ ಮಂತ್ರೋಪದೇಶವನ್ನು ಮಾಡುವುದೇ ಮಂತ್ರದೀಕ್ಷೆಯೆಂದೂ, ತನಿಚಿತ್ಕಲಾತ್ಮಕವಾದ ಶಿವ ಲಿಂಗವನ್ನು ಶಿಷ್ಯನ ನಾಮಕರಣದಲ್ಲಿರಿಸಿ ಅಭಿಷೇಕಾದಿ ಷೋಡಶೋಪಚಾರ ಪೂಜಾವಿಧಾನವನ್ನು ಕ್ರಮವಾಗಿ ತಿಳಿಸುವುದೇ ಕ್ರಿಯಾದೀಕ್ಷೆ ಎನಿಸುತ್ತದೆ ಈ ರೀತಿ ಯಾಗಿ ಷಡಧ್ವಶೋಧನೆಯಿಂದ ಶಿಷ್ಯನ ಹಸ್ತಕ್ಕೆ ಲಿಂಗವನ್ನು ಕೊಟ್ಟು ಯಾವಜ್ಜೀವ ಲಿಂಗವನ್ನಗಲದೆ ತ್ರಿಕಾಲಗಳಲ್ಲಿ ಸ್ನಾನಾಭಿಷಿಕ್ತನೂ ತ್ರಿಪುಂಡ್ರ ಭಸ್ಮ ರುದ್ರಾಕ್ಷಧಾರಕನೂ ಆಗಿ ಲಿಂಗವನ್ನು ಪೂಜಿಸುತ್ತಾ ಲಿಂಗಸ್ವರೂಪವನ್ನೇ ಸೇವಿಸುತ್ತಾ ಅಂಗಸತಿ, ಲಿಂಗ ಪತಿ ಎಂಬ ನ್ಯಾಯದಿಂದ ಲಿಂಗವನ್ನು ದೇಹದಲ್ಲಿ ಧರಿಸುವಾತನೇ ಲಿಂಗಪೂಜೆಗೆ ಅರ್ಹನಾಗಿರುತ್ತಾನೆ.

ಉಪದೇಶಂವಿನಾ ಲಿಂಗಂ ಪ್ರಪೂಜಯತಿ ಯೋನರಃ।
ನರಕೇ ಪಚ್ಯತೇ ದೇವಿ ಸೂಪದೇಹೀಯಶತ ಸ್ಮೃತಃ॥

ದೀಕ್ಷೆ ಇಲ್ಲದೆ ಯಾವನು ಲಿಂಗಪೂಜೆಯನ್ನು ಮಾಡುತ್ತಾನೋ ಅವನು ನರಕವನ್ನನುಭವಿಸುತ್ತಾನೆ.

ಅದೀಕ್ಷಿತಶ್ಯಯೋವಿಪ್ರಃ ಕುರ್ಯಾಲಿಂಗಸ್ಯ ಪೂಜನಂ।
ಅರಣ್ಯೇನಿರ್ಜನೇದೇವಿ ಭವತಿ ಬ್ರಹ್ಮರಾಕ್ಷಸಃ॥

ದೀಕ್ಷೆಯಿಲ್ಲದ ಮಾನವನು ಲಿಂಗಪೂಜೆಯನ್ನು ಮಾಡಿದ್ದಾದರೆ ಅವನು ನಿರ್ಜನ ಪ್ರದೇಶವಾದ ಅರಣ್ಯ ದಲ್ಲಿ ಬ್ರಹ್ಮರಾಕ್ಷಸನಾಗಿ ಜನ್ಮಿಸುತ್ತಾನೆ

ಅದೀಕ್ಷಿತಶ್ಚತುರ್ವೇದೀ ನ ವಿಶೇದ್ಧರ್ಭಗೇಹಕಮ್।
ಪ್ರಮಾದಾದ್ಧರ್ಭಗೇಹಂತು ಪ್ರಾಯಶ್ಚಿತ್ತಂತು ಕಾರಯೇತ್॥

ದೀಕ್ಷೆಯಿಲ್ಲದ ಮನುಷ್ಯನು ಚತುರ್ವೇದಿಯಾಗಿದ್ದರೂ ಅವನನ್ನು ಮನೆಗೆ ಸೇರಿಸಬಾರದು. ಪ್ರಮಾದ ವಶಾತ್ ಮನೆಗೆ ಬಂದುಬಿಡಾದರೆ ಪ್ರಾಯಶ್ಚಿತ್ತವನ್ನು ಮಾಡಿಕೊಳ್ಳಬೇಕೆಂದು ಪ್ರಮಾಣವಿರುತ್ತ ದಾದ್ದರಿಂದ ದೀಕ್ಷಾಬದ್ಧರಾದ ವೀರಶೈವರೇ ಲಿಂಗ

ಪೂಜೆಗೆ ಅರ್ಹನು ದೀಕ್ಷಾವಿಹೀನನು ಲಿಂಗಪೂಜೆಗೆ ಅರ್ಹನಲ್ಲ

ಭೀಕರ ತಪಸ್ಸು ಮಾಡಿ ಶಿವನಿಂದ ಪಡೆದ ಆತ್ಮ ಲಿಂಗವನ್ನು ರಾವಣನು ದೀಕ್ಷಾಪೂರ್ವಕ ಸ್ವೀಕರಿಸದಿದ್ದುದರಿಂದಲೇ ಅದು ಅವನಿಂದ ಪೂಜೆಗೊಳ್ಳದೆ ಅಗಲಿ ಹೋಯಿತಲ್ಲದೆ ಅವನ ಬಹುದಿನಗಳ ತಪಸ್ಸಿನ ಫಲವೂ ನಾಶವಾಯಿತು ಅದೇ ಲಿಂಗವನ್ನು ಅನಮ ಶ್ರದ್ಧಿವಿ ದೀಕ್ಷೆಯಿಂದ ಸ್ವೀಕರಿಸಿದ್ದರೆ ಮಾತ್ರ ಅದು ಅವನನ್ನು ಅಗಲಿಹೋಗುವ ಸಂಭವವೇ ಬರುತ್ತಿರಲಿಲ್ಲ ಅಂದರೆ ಶಿವದೀಕ್ಷಾ ಪೂರ್ವಕ ಧರಿಸಲ್ಪಟ್ಟ ಲಿಂಗವು ಅಂಗಕ್ಕೆ ಅಪ್ಪೊಂದು ಬಿಗಿಯಾಗಿ ಅಂಟಿಕೊಳ್ಳುತ್ತದೆ ಎಂದು ಅರ್ಥ. ಇದುವೇ ಅಂಗ-ಲಿಂಗ ಸಾಮರಸ್ಯವೆಂದು ತಿಳಿಯಲ್ಪಡುತ್ತದೆ

ತಸ್ಮಾತ್ಸರ್ವಪ್ರಯತ್ನೇನ ಗುರೂಣಾ ಶಾಸ್ತ್ರವೇದಿನಾ। ಅನುಗ್ರಹಾಯ ಯತ್ನಸ್ತಂ ಕಲ್ಪಲಿಂಗಪೂಜಯೇತ್ಸದಾ॥

ಭಕ್ತನಾದವನು ಸರ್ವ ಪ್ರಯತ್ನದಿಂದಲಾದರೂ ಶಿವಲಿಂಗ ದೀಕ್ಷೆಯನ್ನು ಹೊಂದಿ ಗುರುವಿಂದಲಾನುಗ್ರಹ ವಾದ ಲಿಂಗವನ್ನು ಸದಾ ದೇಹದಲ್ಲಿ ಧರಿಸಿರುತ್ತಾ ತನ್ನ ಧಾಮಕರ ಪೀಠದಲ್ಲಿರಿಸಿ ಪೂಜಿಸುತ್ತಿರಬೇಕು.

ವಿತತ್ಕೋಮಸ್ಯ ಸೂರ್ಯಸ್ಯ ಸರ್ವಲಿಂಗಂ। ಸ್ಥಾಪಯತಿ ಪಾಣಿಮಂತ್ರಂ ಪವಿತ್ರಂ॥

ಈ ಮಂತ್ರಕ್ಕೆ ಶಿವಾಚಾರಭಾಷ್ಯದಲ್ಲಿ : ಸೋಮಸ್ಯ ಲೀಲಾಮೂರ್ತೇಃ ಸೂರ್ಯಸ್ಯ-ಲೀಲಾರೂಪತಿರಿಕ್ತಸ್ಯ, ಶಿವಸ್ಯ, ಸರ್ವಲಿಂಗ-ವಿಕ್ತಿಕ್ತಕಂ, ಪಾಣಿನ್ಯಸ್ತ-ಕರಕಮಲಸ್ಯ ಪಾವನಕಾರಕಂ, ತಥಾ ಚೋಕ್ತಂ-ಪಾಣೌ ಚ ಮನನಾತ್ಪುತಂ ಲಿಂಗಂ ಸರ್ವಶಿವಾ ಮಯಂ : ಸಂಸ್ಥಾಪಯೇತ್ ಸದಾ ದೇಹೇ ಸವಿತ್ರ ಮಿಪವಿತ್ರತಾ ! ಪವಿತ್ರಂ-ಪಾವನ ಸ್ಮರಣಸಲಿಂಗಂ, ಏತತ್-ಇದಂ ಜಗತ್ಪತೂಃ, ಸ್ಥಾಪಯತಿ-ಪ್ರತಿಷ್ಠಾಪ್ಯ ಪೂಜಯತಿ, ಎಂಬುದಾಗಿ ಅರ್ಥ ಮಾಡಿರುತ್ತಾರಾದ್ದರಿಂದ ವೀರಶೈವರು ತಮ್ಮ ಇಷ್ಟಲಿಂಗವನ್ನು ಕರಪೀಠ ದಲ್ಲಿಟ್ಟು ಪೂಜಿಸುತ್ತಾರೆ

ವಿನಿರ್ಭಿದ್ಯ ತಥಾಗಾತ್ರಂ ವಿವರೇ ಲೋಹಕ ಶಾತ್ಕರ್ ! ಶಿವಲಿಂಗಂ ವಿನಿಸ್ಸೃಷ್ಯ ಪೂಜಯಂತಿ ಚ ರಾಕ್ಷಸಾಃ ॥

ಎಂಬಂತೆ ವೀರಶೈವರು ತಮ್ಮ ಇಷ್ಟಲಿಂಗವನ್ನು ಬೆಳ್ಳಿಯೋ ಭಂಗಾರವೋ ಯಾವುದಾದರೊಂದು ಲೋಹ ಪಾತ್ರೆಯಲ್ಲಿಟ್ಟು ಪೂಜಿಸುವುದರಿಂದ ಆ ಪೂಜೆಯು ರಾಕ್ಷಸರು ಮಾಡುವ ಪೂಜೆಯಾಗುತ್ತದೆಂದು ಪರಮೇಶ್ವರನು ಪಾರ್ವತಿಗೆ ಹೇಳಿರುತ್ತಾನೆ, ಆದುದರಿಂದಲೇ ಶಿವಯೋಗಿಗಳಾದವರು ಎಷ್ಟೇ ಕಷ್ಟವಾದರೂ, ಇಷ್ಟ ಲಿಂಗವನ್ನು ಕರಪೀಠದಲ್ಲಿಟ್ಟು ಪೂಜಿಸುತ್ತಾರೆ

(ಸಶೇಷ)

ಸ್ವೀಕಾರ

ಬಂಕಾಪುರ ಆರಣ್ಯಕಮಠದ ಶ್ರೀ ಗುರುಪಾದಯ್ಯ ನವರ ವಾರ್ಷಿಕ ಪುಣ್ಯತಿಥಿಯನ್ನು ವೀರಶೈವಿಸಿದ ಸಮಯದಲ್ಲಿ ಅವರ ಪುತ್ರ ಶ್ರೀ ಸಿದ್ದಲಿಂಗಶಾಸ್ತ್ರಿ ಗಳವರು ಪ್ರಭಾಪೋಷಣೆಗಾಗಿ ಸಮರ್ಪಿಸಿದ 2 ರೂಗಳು ಎಡಗೋಡಿನ ಶ್ರೀ ರುದ್ರಾರಾಧ್ಯಶಾಸ್ತ್ರಿಗಳವರ ದ್ವಾರಾ ಕಲ್ಪಿಸುತ್ತವೆ

ಧಾರವಾಡ ಡಿ। ಗದಿಗಪ್ಪಲಿರುವ ಶ್ರೀ ವೇ॥ ಮಾಳಿ ಕೊಪ್ಪ ಮಠದ ಕ್ಷುದ್ರಯ್ಯನವರು ತಮ್ಮ ದೈರ್ಮ ಳ್ಳಿಪದಲ್ಲಿ ಒಂದು ತಿಂಗಳ ಕಾಲ ಶ್ರೀ ಜ। ರೇಣುಕ ಪುರಾಣ ಪ್ರವಚನವನ್ನು ಅದ್ಭುತವಾಗಿ. ನೆಡೆಸಿ ತಾ। ೧೫-೪-೩೬ ಬಿನೆ ಸಮಾಪ್ತಿಗೊಳಿಸಿದ ಶುಭ ಸಮಯ ದಲ್ಲಿ ಪ್ರಭಾ ಪೋಷಣಾರ್ಥಾಗಿ ಸಮರ್ಪಿಸಿದ 2 ರೂಗಳು ಶ್ರೀಮಾ ಬಸವನೌಡ ದೊಡ್ಡನಗೌಡ ರಾಮನಗೌಡ್ರ (ತೊಂಡಿಹಾಳ) ಇವರ ದ್ವಾರಾ ಕಲ್ಪಿರುತ್ತವೆ.

ಈ ಮೇಲ್ಕಂಡ ಮಹಾಶಯರಿಗೆಲ್ಲರಿಗೂ ಶ್ರೀಜಗ ದ್ಗುರು ಪಂಜಾಚಾರ್ಯರು ನಿತ್ಯಮಂಗಲವನ್ನೀಯ ಲೆಂದು ಹಾರೈಸುತ್ತೇವೆ.

ಶ್ರೀ ಚಾಗಣ್ಣನವರ ಅಪಪ್ರಲಾಪ

ಶ್ರೀಮಾನ್ ಚಾಗಣ್ಣನವರೇ, ನಿಮ್ಮ ೧೬-೪-೩೬ ನೆಯ ಅತ್ಮವಿಚಾರ ಸಂಚಿಕೆಯಲ್ಲಿ ನೀವು ನಿಜವಾದ ವೀರಶೈವರಿಗೆ ಮಾಡಿಕೊಂಡಿರುವ ಮನವಿ ಎಂಬ ಶಿರೋಲೇಖನದಲ್ಲಿ ವೀರಶೈವಮತದ ಎಲ್ಲೋ ಕೆಲವು ವೀರಶೈವ ಮಠಾಧಿಪತಿಗಳು ಬಿಟ್ಟು ಉಳಿದ ವೀರ ಶೈವಮಠಾಧಿಪತಿಗಳು ಜ್ಞಾನಿಗಳಲ್ಲದೇ ಇರುವುದಲ್ಲದೆ ಸಾಧಾರಣವಾದ ವಿದ್ಯಾಭ್ಯಾಸವನ್ನೂ ಸಹ ಮಾಡಿರು ವುದಿಲ್ಲ. ವೀರಶೈವವೆಂದರೆ ದೇಹಸಂಬಂಧಕ್ಕೂ ಮತ್ತು ಸಹಭೋಜನಕ್ಕೂ ಏರ್ಪಾಡಾದ ಒಂದು ಸಂಗಡವೆಂ ತಲೂ ಇಷ್ಟಲಿಂಗ ಅಂದರೆ ಆ ಸಂಗಡಕ್ಕೆ ಸೇರಿದ್ದಕ್ಕೆ ಗುರುತೆಂತಲೂ ಗುರುವೆಂದರೆ ಪರ್ಮಿಟ್ಟು ಕೊಡುವ ಅಧಿಕಾರಿಯಂತೆ ಲಿಂಗವನ್ನು ಕಟ್ಟುವ ಒಬ್ಬ ಅಧಿಕಾ ರಿಯಂತಲೂ ತಿಳಿದಿರುತ್ತಾರೆ ಎಂದು ಬರೆದಿರುತ್ತೀರಿ ಕುಲವನ್ನು ಪಾಲಿಗೆ ಹೇಳಿತು ಎಂಬ ಗಾದೆಯಂತೆ ನಿಮ್ಮ ಬರವಣಿಗೆ ಆಗಿರುತ್ತದೆ ಇದು ನಿಮ್ಮ ಆಪ ಪ್ರಲಾಪವೇ ಹೊರತು ವೀರಶೈವ ಸಿದ್ಧಾಂತವಲ್ಲ ನಿಜವಾದ ವೀರಶೈವತ್ವವು ನಿಮ್ಮಲ್ಲಿದ್ದರೆ ನೀವು ಹೀಗೆ ಎಂದೂ ಬರೆಯುತ್ತಿರಲಿಲ್ಲ ಅಸ್ತು !

ಶ್ರೀಮಾನ್ ಚಾಗಣ್ಣನವರೇ, ನೀವು ನಿಜವಾದ ವೀರ ಶೈವರೋ, ನಾಮಮಾತ್ರ ವೀರಶೈವರೋ ! ನೀವೂ ನಿಮ್ಮ ಪೂರ್ವಜರೂ ದಾಸರಪ್ಪಾ, ತಿರುಪತಿಯಾತ್ರೆ ಗಳನ್ನು ಮಾಡುತ್ತಿರುವಂತೆ ಪ್ರತೀತಿಯುಂಟು ಇದು ಯಾವ ವೀರಶೈವ ಸಿದ್ಧಾಂತದಲ್ಲಿ ನಿರೂಪಿಸಲ್ಪಟ್ಟಿರು ವುದೆಂಬುದನ್ನು ನಿನ್ನು ಸತ್ಕೃತಿಯಲ್ಲಿ ಸ್ಪಷ್ಟಪಡಿಸಿರಿ

ಎಲ್ಲೋ ಕೆಲವು ಮಠಾಧಿಪತಿಗಳು ಜ್ಞಾನಿಗಳು ಎಂದು ಬರೆದಿರುತ್ತೀರಿ ನಿನ್ನು ಪತ್ರಿಕೆಯ ಚಂದಾ ದಾರರಾಗಿರುವ ಮಠಾಧಿಪತಿಗಳು ಮಾತ್ರ ಜ್ಞಾನಿಗಳು ಉಳಿದವರೆಲ್ಲಾ ಅಜ್ಞಾನಿಗಳೆಂದು ನಿಮ್ಮ ಅಭಿಪ್ರಾ ಯವೇ ? ಅಸ್ತಿಕಾರ ಜ್ಞಾನಿಗಳಿಂದ ಕೂಡಿರುವ ಮಠ ಗಳು ಎಷ್ಟು ? ಎಷ್ಟಿವೆ ಎಂಬುದನ್ನು ಸರಿಯಾಗಿ ತಿಳಿಸಿರಿ

ಗಂಡೆ ಶಿವಲಿಂಗದೇವರ ಭಕ್ತ, ಹೆಂಡತಿ ನೂರಿ ಮನೆಯ ಭಕ್ತೆ, ಗಂಡಕೆಕೊಂಬುದು ಪಾದೋದಕ ಪ್ರಸಾದ ಹೆಂಡತಿ ಕೊಂಬುದು ಸುರೆನುಂಸ ಬಾಂಡ ॥

ಎಂಬ ಪಟ್ಟಿನ ಪ್ರಕಾರ ಎರಡೂ ಆಚಾರಗಳನ್ನೂ ಹೊಂದಿರುವ ನೀವು ವೀರಶೈವ ಮಹಾಸಮಾಜವನ್ನೂ ಮುರಾಢೀಶರನ್ನೂ ಪಂಡಿತರನ್ನೂ ಬಹಳ ಕೀಳು ಭಾವ ನೆಯಿಂದ ಸಂಬೋಧಿಸುತ್ತಿದ್ದೀರಿ ಇರತ್ಕಾಗಿ ನಿನ್ನು ಮೇಲೆ ಸಿಸ್ಸಿನ ಕ್ರಮವನ್ನು ತಕ್ಕ ಕೋರ್ಟು ಮೂಲ ತೆಗೆದುಕೊಳ್ಳಬೇಕಾತ್ತದೆ. ಆದ್ದರಿಂದ ನಿಮಗೆ ಇದು ಎರಡನೆ ಎಚ್ಚರಿಕೆ

ನಿಮಗೆ ಕಾಸ್ರಾರ್ಥ ಮಾಡುವ ಯೋಗ್ಯತೆ ಇದ್ದರೆ ಪಂಡಿತರ ಸಭೆ ಕರೆದು ಆ ಸಭೆಯಲ್ಲಿ ನೀವು ನಿಮ್ಮ ಪಾಂಡಿತ್ಯವನ್ನು ತೋರಿ ನಿಮ್ಮ ಅಭಿಪ್ರಾಯ ಸಮರ್ಥಿಸಿ ಪುಸ್ತಕಗಳನ್ನು ಬದಲಾಯಿಸಬಹುದಲ್ಲವೇ ? ಇದನ್ನು ಬಿಟ್ಟು ರಂಡಿಮುಂಡಿಗೆ ಕಾಮಭೋಗ ಏನೋ ಬೆದ ರಿಕೆ ತೋರಿಸಿದಂತೆ ಹೈಕೋರ್ಟಿಗೆ ರಿಟ್ ಅರ್ಜಿ ಹಾಕಿದರೆ ನಿಮ್ಮ ವಾದ ಗೆಲ್ಲುತ್ತದೆಂದು ತಿಳಿದಿರುವಿರಾ! ಹಾಗೇನಾದರೂ ನೀವು ಭಾವಿಸುವಿದಾದರೆ ಅದು ತಿರು ಕನ ಕನಸಾಗಿಯು ಎಚ್ಚರಿಕೆ

ಬಸವಜ್ಞೆಪ್ಪ ಅಂಗಡಿ ಸರೀಗ್ಲು

ಅಕ್ಕಮಹಾದೇವಿ ಸಮಾಜ ಪ್ರಾರಂಭಗೆರೆ

ದಿನಾಂಕ ೧೫-೪-೩೬ ರಿಂದ ಮೂರು ದಿನಸಗಳ ವರೆಗೆ ಅಕ್ಕಮಹಾದೇವಿಯ ಹುಣ್ಣಿಮೆಯ ನಿಮಿತ್ತ ಅನೇಕ ವಿಧ ಕಾರ್ಯಗಳು ಜರುಗಿದವು

ಮೊದಲನೆ ದಿವಸ ಶ್ರೀಮಾ ೯ ವೀರಭದ್ರಪ್ಪ ನವರಿಂದ ಶಿವಕರಣರ ಉದಾತ್ತ ತತ್ವಗಳ ಬಗ್ಗೆ ಉಜ್ಜ್ವಲ ಭಾಷಣವಾಯ್ತು.

ಎರಡನೇ ದಿವಸ ಆತ್ಮದುರ್ಗದ ಉಜ್ಜಯನೀ ಮಹಾಧ್ಯಕ್ಷರಾದ ಶ್ರೀ ಶಿವಪ್ರಕಾಶ ಸ್ವಾಮಿಗಳವರ ಅಧ್ಯಕ್ಷತೆಯಲ್ಲಿ ಸಭೆ ಪ್ರಾರಂಭವಾಯ್ತು ಸಮಾಜದ ಅಧ್ಯಕ್ಷರಿಯವರಿಂದ ಸ್ವಾಗತವಾದನಂತರ ಇಲ್ಲಿನ ಸಾಹಿತಿಗಳೂ ವಕೀಲರೂ ಆದ ಶ್ರೀಮಾ ಗೌಡ್ರ ವಿಜಯಣ್ಣನವರಿಂದ ಅಕ್ಕಮಹಾದೇವಿಯ ಭಕ್ತಿ, ಜ್ಞಾನ, ವೈರಾಗ್ಯದ ವಿಚಾರವಾಗಿ ಭಾಷಣವಾದ ನಂತರ ಇಂದಿನ ಸ್ವಾತಂತ್ರ್ಯ ಯುಗದಲ್ಲಿ ಸ್ತ್ರೀಯರು ಧಾರ್ಮಿಕ ರಾಜಕೀಯ-ಸಮಾಜಕ ಸುಧಾರಣೆಯಲ್ಲಿ ಮಹತ್ವದ ಪಾತ್ರ ವಹಿಸಬೇಕಾದುದೆಂಬ ವಿಷ ಕರಣ ತತ್ವಗಳು ಕೇವಲ ವೀರಶೈವರಿಗೆ ಮಾತ್ರ ವಲ್ಲದೆ "ಮಾನವರಿಗೆಲ್ಲರಿಗೂ ನೈತಿಕ ಸಾಮಾಜಿಕ ಉನ್ನತಿ ತಳಪಡಿಯಾಗಿದೆ ಎಂದು ಹೇಳಿ ಅದು ಹೆಚ್ಚು ಪ್ರಚಾರವಾಗಬೇಕೆಂದು ತಿಳಿಸಿದರು ಸಮಾಜದ ಬಾಲಕೀಯರಿಂದ ಭಾವಗೀತೆಗಳನ್ನು ಹಾಡಿದನಂತರ ಅಧ್ಯಕ್ಷತೆ ವಹಿಸಿದ್ದ ಶ್ರೀ ಶಿವಪ್ರಕಾಶಸ್ವಾಮಿಗಳು ಶಿವಾನುಭವ ಮತ್ತು ಅಕ್ಕಮಹಾದೇವಿಯ ಅನೇಕ ಧಾರ್ಮಿಕ ಮಹಾಪುರುಷರು ಉದಯಿಸಿದ್ದಾರೆಂಬುದಕ್ಕೆ ಪೌರ್ಣಿ ಮೆಯ ಪುಣ್ಯಕ್ಷೇತ್ರಗಳೇ ಸಾಕ್ಷಿಗಳಾಗಿವೆ ಎಂದರು

ಅಗಡೋಪಪತ್ರಿಕೆಯಲ್ಲಿ ಉಕ್ತವಾದ-ಗಜನ ವಿಚಾರ ಗಳನ್ನು ಶಿವಕರಣರು ಮತಿಂದೆ ನಡೆದು ತಮ್ಮ ಅನುಭವವನ್ನು ವಚನಸಾಹಿತ್ಯದ ಮೂಲಕ ನಾಡಿನ ಜನತೆಗೆ ಸಂದೇಶ ಕೊಟ್ಟಿದ್ದಾರೆ ಇವರಲ್ಲಿ ಅಕ್ಕ ಮಹಾದೇವಿ ಅಗ್ರಗಣ್ಯಳಾಗಿದ್ದಾಳೆ ಇಂದಿನ ವೈಜ್ಞಾ ನಿಕ ಯಾಂತ್ರಿಕಯುಗವು ಪ್ರಗತಿಪಡೆದಂತೆ ಮಾನವನ ಆತ್ಮಶಾಂತಿಯ ಕೃಷ್ಣಜೀವನ ಮಾಯವಾಗುತ್ತಿದೆ. ವಿಜ್ಞಾನವು ನಿಜ್ಯುತ್ತು ಹೆಳ್ಳಕ್ಕಳಿಗೆ ಹಿಂದಿಂತೆ ನಮ್ಮ ದೇಶದ ಮುಖ್ಯ ಐಶ್ವರ್ಯವಾದ ವೇದಾಂತವ ಅತ್ಮ ಶಕ್ತಿಯ ಜ್ಯೋತಿ ಮಾನವರ ಹೃದಯಕ್ಕೆ ಹರಿಯ ಬೇಕಾಗಿದೆ ಎಂದು ಹೇಳಿದರು ಮತ್ತು ಅವರು ಮೊನ್ನೆ ಟೀಕೆಗಾ ಹೇಳಿಯೋದಲ್ಲಿ ಸಾಗದ ಮಾರ್ಕ್ಸ್ ವಾದವನ್ನು ಖಂಡಿಸುತ್ತಾ " ದೇವರು, ಸ್ವರ್ಗ, ನರಕ ಮಾನವನ ಹುಚ್ಚು ಕಲ್ಪನೆ ಎಂಬ ವಿಚಾರ ಮಾನವನ ಆಕಾಂಕ್ಷೆಯಾಕಲಾರದು. ಮಾನವನಲ್ಲಿ ದೈವಿಕಭಾವನೆ ಕಡಿಮೆಯಾದಂತೆ ಸುಖಮಯ ಗಳನ್ನು ತಡೆಯಲಾರದೆ ಮನೋರೋಗಕ್ಕೆ ತುತ್ತ ಗುತ್ತಾನೆ ಆಗ ಪಾಶ್ಚಿಮಾತ್ಯ ರಾಷ್ಟ್ರಗಳಂತೆ ಹುಚ್ಚರ ಆಸ್ಪತ್ರೆಗಳು ಹೆಚ್ಚಾಗಬೇಕಾಗುತ್ತದೆಂದು ತಿಳಿದರು

ಮರುದಿವಸ ಪಂಡಿತರಾದ ಶ್ರೀ ಚಂದ್ರಶೇಖರ ಶಮರಿಂದ ಭಾಷಣವಾದ ನಂತರ ಶಿವಕೀರ್ತನೆ ನಾಟ್ಯ ಸಂಗೀತದೊಡನೆ ಕಾರ್ಯಕ್ರಮಗಳು ಮುತ್ತಾ ಯವಾದವು ಸಂಘದ ಕಾರ್ಯದರ್ಶಿಯವರಿಂದ ವಂದನಾರ್ಪಣೆಯೊಡನೆ ಸಭೆ ಮುಕ್ತಾಯವಾಯಿತು.

ಪಿ ರಾಜಮ್ಮ

ಪುಣ್ಯತಿಥಿಮಹೋತ್ಸವ ನೀರಲಗಿ

ರಾಯಚೂರ ಜಿಲ್ಲಾ ಕೊಪ್ಪಳ ತಾಲೂಕ ನೀರ ಲಗಿ ಹಿರೇಮಠದ ಶ್ರೀಮನ್ಮಹಾಲಿಂಗಶಿವಾಚಾರ್ಯರಾದ ಶ್ರೀ ಅನ್ನದಾನಸ್ವಾಮಿಗಳವರು ಮತ್ತು ಪಂಚಾಕ್ಷರ ಸ್ವಾಮಿಗಳವರು ಕ್ರಿಯಾಸಿದ್ಧಿ ವಾಗ್ಸಿದ್ಧಿಯುಳ್ಳವ ರಾಗಿದ್ದು ಸತ್ಕರ್ತಾದಿಗಳಿಗೆ ಇಷ್ಟಾರ್ಥಪ್ರದಾನ ಮಾಡುತ್ತ ಪ್ರಸಿದ್ಧರಾಗಿ ಲಿಂಗೈಕ್ಯರಾದ ಮೂಲಕ ಶ್ರೀಗಳವರ ಪುಣ್ಯತಿಥಿ ನಿಮಿತ್ತವಾಗಿ ಇದೇ ೧೫ನೇ ಹೇವಿಳಂಬಿ ನಾಮ ಸಂ॥ ಶೈತ್ರ ಬ॥ ಪುಶ್ಯವಾರ (ತಾ॥ ೧೫-೪-೩೬) ಉದಯ ೬ ಘಂಟೆಯಿಂದ ೧೧ ಘಂಟೆಯ ವರೆಗೆ ಗದ್ದುಗೆಯ ಮಹಾರುದ್ರಾ ಭಿಷೇಕ ಸಹಸ್ರ ಬಿಲ್ವಾರ್ಚನೆಯು ವೈಭವದಿಂದ ನೆರವೇರಿದ್ದಲ್ಲದೆ ಭೂರಿಗಾತ್ರಾದಾನೆಯು ನಡೆಯಿತು ಈ ಸಮಾರಂಭವನ್ನು ಸದರೀ ಗ್ರಾಮದ ಸದ್ಭಕ್ತ ರೆಲ್ಲರೂ ಪ್ರೀತಿಯಿಂದ ನೆರವೇರಿಸಿದರು ತಾ। ೨೧-೪-೩೬ ಶನಿವಾರ ಸಾಯಂಕಾಲ ೬ ಘಂಟೆ ಯಿಂದ ೯ ಘಂಟೆಯ ವರೆಗೆ ಮೂರ್ತಿಮಂ ಮಂಗಳ ಮಹೋತ್ಸವ ಜರುಗಿ ವಂಕರ ವೆರೆದ ಸಭಿಕರು ಸದರೀ ಮತಾಧ್ಯಕ್ಷರಾದ ಶ್ರೀ ಬದಿವಯ್ಯಸ್ವಾಮಿ ಗಳವರಿಂದ ಗುರುಭಕ್ತಿ ಧರ್ಮನೀತಿ ಸಮ್ಮೇಳ ಮಾಡಲ್ಪಟ್ಟು ಶ್ರೀ ಜ॥ ಪಂಜಾಚಾರ್ಯರ ಜಯ ಘೋಷದೊಡನೆ ಸಭಾ ಮುಕ್ತಾಯವಾಯಿತು.

ಕಾರ್ಯಧಾ

ಶ್ರೀಜಗದ್ಗುರುಗಳ ಉಡ್ಡಪಲ್ಲಕ್ಕಿಮಹೋತ್ಸವಗಳು

ಬಸವಕಲ್ಯಾಣ

ಬೀದರು ಜಿಲ್ಲಾ ಬಸವಕಲ್ಯಾಣದ ಶ್ರೀ ಬಸವೇಶ್ವರ ಮಂದಿರದ ಪಂಚಳಮೀಟಿಯವರಿಂದ ಪ್ರತಿವರ್ಷ ನಡೆಯುತ್ತಿರುವ ಶ್ರೀ ಬಸವೇಶ್ವರ ಜಯಂತಿಮಹೋತ್ಸವವು ಇದೇ ವೈಶಾಖ ಶು॥ ೩ (ತಾ॥ ೨-೫-೫೭) ಗುರುವಾರ ದಿವಸ ವಿಶೇಷ ವೈಭವದಿಂದ ನಡೆಯುವಂತೆ ಏರ್ಪಡಿಸಿದ್ದಲ್ಲದೆ ಇದರ ಅಂಗವಾಗಿ ತಾ॥ ೧-೫-೫೭ ನೇ ದಿವಸ ಶ್ರೀಶೈಲ ಜಗದ್ಗುರು ಶ್ರೀ ವಾಗೀಶಪಂಡಿತಾರಾಧ್ಯ ಶಿವಾಚಾರ್ಯ ಮಹಾಸ್ವಾಮಿಗಳ ಹಾಗು ಚಿತ್ರದುರ್ಗ ಬೃಹನ್ಮಠದ ಜಗದ್ಗುರು ಶ್ರೀ ಮ ನಿ ಪ್ರ. ಸ್ವರೂಪಿ ಮುರುಘರಾಜೇಂದ್ರ ಮಹಾಸ್ವಾಮಿಗಳ ಉಡ್ಡಪಲ್ಲಕ್ಕಿ ಮಹೋತ್ಸವಗಳು ನಡೆಯುತ್ತವೆಂಬ ವಾರ್ತೆಯನ್ನು ಬಾಸಿ ವೀರಶೈವ ಗರ್ಜನಾ ಪತ್ರಿಕೆಯಿಂದ ತಿಳಿದುಕೊಂಡ ವೀರಶೈವ ಜನತೆಗೆ ಅಪರಿಮಿತ ಆನಂದವಾಗಿದೆ. ಇದು ಬಸವಕಲ್ಯಾಣದ ಹಿನ್ನೆಲೆಯನ್ನು ವಿಸ್ತೃತಗೊಳಿಸಿದ್ದಲ್ಲದೆ ವೀರಶೈವಸಾಮ್ರಾಜ್ಯನಿರ್ಮಾತೃವನ್ನೂ, ಏಕತೆಯನ್ನೂ ಕಾಪಾಡಿ ಬಸವೇಶ್ವರನ ಗುರುಭಕ್ತಿಯನ್ನು ಪ್ರಕಾಶಪಡಿಸಿರುತ್ತದೆ. ಇಂಥ ಉತ್ಸವಗಳು ವೀರಶೈವ ಸಮಾಜದಲ್ಲಿ ಜಾಗೃತ್ಯವೆಂದು ಬೇರೆ ಹೇಳಬೇಕಾಗಿಲ್ಲ

ಪಟ್ಟಾಧಿಕಾರದ ರಜತಮಹೋತ್ಸವ ಮುರಬ

ಈ ಮುಂದೆ ಪ್ರಕಟವಾಗಿರುವಂತೆ ಮೇಲ್ಕಂಡ ಕಾರ್ಯಕ್ರಮವು ಅತ್ಯಂತ ವೈಭವಯುಕ್ತವಾಗಿ ನೆರವೇರಿತು. ಯುಗಾದಿಯಲ್ಲಿ ನಾಟ್ಯ ಸಮ್ಮೇಳನ ಶಿವಾನುಭವ ಸಮ್ಮೇಳನಾದಿ ನಡೆದವು. ಶ್ರೀಜಗದ್ಗುರು ಪಂಚಾಚಾರ್ಯ ಮಂದಿರಪ್ರಾಣ ಕ್ರಮವು ಅತಿ ಪುರಾತನ ಕಾಲವಾಗಿರುತ್ತ ತಾ ೨೦-೨-೫೭ ರಲ್ಲಿ ಉದಯಕ್ಕೆ ಗುರುಮೂರ್ತಿಗಳ ಪ್ರತಿಷ್ಠಾಪನೆ ಪೂರ್ವಕ ಜೊತೆ ಶೃಂಗಾರಿಸಿದ ವೃಷಭಗಳನ್ನು ಹೂಡಿದ ತೇರಿನಲ್ಲಿ ಉತ್ಸವಾರೋಹಣ ವೈಭವದಿಂದ ಸಾಗಿತು. ನಾನಾವಿಧ ವಾದ್ಯಗಳು ಮೊಳಗುತ್ತಿದ್ದವು ತಾ॥ ೫-೫-೫೭ ರ ಸಾಯಂಕಾಲ ಪೀಠಾರೋಹಣ ವಿಧಿಯು ಜರುಗಿತು. ನಾಡಿನ ನಾಲ್ಕೂ ನಿಟ್ಟಿನ ಸದ್ಭಕ್ತರು ಕಾಣಿಕಾಸಮರ್ಪಣೆ ಗೈದರು. ಸಂಗೀತ ಆಯುರ್ವೇದ ರಸಶಾಲಾ ಒಡೆಯರಾಗಿ ಪೂ॥ ಕಾಶೀನಾಥಶಾಸ್ತ್ರಿಗಳವರು ಪೂಜ್ಯ ಶ್ರೀ ಬಾಲಬೃಹಸ್ಪತಿ ಗಂಗಾಧರಶಿವಾಚಾರ್ಯ ಮಹಾಸ್ವಾಮಿಗಳವರ ಸಾಹಸಮಯವಾದ ಜೀವನ ಪರಿಚಯವನ್ನು ಮಾಡಿಕೊಟ್ಟರು. ತದನಂತರ ಅವರ ಕಲಾಪ್ರದರ್ಶನವಾಗಿ ಶ್ರೀ ಪೂಜ್ಯರ ಪಂಡಿತರ ಉಪದೇಶವಾಯಿತು. ಆಮೇಲೆ ಶ್ರೀ ಸ್ವಾಮಿಗಳವರು ಲಿಂಗಜೀವನ ಹಾಗು ಸದ್ಗುರುವಿನ ಅವಶ್ಯಕತೆ ಬಗ್ಗೆ ನಿರೂಪಿಸಿದರು. ಬಂದ ಜನರಿಗೆ ವಸತಿ ಹಾಗು ಪ್ರಸಾದ ವ್ಯವಸ್ಥೆ ಸರಿಯಾಗಿ ನೂಡಲ್ಪಟ್ಟಿತು. ಮರಬದ ಸಕಲ ಸದ್ಭಕ್ತರು ಈ ಮಂಗಲಕಾರ್ಯಕ್ಕೆ ತನು-ಮನ-ಧನಗಳಿಂದ ಸೇವಿಸಿ ಧನ್ಯರಾದರು. ಒಟ್ಟಾರೆ ಈ ಕಾರ್ಯಕ್ರಮವು ಸ್ಮರಣೀಯವಾಗಿ ಅದರ್ಶವಾಗಿ ಕೊನೆಗಂಡು ಜನತೆಯಲ್ಲಿ ಧರ್ಮಾಭಿಮಾನವನ್ನುಂಟುಮಾಡಿತು ಜಗದಾಚಾರ್ಯರು ಭಾಗಿಗಳಾದ ಸರ್ವರಿಗೂ ಸುಖವನ್ನುಂಟುಮಾಡಲೆಂದು ಬೇಡುವ.

ಓರ್ವ ಕಾರ್ಯಭಾಗಿ ಮುರಬ.

ಪುಣ್ಯತಿಥಿ ಮಹೋತ್ಸವ

ಧಾರವಾಡಜಿಲ್ಲಾ ಬಂಕಾಪುರ ಅರಳೆಲೆಮಠದ ವೇ॥ ಗುರುಸಾದಯ್ಯನವರು ತಮ್ಮ ವಯಸ್ಸಿನ ೬೭ನೇ ವರ್ಷದಲ್ಲಿ ಅಂದರೆ ತಾ॥ ೬-೪-೫೬ ಈ ದಿವಸ ಶಿವೈಕ್ಯರಾಗಿದ್ದಮೂಲಕ ಅವರ ವಾರ್ಷಿಕ ಪುಣ್ಯತಿಥಿಯನ್ನು ಅವರ ಪುತ್ರರಾದ ವೈದ್ಯಪಂಡಿತ ಶ್ರೀ ಸಿದ್ಧಲಿಂಗಶಾಸ್ತ್ರಿಗಳವರು ತಾ॥ ೧೦-೪-೫೭ ನೇ ದಿವಸ ವಿಧ್ಯುಕ್ತವಾಗಿ ನೆರವೇರಿಸಿದರು. ವಯೋವೃದ್ಧರೂ ಜ್ಞಾನವೃದ್ಧರೂ ಆಚಾರಶೀಲರೂ ಆಗಿದ್ದ ಶ್ರೀ ಗುರು ಸಾದಯ್ಯನವರ ಸ್ಮರಣೆಯು ಪ್ರತಿಯೊಬ್ಬರ ಬಾಯಿಂದ ಪಠಿಸುತ್ತಲೇ ಶಿವಪೂಜೆ-ಗಣಾರಾಧನೆಯೊಂದಿಗೆ ಪುಣ್ಯತಿಥಿಯು ಮುಕ್ತಾಯಗೊಂಡಿತು. ನೆರೆದ ಬಂಧು ಬಾಂಧವರಿಂದಲೂ ಗುರುವರ್ಗದ ಮಾಹೇಶ್ವರರಿಂದಲೂ ಅವರ ಆತ್ಮಕ್ಕೆ ಶಾಂತಿಯನ್ನು ಕೋರಲಾಯಿತು.

ಕಾರ್ಯಭಾಗಿ.

ಸಾದರ ಸ್ವೀಕಾರ

ಶ್ರೀ ಜ. ಭೀ. ಬುಕ್ಕಣ್ಣನವರ ಇವರ ಸಂಪಾದಕತ್ವದಲ್ಲಿ ಹೊರಟ ಗದಗಿನ ವಿಶ್ವಬಂಧು ಮಾಸಿಕ ಪತ್ರಿಕೆಯ ಮೊದಲನೇ ಸಂಚಿಕೆಯು ನಮ್ಮ ಕೈಸೇರಿದೆ ಇದು ತನ್ನದೇ ಆದ ವೈಶಿಷ್ಟ್ಯದಿಂದ ಕೂಡಿ ಜ್ಞಾನಾರೂಢ ತತ್ವವನ್ನು ಪ್ರಕಾಶಪಡಿಸಲು ಉದಯಿಸಿರುವುದು ಬಹಳ ಸಂತೋಷವೇ ಸರಿ? ಆದರೆ ಆತ್ಮವಿಚಾರ ಪತ್ರಿಕೆಯಂತೆ ಜಾತಿ-ಪಂಥಗಳ ಹಾಗು ಸ್ವಾನಮಾನಗಳ ಸೆಳವಿಗೆ ಬೀಳದೆ ತನ್ನ ಜ್ಞಾನಾರೂಢ ತತ್ವವನ್ನು ವಿಶ್ವಕ್ಕೆಲ್ಲ ತೋರಿಕೊಟ್ಟು ವಿಶ್ವಬಂಧು ಎಂಬ ನಾಮವನ್ನು ಸಾರ್ಥಕಗೊಳಿಸಲೆಂದು ಆಶಿಸುತ್ತೇವೆ

ಸಂಚಾರಿಯ ಸರಸವಾಣಿ

ವಿಶಾಲ ಮೈಸೂರಿಗೆ ಶ್ರೀ ನಿಜಲಿಂಗಪ್ಪನವರು ಮುಖ್ಯಮಂತ್ರಿಗಳಾಗಿರುವುದೂ ಉಭಯ ಜಗದ್ಗುರುಗಳು ಬಸವಕಲ್ಯಾಣಕ್ಕೆ ಆಗಮಿಸುತ್ತಿರುವುದೂ ಬಸವ ಸರ್ಕಾರದ ಮುನ್ಸೂಚನೆಯೆಂಬ ಕೆಲವರು ಆಡಿಕೊಳ್ಳುತ್ತಿರುವುದು ನಿಜವಿರಬಹುದೇನು? ಹಾಗಾದರೆ ನಿಜಲಿಂಗಪ್ಪನವರು ಬಸವಣ್ಣನವರ ವಿಶ್ವಧರ್ಮವನ್ನು ಅನುಸರಿಸಬೇಕಲ್ಲವೆ?

* * *

ಆಳುತ್ತಿರುವ ಕಾಂಗ್ರೆಸ್ ಸರಕಾರವು ಜಾತಿ-ಮತಗಳ ಭಾವನೆಯನ್ನು ಅಳಿಯಬೇಕೆಂದು ಸಾರುತ್ತಿರುವಾಗ ಚಿತ್ರದುರ್ಗ ಜಿಲ್ಲೆಯಲ್ಲಿ ಅದು ವಿಶೇಷವಾಗಿ ತಲೆಯೆತ್ತಿರುವುದನ್ನು ಮುಖ್ಯಮಂತ್ರಿಗಳು ಮಟ್ಟ ಹಾಕಲು ಸಿದ್ಧರಾಗಬಹುದೇನು?

* * *

ವಿಜಾಪುರ ಜಿಲ್ಲಾ ಲಚ್ಯಾಣದಲ್ಲಿ ನಡೆದ ಯಾತ್ರಾ ಮಹೋತ್ಸವದಲ್ಲಿ ಶ್ರೀ ಬಂಥನಾಳಸ್ವಾಮಿಗಳವರು ಧರ್ಮದ ಬಗ್ಗೆ ಕಳಕಳಿಯುಳ್ಳ ಭಾಷಣ ಮಾಡುತ್ತ ಯಾವಾಗಲೂ ಹಳೇದನ್ನೇ ಅವಲಂಬಿಸಿ ಹೊಸ ವಿಚಾರಗಳೊಡನೆ ಇರಬೇಕೆಂದು ಹೇಳಿದರಂತೆ? ಹಾಗಾದರೆ ಇವರು ಹಳೆಯದಾದ ವೀರಶೈವದ ಸ್ವಾಚೀನತ್ವವನ್ನು ಒಪ್ಪಿ ಹೊಸದಾದ ವಚನಧರ್ಮದೊಡನೆ ಇರಬಹುದಲ್ಲವೆ?

* * *

ಹರಿಭಕ್ತಳಾದ ಮೀರಾಬಾಯಿಯು ತನ್ನ ರಾಜ ಭೋಗವನ್ನೆಲ್ಲಾ ಹರಿಮಂದಿರಗಳಿಗೆ ವಿನಿಯೋಗಿಸಿ ಹರಿಭಜನೆಯಲ್ಲಿಯೇ ಕಾಲಕಳೆದಂತೆ ಹರಭಕ್ತರಾದ ಶ್ರೀಬಂಥನಾಳ ಶಿವಯೋಗಿಗಳು ತಮಗೆ ನೇರಿರುವ ಹತ್ತಾರುಲಕ್ಷ ರೂಪಾಯಿಯ ಆಸ್ತಿಯನ್ನು ಶಿವಾನುಭವ ಮಂಟಪಗಳಿಗೆ ವಿನಿಯೋಗಿಸಿ ಸದಾ ಶಿವಧ್ಯಾನದಲ್ಲಿ ಕಾಲಕಳೆಯುವದು ಯೋಗ್ಯವಲ್ಲವೆ?

* * *

ವೀರಸಿಂಹಾಸನದ ಜಗದ್ಗುರು ಎಂಬ ಹೆಸರಿನಿಂದ ಮೆರೆಯುತ್ತಿರುವವರಿಂದ ರಂಭಾಪುರೀ ಪೀಠವೂ ಸದ್ಧರ್ಮಸಿಂಹಾಸನದ ಜಗದ್ಗುರು ಎಂಬ ಹೆಸರಿನಿಂದ ಮೆರೆಯುತ್ತಿರುವವರಿಂದ ಉಜ್ಜಯನೀ ಪೀಠವೂ ಸೂರ್ಯಸಿಂಹಾಸನದ ಜಗದ್ಗುರು ಎಂಬ ಹೆಸರಿನಿಂದ ಮೆರೆಯುತ್ತಿರುವವರಿಂದ ಶ್ರೀಶೈಲಪೀಠವೂ ಅನ್ಯಾಕ್ರಾಂತವಾಗುವ ಮಾರ್ಗದಲ್ಲಿರುತ್ತವೆಯೆಂಬುದು ಅಲ್ಲಿಯ ಅಧಿಕಾರಿಗಳ ಗಮನಕ್ಕೆ ಬಂದಿರಬಹುದೇನು?

* * *

ಮಳೆಹೋದಾಗ್ಗೆ ಕೊಳಚೆ ಪ್ರದೇಶದ ಹುಲ್ಲು ಪಾವನವಾಗುವಂತೆ ಗುರು ವಿರಕ್ತರ ತಾಳಲಾಟದಲ್ಲಿ ಕೊಳ್ಳೇಹೊಡೆಯುವ ಜಗದ್ಗುರುಗಳು ಉದಯವಾಗಿರುವುದರಲ್ಲಿ ಆಶ್ಚರ್ಯವೇನಿಲ್ಲವಷ್ಟೇ?

ಚಂದಾದಾರರಲ್ಲಿ ವಿಜ್ಞಾಪನೆ

ಹೊಸ ನಾಣ್ಯ ಪದ್ಧತಿಯಿಂದಾಗಿ ನಮ್ಮ ಪತ್ರಿಕೆಗಳನ್ನು ಪ್ರತಿವಾರ ರವಾನಿಸುವ ಪೋಷ್ಟ ಖರ್ಚು ೩ ಪೈಯಿಂದ ೪ ಪೈಗೆ ಏರಿರುವುದರಿಂದಲೂ ಕಾಗದದ ಬೆಲೆ ಹೆಚ್ಚಿರುವುದರಿಂದಲೂ ಇನ್ನು ಮುಂದೆ ವಾರ್ಷಿಕ ವರ್ಗಣಿಯನ್ನು ಅನಿವಾರ್ಯವಾಗಿ ೩ ರೂ. ೫೦ ನಯೆ ಪೈಸೆಗಳಿಗೆ ಹೆಚ್ಚಿಸಲಾಗಿದೆ. ವಿ. ಪಿ. ಯಿಂದ ತರಿಸುವವರಿಗೆ ೪ ರೂ. ಬೀಳುವದು.

ಲಿಂಗೋದ್ಭವಮೂರ್ತಿಗಳು

ವೀರಶೈವ ಮತಸ್ಥಾಪಕರಾದ ಶ್ರೀಜಗದ್ಗುರು ಪಂಚಾಚಾರ್ಯರು ಲಿಂಗೋದ್ಭವರಾಗಿ ಅವತರಿಸಿದ ಮೂರ್ತಿಗಳನ್ನು ಕೆಳಕಂಡ ಪ್ರಕಾರ ಪಂಚಲೋಹದ ಎರಕದಲ್ಲಿ ಅಂದವಾಗಿ ತಯಾರಿಸಲಾಗಿದೆ. ವೀರಶೈವರಿಗೆ ಪರಮಪೂಜ್ಯರಾದ ಶ್ರೀಜಗದ್ಗುರುಗಳ ಈ ಮೂರ್ತಿಗಳು ಪ್ರತಿಯೊಬ್ಬರ ಮನೆಯಲ್ಲಿ ಪೂಜೆಗೊಳ್ಳುವುದು ಸರ್ವಶ್ರೇಷ್ಠವೂ ಮೋಕ್ಷಪ್ರದವೂ ಆಗಿರುವುದರಿಂದ ಸರ್ವರೂ ಇವುಗಳನ್ನು ತರಿಸಿಕೊಂಡು ಪೂಜಿಸಿ ಧನ್ಯರಾಗಲಿ.

೪ ಇಂಚು ಎತ್ತರದ ಮೂರ್ತಿ ೬೦ ರೂ.
೪ ಇಂಚು ,, ,, ೧೮ ರೂ.
ಬೆಳ್ಳಿ ಲಾಕೆಟ್ಟು ಒಂದಕ್ಕೆ ೧ ರೂ. ೨೫ ಪೈಸೆ

ಮ್ಯಾನೇಜರ್
ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್,
ಮೈಸೂರು.

ಸಿದ್ಧಾಂತಶಿಖಾಮಣಿ

(ಕನ್ನಡ ಟೀಕಾಸಹಿತ)

ವೀರಶೈವ ಮತಕ್ಕೆ ಆಧಾರಭೂತವಾಗಿ ಕೈವಲ್ಯಕಲ್ಪತರುವಿನಂತಿರುವ ಈ "ಸಿದ್ಧಾಂತಶಿಖಾಮಣಿ" ಎಂಬ ಗ್ರಂಥವು ಬಹು ಪುರಾತನವಾದುದು. ಈ ಗ್ರಂಥವು ಸುಮಾರು ಎರಡುಸಾವಿರ ವರ್ಷಗಳ ಪೂರ್ವದಲ್ಲಿದ್ದ ಶ್ರೀ ಶಿವಯೋಗಿಶಿವಾಚಾರ್ಯರಿಂದ ಆಚಾರ್ಯರಿಂದ ರಚಿಸಲ್ಪಟ್ಟಿದ್ದು ದೇವನಾಗರಿಲಿಪಿಯಲ್ಲಿದ್ದಿತು. ಅದಕ್ಕೆ ಅನೇಕರು ಅನೇಕವಿಧವಾಗಿ ವ್ಯಾಖ್ಯಾನಗಳನ್ನು ಬರೆದಿರುತ್ತಾರೆ. ಸೂಢಾರ್ಥಗರ್ಭಿತವಾದ ಆ ಶ್ಲೋಕಗಳಿಗೆ ಸರಿಯಾದ ಅರ್ಥವು ಯಾರ ವ್ಯಾಖ್ಯಾನಗಳಲ್ಲಿಯೂ ಬರೆಯಲ್ಪಟ್ಟಿಲ್ಲವೆಂಬುದನ್ನು ಮನಗಂಡ ಶ್ರೀ॥ ಪಂಡಿತ ಶ್ರೀಕಾಶೀನಾಥಶಾಸ್ತ್ರಿಗಳವರು ಬಹು ಶ್ರಮವಹಿಸಿ ಈ ಗ್ರಂಥಕ್ಕೆ ಕನ್ನಡ ಭಾಷೆಯಲ್ಲಿ ಬಹು ಸರಳವಾದ ವ್ಯಾಖ್ಯಾನವನ್ನು ರಚಿಸಿ ಸಮಸ್ತ ವೀರಶೈವರ ಕೃತಜ್ಞತೆಗೆ ಪಾತ್ರರಾಗಿದ್ದಾರೆ. ಮೂರುನೂರು ಪುಟಗಳ ಮೇಲ್ಪಟ್ಟು ಗಿರುವ ಈ ಗ್ರಂಥದಲ್ಲಿ ಸಂದರ್ಭಾನುಸಾರವಾಗಿ ಶ್ರೀ ಜಗದ್ಗುರು ರೇಣುಕಾಚಾರ್ಯರ ಲೀಲಾಲೋಢಳವಾದ ಮನೋಹರ ಭಾವಚಿತ್ರಗಳು ಹೊಡಿಸಲ್ಪಟ್ಟಿರುವುದರಿಂದ ಗ್ರಂಥದ ಸೌಂದರ್ಯವು ವರ್ಣನಾತೀತವಾಗಿದೆ. ಸದರ ಗ್ರಂಥದ ಎರಡನೇ ಮುದ್ರಣವು ಪಂಡಿತರ ಸಹೋದರರಾದ ವೇ॥ ಬ್ರ॥ ಮಹಾದೇವಯ್ಯನವರಿಂದ ಮುದ್ರಿಸಲ್ಪಟ್ಟಿರುತ್ತಾಶಿತವಾಗಿದೆ. ಈ ಅಮೂಲ್ಯ ಗ್ರಂಥವನ್ನು ಸರ್ವರೂ ತರಿಸಿ ಓದಿ ಫಲಭಾಗಿಗಳಾಗಲೆಂಬ. ಬೆಲೆ 2 ರೂ. 50 ನೈಪೆ

ಮ್ಯಾನೇಜರ್—
ಶ್ರೀಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್,
ಮೈಸೂರು.

Editor, Printed and Published by Brahmanmathadhyakshe Sri Mahadevaiah at Sri Panchacharya Electric Press, Sayaji Rao Road, Mysore